(c) 15.
(d) Only one.
(e) No specific requisition has been received for electrification of Bandipura Village.

Regarding the other villages, service could be arranged if adequate budget grants are provided and the estimates are sanctioned.

Request to expedite answers to the remaining questions.

Mr. SPEAKER.—I would like to bring to the notice of the House and particularly the Leader of the House that there are still as many as 118 questions for which answers have to be supplied. For tomorrow's business the office has received answers for only five questions, and there still remain 113 questions requiring to be answered. I think Government should expedite sending answers.

Sri A. G. RAMACHANDRA RAO (Minister for Law and Education).—I have informed the Secretariat to secure replies early and send them to Hon'ble Speaker.—

Sri S. SRINIVASA IYENGAR (T. Narsipur).—According to the programme for today there are 86 cut motions and even to read each we want one minute.

Mr. SPEAKER.—I have not come to that.

Announcement of the Result of Election to the Board of Industries.

Mr. SPEAKER.—The Chair desires to announce that in connection with the election to the Board of Industries, as the number of candidates is equal to the number of places to be filled up, the following members are declared elected and consequently there will be no election between 3 P. M. and 5 P. M. today as already announced.

Sri B. Hutche Gowda,
Sri B. Y. Neele Gowda,
Sri A. Bheemappa Naik.

Mysore Court Fees (Amendment) Bill, 1952.

Presentation of Select Committee Report.

Sri A. G. RAMACHANDRA RAO (Minister for Law and Education).—Sir, I present the report of the Select Committee on the Mysore Court Fees (Amendment) Bill, 1952. Copies of the Report will be distributed to Members during the course of the day.

BUDGET FOR 1952-53—DEMANDS FOR GRANTS.—(*contd.*)

SECOND STAGE—(*contd.*)

Demand No. 21—Agriculture.

40. Agriculture (except Botanical and other Public Gardens).

Mr. SPEAKER.—Motion moved :

"That a sum not exceeding Rs. 32,66,200 be granted to the Government to complete the sum necessary to defray the charges which will come in course of payment during the year ending 31st day of March 1953, in respect of Agriculture (Except Botanical and other Public Gardens)."

Sri S. SRINIVASA IYENGAR.—On a point of order, Sir.

Mr. SPEAKER.—The Hon'ble Member can raise the point after I indicate the numbers of the cut motions agreed to be taken up today. There are many cut motions. By an understanding, the following cut motions are agreed to be taken up.

Sl. Nos. 1, 2, 3, 4, 5, 11, 17, 25, 26, 27, 33, 38, 43, 46, 47 and 49.

Does Sri Srinivasa Iyengar intend to say anything ?

Janab J. MOHAMED IMAM (Jagalur).—I just want to submit, and hat is also the feeling of some Members here Sir, that taking the number of cut motions into consideration, the time allotted is very short. We want to ascertain from the Leader of the House if the time for moving cut motions and

(JANAB J. MOHAMED IMAM.)

voting on the demands for grants could be extended. The same request was made by me in the beginning also. If it is not possible, I just want to bring to your notice the inadequacy of the time allotted for covering all the demands and the cut motions.

Mr. SPEAKER.—The other day the Leader of the House was not agreeable for extending the time.

Janab J. MOHAMED IMAM.—He was not agreeable. But I am making another representation.

Mr. SPEAKER.—For the first time, largest number of days is allotted for this purpose. So far only four days have passed by. Besides the Leader of the House is not agreeable.

Sri S. SRINIVASA IYENGAR.—On a point of order, Sir. So far as the demand under "Industries and Supplies" is concerned no cut motions seem to have been selected.

Mr. SPEAKER.—The cut motions agreed to be taken up, have been announced by me already.

Supply of Bulldozers for raiyats' use in Mandya District.

ಶ್ರೀ ಬಿ. ಪಿ. ನಾಗರಾಜಮೂರ್ತಿಯವರು (ಮಳವಳ್ಳಿ).—ಮಾನ್ಯ ಅಧ್ಯಕ್ಷರೇ,

"ಮಂಡ್ಯ ಡಿಸ್ಟ್ರಿಕ್ಟ್‌ನಲ್ಲಿ ರೈತರ ಉಪಯೋಗಕ್ಕಾಗಿ, ನ್ಯಾಯವಲ್ಲದ ಮತ್ತು ಯುಕ್ತವಲ್ಲದ ರೀತಿಯಲ್ಲಿ ಬುಲ್ಡೋಜರುಗಳನ್ನು ಒದಗಿಸಿರುವ ವಿಷಯವನ್ನು ಕುರಿತು ಚರ್ಚೆ ಮಾಡುವುದಕ್ಕಾಗಿ 40. ವ್ಯವಸಾಯ (ಬೊಟ್ಯಾನಿಕಲ್ ಮತ್ತು ಇತರ ಸರ್ಕಾರಿ ಉದ್ಯಾನವನಗಳನ್ನು ಬಿಟ್ಟು) ಎಂಬ ಬಾಬಿನಲ್ಲಿ ಕೋರಿರತಕ್ಕ 32,66,200 ರೂಪಾಯಿಗಳ 'ಡಿಮ್ಯಾಂಡ್' ಮನವಿಯ ಸಂಬಂಧದಲ್ಲಿ 100 ರೂಪಾಯಿಗಳನ್ನು ಕಡಮೆ ಮಾಡಬೇಕು" ಎಂಬ ಖೋತಾ ನಿರ್ಣಯವನ್ನು ಮಂಡಿಸುತ್ತೇನೆ.

ಸ್ವಾಮಿ, ಈ ಬುಲ್ಡೋಜರುಗಳ ವಿಷಯದಲ್ಲಿ ಎರಡು ಪ್ರಶ್ನೆಗಳು ಬಂದ ಸಂದರ್ಭದಲ್ಲಿ ಅನೇಕ ಉಪ ಪ್ರಶ್ನೆಗಳನ್ನು ಕೇಳಿ ಇವುಗಳ ವಿತರಣೆಯನ್ನು ಕ್ರಮವಾದ ರೀತಿಯಲ್ಲಿ ಅನುಸರಿಸಬೇಕೆಂಬುದನ್ನು ಸದಸ್ಯರು ಸರ್ಕಾರದ ಗಮನಕ್ಕೆ ತಂದಿದ್ದಾರೆ. ನನ್ನ ಖೋತಾನಿರ್ಣಯ ಮಂಡ್ಯ ಜಿಲ್ಲೆಯವರಿಗೆ ಸಂಬಂಧಪಟ್ಟದ್ದು. ಮಂಡ್ಯ ಜಿಲ್ಲೆಯಲ್ಲಿ ಯಾವ ರೀತಿ ಅಸಮರ್ಪಕವಾಗಿದೆಯೆಂಬುದನ್ನು ಸರ್ಕಾರದವರ ಗಮನಕ್ಕೆ ತರಲು ಈ ಖೋತಾನಿರ್ಣಯವನ್ನು ತಂದಿದ್ದೇನೆ. ಹೆಚ್ಚು ಆಹಾರ ಬೆಳೆದು ದೇಶಕ್ಕೆ ಪ್ರಯೋಜನವಾಗಲಿ ಎನ್ನುವ ಒಂದು ಘನೋದ್ದೇಶದಿಂದ ಬುಲ್ಡೋಜರುಗಳನ್ನು ಪ್ರತಿ ಜಿಲ್ಲೆಗೂ ಕೂಡ ಸರ್ಕಾರದವರು ಒದಗಿಸಿರುತ್ತಾರೆ. ಆದರೆ ಬುಲ್ಡೋಜರುಗಳ ವಿತರಣೆಯಲ್ಲಿ ಸರಿಯಾದ ಒಂದು ನೀತಿ ಅಥವಾ ಒಂದು ಕ್ರಮ ಅನುಸರಿಸಿಲ್ಲ. ಯಾವ ಒಂದು ಘನೋದ್ದೇಶದಿಂದ ಒದಗಿಸಿದ್ದೀರೋ ಈ ಉದ್ದೇಶ ಈಡೇರುವುದಕ್ಕೆ ಸರಿಯಾದ ನೀತಿಯನ್ನು ಅನುಸರಿಸುತ್ತಾ ಇಲ್ಲ. ಈಗಾಗಲೇ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಂತೆ ಅನೇಕ ಸಂದರ್ಭಗಳಲ್ಲಿ ಬುಲ್ಡೋಜರುಗಳನ್ನು ಯಾವ ರೈತರಿಗೆ ಕೊಟ್ಟರೂ ಆವಶ್ಯಕತೆ ಪೂರೈಸುವವರೆಗೂ ಅವನಲ್ಲೇ ಇರುತ್ತದೆ ಎಂದು ಹೇಳಿದ್ದಾರೆ. ಆದರೆ ಜಿಲ್ಲಾ ವ್ಯವಸಾಯದ ಅಧಿಕಾರಿಗಳ ಹತ್ತಿರ ಈ ವಿಷಯವನ್ನು ತಿಳಿಯುವುದಕ್ಕೆ ಹೋದಾಗ ಒಂದು ತಾಲ್ಲೂಕಿಗೆ 71 ಘಂಟೆಗೆ ಮೇಲೆ ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಉತ್ತರ ಪಡೆಯುತ್ತಾ ಇದ್ದೇವೆ. ಎಪ್ಪತ್ತೊಂದು ಘಂಟೆ ಒಂದೊಂದು ತಾಲ್ಲೂಕಿಗೆ ಕೊಟ್ಟರೆ ಸುಮಾರು 15-20 ಎಕರೆ ಇರತಕ್ಕ ಒಬ್ಬ ರೈತ ಜಮೀನು ಆಬಾದು ಮಾಡುವುದಕ್ಕೆ ಬುಲ್ಡೋಜರ್ ತೆಗೆದುಕೊಂಡಾಗ ಅವನೊಬ್ಬನಿಗೇ ಸಾಕಾಗದಿರುವಾಗ ನೂರಾರು ಜನ ಬುಲ್ಡೋಜರಿನ ಉಪಯೋಗ ಪಡೆದುಕೊಳ್ಳಬೇಕೆಂದರೆ, ಅಂಥಾ ಸಂದರ್ಭದಲ್ಲಿ ಅವರ ಪರಿಸ್ಥಿತಿ ಏನಾಗುತ್ತದೆಯೆಂಬುದನ್ನು ಸರ್ಕಾರದವರು ಸ್ವಲ್ಪ ಆಲೋಚನೆ ಮಾಡಬೇಕು. ಬುಲ್ಡೋಜರ್‌ನ ವಿತರಣೆಗೆ ಸಂಬಂಧ

ಪಟ್ಟಂತೆ ಕೆಲವು ಸಮಿತಿಗಳಿವೆ ಎಂದು ಆಗಲೇ ಸಭೆಯ ಗಮನಕ್ಕೆ ಬಂದಿದೆ. ಆ ಜಿಲ್ಲೆಯಲ್ಲಿ ನಾವು ತಿಳಿದಿರುವಂತೆ ಟ್ರಾಕ್ಟರ್ ಸಮಿತಿ ಎಂಬುದನ್ನು ಕೇಳಿದ್ದೇವೆ. ಬುಲ್ಡೋಜರ್‌ಗೆ ಸಂಬಂಧಪಟ್ಟಂತೆ ಯಾವ ಸಮಿತಿ ಇರುವುದನ್ನೂ ಕೇಳಿಲ್ಲ. ಮತ್ತು ಅಂಥಾ ಸಮಿತಿಗಳವರು ಯಾವ ಸಂದರ್ಭದಲ್ಲೂ ಸೇರಿಲ್ಲ. ವಿತರಣೆಯ ವಿಷಯದಲ್ಲಿ ಯಾವ ಕ್ರಮವನ್ನೂ ನಿರ್ಧರ ಮಾಡಿರುವುದು ನಮ್ಮ ಗಮನಕ್ಕೆ ಬಂದಿಲ್ಲ.

ಈ ಬುಲ್‌ಡೋಜರುಗಳನ್ನು ಜಿಲ್ಲಾ ವ್ಯವಸಾಯ ಮುಖ್ಯಾಧಿಕಾರಿಗಳು ವಿತರಣೆ ಮಾಡುವಾಗ ನಿರ್ವಂಚನೆಯಿಂದ, ನಿಷ್ಪಕ್ಷಪಾತ ದೃಷ್ಟಿಯಿಂದ ಸರಿಯಾಗಿ ನಡೆದುಕೊಳ್ಳುತ್ತಿಲ್ಲವೆಂಬ ಅಂಶವನ್ನು ಸರ್ಕಾರದವರ ಗಮನಕ್ಕೆ ತರುತ್ತೇನೆ. ಇದಕ್ಕೆ ಎರಡು ಕಾರಣಗಳುಂಟು. ಬುಲ್‌ಡೋಜರುಗಳನ್ನು ವಿತರಣೆ ಮಾಡುವ ಅಧಿಕಾರಿಗಳ ಮನೋದೌರ್ಬಲ್ಯ ಮತ್ತು ದಾಕ್ಷಿಣ್ಯ ಪ್ರವೃತ್ತಿ ಒಂದು ಕಾರಣ. ಎಷ್ಟೋ ಸಂದರ್ಭಗಳಲ್ಲಿ ಅವಿದ್ಯಾವಂತರಾದ ರೈತರುಗಳು ಲಿಖಿತ ಮೂಲಕವಾಗಿ ಅರ್ಜಿಗಳನ್ನು ಕೊಡುವುದಕ್ಕೆ ಬದಲು 20-30 ಮೈಲಿಗಳಿಂದ ಗುಂಪು ಗುಂಪಾಗಿ ಬಂದು ಬಾಯಲ್ಲಿ ಮನವಿ ಮಾಡಿಕೊಂಡಾಗ್ಗೂ ಆ ಮನವಿಗಳನ್ನು ಧಿಕ್ಕರಿಸಿ ಇಷ್ಟೇ ಅರ್ಜಿಗಳು ಬಂದದ್ದು, ಇಷ್ಟು ಕೊಟ್ಟಿದ್ದೇವೆಂದು ಹೇಳುವುದು ಸೂಕ್ತವಲ್ಲ. ಅರ್ಜಿಗಳು ಬಂದಿದ್ದರಲ್ಲೂ ಯಾವ ಅರ್ಜಿ ಮೊದಲು ಬಂತು, ಆ ಅರ್ಜಿಯ ಆವಶ್ಯಕತೆಯೇನಿತ್ತು, ಏಕೆ ಮೊದಲು ಕೊಡಬೇಕಾಗಿದೆಯೆಂದು ವಿವೇಚನೆಯಿಂದ ವಿಷಯ ವಿಮರ್ಶೆ ಮಾಡುತ್ತಿಲ್ಲ. ಇದು ಆ ಅಧಿಕಾರಿಗಳಲ್ಲಿರತಕ್ಕ ಒಂದು ನ್ಯೂನತೆ.

ಇನ್ನೊಂದು ಕಾರಣವೇನೆಂದರೆ, ಸಾಮಾನ್ಯವಾಗಿ ಬುಲ್‌ಡೋಜರ್‌ಗಳನ್ನು ಸರ್ಕಾರದ ಅಧಿಕಾರಿಗಳು ವಿತರಣೆ ಮಾಡುವ ಸಂದರ್ಭದಲ್ಲಿ ಕೆಲವು ಖಾಸಗೀ ಮಹನೀಯರು ತಮ್ಮ ರಾಜಕೀಯ ಸ್ಥಾನಮಾನವನ್ನೋ ಅಥವಾ ಸರ್ಕಾರದಲ್ಲಿ ತಮಗಿರುವ ಪ್ರಭಾವವನ್ನೋ ಉಪಯೋಗಿಸಿ ಕೊಂಡು ಕ್ರಮತಪ್ಪಿ, ಅಕ್ರಮವಾದ ರೀತಿಯಲ್ಲಿ ಹೋಗುವಂತೆ ಮಾಡಿ, ನ್ಯಾಯವಾಗಿ ವಿತರಣೆ ಮಾಡುವುದಕ್ಕೆ ಅಡಚಣೆಗಳನ್ನು ತರುತ್ತಿರುವುದು. ಇದೇ ಸಂದರ್ಭದಲ್ಲಿ ಈ ಸಭೆಯ ಮಾನ್ಯ ಸದಸ್ಯರಾದ ಮತ್ತು ನಮ್ಮ ಮಾನ್ಯ ಮಿತ್ರರಾದ ಶ್ರೀಮರ್ಾ ನೀಲೇಗೌಡರ 'ಭಾಷೆಯಲ್ಲಿ ಹೇಳುವುದಾದರೆ, ಜವಾಬ್ದಾರಿ ಸರ್ಕಾರ ಬಂದ ಮೇಲೆ ಪ್ರತಿಯೊಂದು ತಾಲ್ಲೂಕಿನಲ್ಲೂ ಹಳ್ಳಿಹಳ್ಳಿಯಲ್ಲೂ 'Local Ministers' ಸ್ಥಳೀಯ ಮಂತ್ರಿಗಳು ಎಂಬ ಗುಂಪಿನ ಜನರು ಹೆಚ್ಚಾಗಿದ್ದಾರೆ. ಯಾವೊಂದು ಕೆಲಸದಲ್ಲೂ ಸರ್ಕಾರದ ಅಧಿಕಾರಿಗಳಿಗೆ ಅಡ್ಡಿ ಅಡಚಣೆಗಳನ್ನು ತಂದೊಡ್ಡಿ ಅವರು ನಿರ್ವಂಚನೆಯಿಂದ, ಸ್ಥಿರ ಸಂಕಲ್ಪದಿಂದ, ಸ್ಥಿರ ಪ್ರಜ್ಞೆಯಿಂದ ಕೆಲಸ ಮಾಡಲು ಅವಕಾಶಕೊಡದೆ ವಿಘ್ನಗಳನ್ನು ತರುತ್ತಿದ್ದಾರೆ. ಅದನ್ನು ಆದಷ್ಟು ಜಾಗ್ರತೆ ತಪ್ಪಿಸಿದರೆ ಒಳ್ಳೆಯದು. ಇಲ್ಲದಿದ್ದರೆ ಸರ್ಕಾರಕ್ಕೂ ಒಳ್ಳೆಯ ಹೆಸರು ಬರುವುದಿಲ್ಲ ; ದೇಶವೂ ಮುಂದುವರಿಯುವುದಿಲ್ಲ.

ಶ್ರೀ ಜಿ. ಎ. ತಿಮ್ಮಪ್ಪಗೌಡರು (ಅರಕಲಗೂಡು).—ಅಂಥವರಲ್ಲಿ ನೀವೂ ಒಬ್ಬರೋ ?

Sri B. P. NAGARAJA MURTHY.—I think, I need not answer the Hon'ble Member.

Mr. SPEAKER.—Yes, the Member need not answer.

ಶ್ರೀ ಬಿ. ಪಿ. ನಾಗರಾಜ ಮೂರ್ತಿಯವರು.—ಅಂಥವನು ನಾನೋ, ಅಥವಾ ಇನ್ನಾರೊ ಎಂಬುದು ಪ್ರಶ್ನೋತ್ತರಗಳ ಸಂದರ್ಭದಲ್ಲಿ ವ್ಯಕ್ತಪಟ್ಟಿದೆ.

Mr. SPEAKER.—I cannot understand the Hon'ble Member. I have given him a direction that he need not answer. He can continue his speech.

ಶ್ರೀ ಬಿ. ಪಿ. ನಾಗರಾಜಮೂರ್ತಿಯವರು.—ಆದ್ದರಿಂದ ಈ ಎರಡು ಮಹತ್ತರವಾದ ಕಾರಣಗಳಿಂದ ಬುಲ್‌ಡೋಜರುಗಳ ವಿತರಣೆ ಸರಿಯಾಗಿ ನಡೆಯುತ್ತಿಲ್ಲ. ಕೊಟ್ಟರೆ ವರ್ಷಾನುಗಟ್ಟಲೆ ಒಬ್ಬೊಬ್ಬರಿಗೆ ಕೊಡುತ್ತಾರೆ, ಇಲ್ಲದವರಿಗೆ ಇಲ್ಲವೇ ಇಲ್ಲ. ಮಂಡ್ಯ ತಾಲ್ಲೂಕಿನಲ್ಲಿ ಎಷ್ಟೆಷ್ಟು ಜನರು ಅರ್ಜಿಹಾಕಿಕೊಂಡಿದ್ದರು,

(ಶ್ರೀ ಬಿ. ಪಿ. ನಾಗರಾಜಮೂರ್ತಿಯವರು.)
ಅವರ ಆವಶ್ಯಕತೆಗಳನ್ನು ನೋಡಿ ಬುಲ್‌ಡೋಜರುಗಳನ್ನು ಕೊಟ್ಟಿದೆಯೇ, ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಕಾಲ ಕೆಲಸ ಮಾಡಿದೆ, ನಿಷ್ಪಕ್ಷಪಾತವಾಗಿದೆಯೇ ಎಂಬುದನ್ನು ಸರ್ಕಾರದವರು ವಿಮರ್ಶೆ ಮಾಡಿ ಮುಂದೆ ಈ ರೀತಿ ಅನ್ಯಾಯ ನಡೆಯದಂತೆ ಸಕ್ರಮವಾಗಿ ಆವಶ್ಯಕತೆಯಿರುವ ಪ್ರತಿಯೊಬ್ಬ ರೈತನಿಗೂ ಕೊಟ್ಟು ಅವನ ಆವಶ್ಯಕತೆಗಳು ಈಡೇರುವಂತಾಗಲೆಂಬ ಉದ್ದೇಶದಿಂದ ಈ ಖೋತಾ ನಿರ್ಣಯವನ್ನು ತಂದಿದ್ದೇನೆ. ಸರ್ಕಾರದವರು ಈ ವಿಷಯಕ್ಕೆ ಗಮನಕೊಟ್ಟು ಮುಂದೆ ಈ ರೀತಿ ಅಕ್ರಮಗಳಾಗದಿರುವಂತೆ ಮಾಡಬೇಕೆಂದು ಪ್ರಾರ್ಥನೆ.

Mr. SPEAKER.—Cut motion moved:

"That the demand be reduced by Rs. 100."

*ಶ್ರೀ ಕೆ. ವಿ. ಶಂಕರಗೌಡರು (ಮಂಡ್ಯ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಈಗ ಮಾತನಾಡುತ್ತಾ 'Local Ministers' ಕೆಲವರಿದ್ದಾರೆ, ಅವರ ಕೈವಾಡದಿಂದ ಬುಲ್‌ಡೋಜರುಗಳ ವಿತರಣೆ ಅಷ್ಟು ಚೆನ್ನಾಗಿ ನಡೆಯುತ್ತಿಲ್ಲವೆಂದು ಅಭಿಪ್ರಾಯಪಟ್ಟರು. ನಾನು ಆ ಅಭಿಪ್ರಾಯವನ್ನು ತೀವ್ರವಾಗಿ ವಿರೋಧಿಸುತ್ತೇನೆ.

ಮಂಡ್ಯ ಡಿಸ್ಟ್ರಿಕ್ಟಿನ ವಿಚಾರವನ್ನು, ನಾನು ತಿಳಿದುಕೊಂಡಿರುವವುಟ್ಟಿಗೆ ಹೇಳುವುದಾದರೆ, ನಮ್ಮ ಡಿಸ್ಟ್ರಿಕ್ಟಿನಲ್ಲಿ ಅವರು ಹೇಳಿದಂತೆ 'Local Ministers' ಯಾರೂ ಇಲ್ಲ. ಸಾಧ್ಯವಾದಮಟ್ಟಿಗೂ ಅಲ್ಲಿ ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸಮಾಡುವ ಮನುಷ್ಯರುಗಳು ಎಲ್ಲಾ ಜನರ ಕೆಲಸ ಕಾರ್ಯಗಳೂ ಸರಿಯಾಗಿ ನಡೆಯುವುದಕ್ಕೆ ಸಹಕಾರ ನೀಡಿದ್ದಾರೆಯೇ ಹೊರತು, 'ಲೋಕಲ್ ಮಿನಿಸ್ಟರ್' ಗಳಾಗಿ ಸ್ವಜನರೆಂದಾಗಲಿ, ಬಂಧುಗಳೆಂದಾಗಲಿ ಸಹಾಯ ನೀಡಬೇಕೆಂಬ ಮನೋಭಾವದಿಂದ ಕೆಲಸ ಮಾಡುತ್ತಿಲ್ಲವೆಂದು ನಾನು ಘಂಟಾಘೋಷವಾಗಿ ಹೇಳಬಲ್ಲೆ. ಆದರೆ, ಭಿನ್ನಾಭಿಪ್ರಾಯಕ್ಕೆ ಕಾರಣ........

Mr. SPEAKER.—That is enough.

ಶ್ರೀ ಕೆ. ವಿ. ಶಂಕರಗೌಡರು.—ನಾನು controversy ಗೆ ಹೋಗುವುದಿಲ್ಲ.

Mr. SPEAKER.—That will do.

ಶ್ರೀ ಕೆ. ವಿ. ಶಂಕರಗೌಡರು—ಅಲ್ಲಿ ಏನಾಗಿದೆ ಎಂಬುದನ್ನು ನೋಡೋಣ. ಒಂದು ಬುಲ್‌ಡೋಜರು ಒಬ್ಬರ ಹತ್ತಿರ ಸ್ವಲ್ಪಹೆಚ್ಚು ಕಾಲ ಇದ್ದುದರಿಂದ ಅವರು ಆರೀತಿಯಾಗಿ ಅಭಿಪ್ರಾಯ ಪಟ್ಟುಕೊಂಡು ಹೇಳಿರಬಹುದೆಂದು ನಾನು ಭಾವಿಸುತ್ತೇನೆ. ಉದಾಹರಣೆಗೆ, ನನ್ನ ಜಮೀನೇ 10-20 ಎಕರೆಗಳಿದ್ದರೆ ಒಂದು ಬುಲ್‌ಡೋಜರು 15-20 ದಿವಸಗಳಿರುವುದರಲ್ಲೇನೂ ಆಶ್ಚರ್ಯವಿಲ್ಲ. ನಾನೂ ಇತರರಂತೆ ಒಬ್ಬ ಸಾರ್ವಜನಿಕ; ನನ್ನ ಹೊಲವನ್ನೂ ಮಟ್ಟಸ ಮಾಡಬೇಕಾಗಿದೆ. ಅದಕ್ಕಾಗಿ ಬುಲ್‌ಡೋಜರನ್ನು ಅಷ್ಟು ಕಾಲ ನನ್ನಲ್ಲಿಟ್ಟುಕೊಂಡುದರಲ್ಲಿ ದೋಷವೇನೋ ಗೊತ್ತಿಲ್ಲ! ಅಲ್ಲದೆ ಕೆಲವು ವೇಳೆ ಬುಲ್‌ಡೋಜರನ್ನು ತೆಗೆದುಕೊಂಡು ಹೋಗುತ್ತೇವೆ; ಅದು ಅಲ್ಲಿ ಕೆಟ್ಟು ಹೋದರೆ ಸ್ವಲ್ಪ ಹೆಚ್ಚಿಗೆ ಕಾಲ ಇರಲೇಬೇಕಾಗುತ್ತದೆ. ಇದನ್ನೇ ದೊಡ್ಡ ವಾದಮಾಡಿಕೊಂಡು 'ಲೋಕಲ್ ಮಿನಿಸ್ಟರು'ಗಳು ತಮ್ಮ ಪ್ರಭಾವವನ್ನು ಬೀರಿದ್ದಾರೆಂದು ಹೇಳಿದರೆ ಆತ್ಮವಂಚನೆ ಮಾಡಿದ ಹಾಗಾಗುತ್ತದೆ. ನಾನು ದೃಢವಾಗಿ ಹೇಳುತ್ತೇನೆ, ಮಂಡ್ಯ ಡಿಸ್ಟ್ರಿಕ್ಟಿನಲ್ಲಿ ಹಾಗೆ 'ಲೋಕಲ್ ಮಿನಿಸ್ಟರು' ಗಳು ಯಾರೂ ಇಲ್ಲ. ಅಲ್ಲಿನ ಸಾರ್ವಜನಿಕಮುಖಂಡರು ವಿರೋಧ ಪಕ್ಷದಲ್ಲಿರುವವರಿಗೆ ಹೆಚ್ಚು ಸಹಕಾರಿಗಳಾಗಿದ್ದಾರೆಯೇ ವಿನಾ ಸ್ವಪಕ್ಷದವರಿಗೆ ಸಹಕಾರಿಯಾಗಿಲ್ಲವೆಂದು ನಾನು ಹೇಳಬಲ್ಲೆ.

ಶ್ರೀ ಬಿ. ಎಲ್. ಬೋರಣ್ಣಗೌಡರು (ಬೇಲೂರು).—ಮಾನ್ಯ ಅಧ್ಯಕ್ಷರೇ, ಈ ನಿರ್ಣಯದ ಸಂಬಂಧದಲ್ಲಿ ಮಾನ್ಯ ಸೂಚಕರು

*Asterisk indicates that the speech has not been revised by the Member concerned.

ಎತ್ತಿದ ಆರೋಪಣೆಗಳಿಗೆ ನನ್ನ ಮಿತ್ರರಾದ ಶ್ರೀವರ್ಮಾ ಶಂಕರಗೌಡರು ಆಗಲೇ ಉತ್ತರ ಹೇಳಿದ್ದಾರೆ. ನಾನು ಆ ಬಗ್ಗೆ ಹೇಳುವುದಿಷ್ಟೆ: ಸಾಧಾರಣವಾಗಿ ಬುಲ್‌ಡೋಜರುಗಳ ಅಥವಾ ಟ್ರಾಕ್ಟರುಗಳ ಸಹಾಯ ಬೇಕೆಂದು ಹೇಳಿದರೆ ಸರ್ಕಾರಿ ಅಧಿಕಾರಿಗಳು ಬಹಳ ಮಟ್ಟಿಗೆ ಕಾಂಗ್ರೆಸ್ ಸ್ನೇಹಿತರಿಗೇ ಕೊಟ್ಟಿದ್ದಾರೆಂದು ಅವರು ಹೇಳಿದರು. ಈ ವಿಚಾರದಲ್ಲಿ ಲೆಕ್ಕಗಳನ್ನು ತರಿಸಿ statistics ತೆಗೆದುಕೊಂಡರೆ ನಿಜಾಂಶ ಗೊತ್ತಾಗುತ್ತದೆ. ಯಾರು ಯಾರಿಗೆ ಎಷ್ಟೆಷ್ಟು ದಿನ ಬುಲ್‌ಡೋಜರನ್ನು ಕೊಟ್ಟಿದೆ, ಎಷ್ಟೆಷ್ಟು ಜಮೀನು ಉಳುಮೆಯಾಗಿದೆ, ಕಾಂಗ್ರೆಸ್ಸಿನವರು ಎಷ್ಟು ಉಳಿಸಿದ್ದಾರೆ, ಕಾಂಗ್ರೆಸ್ಸಿನವರಲ್ಲದವರು ಎಷ್ಟುಮಟ್ಟಿಗೆ ಉಪಯೋಗಿಸಿದ್ದಾರೆಂಬುದನ್ನು ನೋಡಲಿ. Let him take statistics. ಆಗ ಗೊತ್ತಾಗುತ್ತದೆ, ಇದನ್ನು ಒಂದೇ ಪಕ್ಷದವರು ಉಪಯೋಗಿಸಿದ್ದಾರೆಯೇ, ಅಥವಾ ಇತರರು ಹೆಚ್ಚಿಗೆ ಉಪಯೋಗಿಸಿದ್ದಾರೆಯೆ ಎಂಬುದು. ಆದ್ದರಿಂದ ಅವರು 'Local Ministers' ಎಂಬ ಪದ ಉಪಯೋಗಿಸಿದ್ದನ್ನು ಈ ಸಭೆಯ ನಡೆವಳಿಕೆಗಳಿಂದ ತೆಗೆಯಬೇಕೆಂದು ಪ್ರಾರ್ಥಿಸುತ್ತೇನೆ. ಅವರು ಹೇಳಿದಂತೆ ಯಾರೂ ಉಪಯೋಗಿಸಿಲ್ಲ. ನಾವೂ ಇತರರಂತೆ ಸರ್ಕಾರದ ಸತ್ಪ್ರಜೆಗಳು; ಅವರು ಯಾವ ರೀತಿ ಕೊಡಬೇಕೆಂದು ಕೇಳುತ್ತಾರೋ ನಾವೂ ಅದೇ ರೀತಿ ಕೇಳಬಹುದು. ನಾವೆಷ್ಟು ದಿವಸ ಬುಲ್‌ಡೋಜರುಗಳನ್ನು ಟ್ರಾಕ್ಟರುಗಳನ್ನೂ ಉಪಯೋಗಿಸಿದ್ದೇವೋ ಅದಕ್ಕೆ ಕೊಡಬೇಕಾಗುವ ಮೊತ್ತವನ್ನು ಕೊಟ್ಟು ಉಳಿಸಿಕೊಳ್ಳುತ್ತೇವೆ. ಇಷ್ಟಕ್ಕೇ, ಅಂಕಿ ಅಂಶಗಳನ್ನು ನೋಡದೆ, ಒಂದು ಪಕ್ಷದವರು ಅನ್ಯಾಯವಾಗಿ ವರ್ತನೆ ಮಾಡಿದ್ದಾರೆ, ಅದು ತಪ್ಪು ಎಂದು ಹೇಳಿದರು. ನಾವುಗಳೇನಾದರೂ ಮಾಡಿದ್ದರೆ ಅವರು ಹೇಳಿದ್ದನ್ನು ಒಪ್ಪುತ್ತಿದ್ದೆ. ಅಂಥಾದ್ದೇನೂ ಇಲ್ಲ. ಇದನ್ನು ಹೇಳಿದ ನಮ್ಮ ಮಾನ್ಯ ಮಿತ್ರರು ಈ ರೀತಿ ಆರೋಪಣೆ ಮಾಡುವುದಕ್ಕೆ ಮುಂಚೆ ಸರ್ಕಾರದವರಿಂದ Statistics ತರಿಸಿಕೊಂಡು ಪರಿಶೀಲನೆಮಾಡಿ ಹೇಳಿದ್ದರೆ ಚೆನ್ನಾಗಿತ್ತು. ಆ ರೀತಿ ಏನೂ ತಿಳಿಯದೆ ಹೀಗೆ ಆರೋಪಿಸಿದ್ದು ತೀರಾ ಅನುಚಿತವೆಂದು ಹೇಳಿ, ಅವರು ಹೇಳಿದ ಆರೋಪಣೆಗಳನ್ನು Proceedings ನಿಂದ ತೆಗೆಯಬೇಕೆಂದು ಹೇಳುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪನವರು (ಒಳಾಡಳಿತ ಮತ್ತು ವ್ಯವಸಾಯ ಶಾಖೆಗಳ ಮಂತ್ರಿಗಳು).—ಅಧ್ಯಕ್ಷರೇ, ಮಾನ್ಯ ಸದಸ್ಯರು ಒಂದು ವಿಷಯವನ್ನು ಸರ್ಕಾರದವರ ಗಮನಕ್ಕೆ ತೀವ್ರವಾಗಿ ತಂದಿದ್ದಾರೆ. ಏನೆಂದರೆ, ಮಂಡ್ಯ ಡಿಸ್ಟ್ರಿಕ್ಟಿನಲ್ಲಿ ಎಷ್ಟು ಬುಲ್‌ಡೋಜರುಗಳು ಬೇಕೋ ಅಷ್ಟು ಬುಲ್‌ಡೋಜರುಗಳಿಲ್ಲವೆಂದು ಅವರ ವಾದದಿಂದ ಗೊತ್ತಾಗುತ್ತಿದೆ. ಈ ವಿಷಯದಲ್ಲಿ ಇಷ್ಟು ನಾನು ಹೇಳಬೇಕು. ಹಿಂದೆ ಒಂದು ಪ್ರಶ್ನೆಗೆ ಜವಾಬು ಹೇಳುವಾಗಲೂ ನಾನಿದನು ವಿಶದವಾಗಿ ಹೇಳಿದ್ದೇನೆ. ನಮ್ಮ ಸಂಸ್ಥಾನದಲ್ಲಿರತಕ್ಕ ಬುಲ್‌ಡೋಜರುಗಳ ಸಂಖ್ಯೆಯನ್ನು ನೋಡಿಕೊಂಡರೆ, ಎಲ್ಲರಿಗೂ ಸಮರ್ಪಕವಾದ ರೀತಿಯಲ್ಲಿ ಅದರ ಸಹಾಯವನ್ನು ದೊರಕಿಸಬೇಕೆಂದರೆ ಬಹಳ ಕಷ್ಟ. ಅಲ್ಲದೆ ಈ ಬುಲ್‌ಡೋಜರುಗಳನ್ನು ಸರ್ಕಾರದವರು ಯಾವ ಉದ್ದೇಶದಿಂದ ತರಿಸಿದ್ದಾರೆ? ಮೊದಲು ಸರ್ಕಾರದವರು ತಮ್ಮ ಆವಶ್ಯಕತೆಗಳೇನಿದೆಯೋ ಅದನ್ನು ಪೂರೈಸಿಕೊಂಡು ಆಮೇಲೆ ಖಾಸಗೀ ಜನರಿಗೆ ಕೊಡುವುದು ಸರ್ಕಾರದ ಕರ್ತವ್ಯ ಮತ್ತು ನೀತಿಯೆಂದು ನಾನು ತಿಳಿಸಲಿಚ್ಛಿಸುತ್ತೇನೆ. ಈ ವಿಷಯವನ್ನು ಶ್ರೀವರ್ಮಾ ಭೀಮಪ್ಪನಾಯಕರು ಕೇಳಿದ ಒಂದು ಪ್ರಶ್ನೆಗೆ ಉತ್ತರವಾಗಿಯೂ ತಿಳಿಸಿದ್ದೇನೆ.

ಇನ್ನು ಈ ಸಂದರ್ಭದಲ್ಲಿ ಮಂಡ್ಯ ಡಿಸ್ಟ್ರಿಕ್ಟಿನಲ್ಲಿರುವ ಬುಲ್‌ಡೋಜರಿಗೆ ಎಷ್ಟು ಅರ್ಜಿಗಳು ಬಂದಿದ್ದವು, ಎಷ್ಟಕ್ಕೆ ಕೊಡಲಾಯಿತೆಂದು ನೋಡುವುದಾದರೆ: 83 ಅಪ್ಲಿಕೇಷನ್‌ಗಳು ಬಂದು, ಅದರಲ್ಲಿ 21ರ ಮಟ್ಟಿಗೆ ಮಾತ್ರ in order of priority—ಕ್ರಮವಾಗಿ ನೋಡಲು ಸಾಧ್ಯವಾಯಿತು, ಬಾಕಿ 62ಕ್ಕೆ ಕೊಡಲಾಗಲಿಲ್ಲವೆಂದು ನಾನು ಹೇಳಬೇಕಾಗಿದೆ. ಒಂದಂಶವನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬೇಕಾ

(ಶ್ರೀ ಎಚ್. ಸಿದ್ದವೀರಪ್ಪನವರು.)

ಗಿದೆ. ಎಲ್ಲರಿಗೂ ಬುಲ್‌ಡೋಜರುಗಳನ್ನು ಕೊಡಬೇಕಾದರೆ, ಇವೊತ್ತಿನ ದಿವಸ ನಮ್ಮ ಸಂಸ್ಥಾನಕ್ಕೆ ಇನ್ನೂ 48 ಬುಲ್‌ಡೋಜರುಗಳು ಬೇಕಾಗುತ್ತವೆ. ಇವೊತ್ತಿನ ಹಣಕಾಸಿನ ಪರಿಸ್ಥಿತಿಯಲ್ಲಿ ಇಷ್ಟನ್ನು ಒದಗಿಸುವುದಕ್ಕಾಗುವುದಿಲ್ಲ. ಆದ್ದರಿಂದ ಇರುವುದನ್ನು ಎಲ್ಲರಿಗೂ ಹಂಚಬೇಕಾಗಿದೆ. ಇದರಲ್ಲಿ ಅದನ್ನು ಇಂಥವರಿಗೇ ಕೊಡಬೇಕು, ಅಂಥವರಿಗೇ ಕೊಡಬೇಕೆನ್ನುವ ಪಕ್ಷಪಾತ ಮನೋಭಾವ ಸರ್ಕಾರದವರಿಗೆ ಎಷ್ಟು ಮಾತ್ರವೂ ಇಲ್ಲ. ಸರ್ಕಾರದವರು ಈ ಬುಲ್‌ಡೋಜರುಗಳ ಬಗ್ಗೆ ಎಲ್ಲಾ ಲೆಕ್ಕಗಳನ್ನೂ ಪರಿಶೀಲನೆ ಮಾಡಿದ್ದಾರೆ. ನಮ್ಮ ಗಮನಕ್ಕೆ ಬಂದಿರುವಂತೆ ಒಬ್ಬರಲ್ಲಿ ಮಾತ್ರ ಒಂದು ವರ್ಷ ಆರು ತಿಂಗಳವರೆಗೂ ನಿಂತಿತೆಂದು ಗೊತ್ತಾಗಿದೆ. ನಿಂತಿದ್ದೇನೋ ವಾಸ್ತವ. ಆದರೆ ಯಾವ ಕಾರಣದಿಂದ ನಿಂತಿತು, ಸುಮ್ಮನೆ ಅಷ್ಟು ಕಾಲ ಇತ್ತೇ, ಅಷ್ಟು ಕಾಲವೂ ಉಪಯೋಗಿಸುತ್ತಿದ್ದರೇ, ಅಥವಾ ಕೆಟ್ಟುಹೋಗಿತ್ತೆ ಎಂಬುದನ್ನೆಲ್ಲಾ ನೋಡಬೇಕಾದುದೂ ಆವಶ್ಯಕ. ಆದ್ದರಿಂದ ಮುಖ್ಯವಾಗಿ ಒಂದೇ ಒಂದು ವಿಷಯ ತಮ್ಮ ಗಮನಕ್ಕೆ ತರುತ್ತೇನೆ. ಯಾವ ವಸ್ತುಗಳು ಅಪರೂಪವಾಗಿರುತ್ತವೆಯೋ ಅವಕ್ಕೆ demand ಕೂಡ ಜಾಸ್ತಿಯಾಗಿರುತ್ತದೆ. ಅದು ಸ್ವಾಭಾವಿಕವೇ. ಟ್ರಾಕ್ಟರುಗಳು, ಬುಲ್‌ಡೋಜರುಗಳು, ಎಲೆಕ್ಟ್ರಿಕ್ ಪಂಪುಗಳು—ಯಾವುದೇ ತೆಗೆದುಕೊಳ್ಳಿ, ಡಿಮ್ಯಾಂಡ್ ಹೆಚ್ಚು ಸಪ್ಲೈ ಕಡಮೆಯಾಗಿರಬೇಕಾದರೆ ನಾವು ಏನು ಮಾಡಬೇಕು? ಆದುದರಿಂದ 'All good things in life must be equally and equitably shared' ಎಂಬ ತತ್ವವನ್ನಿಟ್ಟುಕೊಂಡು ಕೆಲಸಮಾಡಿದರೆ ಯಾವ ಬಾಧಕವೂ ಬರುವುದಿಲ್ಲವೆಂದು ನಂಬಿ ನಾವು ಕೆಲಸ ಮಾಡುತ್ತಿದ್ದೇವೆ. ಆದ್ದರಿಂದ ಈ ವಿಚಾರದಲ್ಲಿ ಸರ್ಕಾರದವರು ಯಾವ ಪಕ್ಷಪಾತ ನೀತಿಯನ್ನೂ ಅನುಸರಿಸಿಲ್ಲ, ಇನ್ನು ಮುಂದೆ ಅನುಸರಿಸುವುದೂ ಇಲ್ಲ, ಕ್ರಮವನ್ನನುಸರಿಸಿ ಮಾಡುತ್ತೇವೆಂದು ನಾನು ಹೇಳುತ್ತೇನೆ. ಟ್ರಾಕ್ಟರುಗಳನ್ನು ಹಂಚುವ ಬಗ್ಗೆ ಟ್ರಾಕ್ಟರ್ ಕಮಿಟಿಯೆಂದು ಬೇರೆ ಇದೆ. ಟ್ರಾಕ್ಟರ್ ಕಮಿಟಿಯವರೇ ಬುಲ್‌ಡೋಜರ್‌ಗಳ ವ್ಯವಸ್ಥೆಯನ್ನೂ ನೋಡಿಕೊಳ್ಳುತ್ತಾರೆ. ಆದ್ದರಿಂದ ಏನಾದರೂ ನ್ಯೂನಾತಿರಿಕ್ತಗಳಿದ್ದರೆ, ಯಾವುದಾದರೂ ತೊಂದರೆಗಳಿದ್ದರೆ ಮಾನ್ಯ ಸದಸ್ಯರು ನಮ್ಮ ಗಮನಕ್ಕೆ ತಂದರೆ ಖಂಡಿತವಾಗಿ ಸರಿಪಡಿಸುತ್ತೇವೆಂದು ಹೇಳುತ್ತೇನೆ. ಇದರಲ್ಲಿ ಯಾವ ಪಕ್ಷಪಾತವನ್ನೂ ಮಾಡಿಲ್ಲ, ಮತ್ತು ಮಾಡುವುದಿಲ್ಲವೆಂದು ಹೇಳಿ, ಈ ಭರವಸೆಯ ಮೇಲೆ ಮಾನ್ಯ ಸದಸ್ಯರು ತಮ್ಮ ಖೋತಾ ನಿರ್ಣಯವನ್ನು ವಾಪಸು ತೆಗೆದುಕೊಳ್ಳಬೇಕೆಂದು ನಾನು ಕೋರುತ್ತೇನೆ.

Sri B. P. NAGARAJA MURTHY.—I beg leave to withdraw my cut motion.

The cut motion was, by leave, withdrawn.

Mr. SPEAKER.—The second cut motion stands in the names of Sri M. Linganna. This seems to be of a general nature. No specific grievance is mentioned in the cut motion. So, when the demand is before the House and before it is put to vote, the Hon'ble Member can take the opportunity to discuss about it.

Sri M. LINGANNA (Nanjangud).—But I believe that under a cut motion we can raise certain problems and offer our views by which Government also will be benefited.

Mr. SPEAKER.—The Hon'ble Member will have his opportunity, after all these cut motions are over and if there is time, to refer to all such matters before the demand is put.

The third cut motion stands in the name of Sri U. M. Madappa. That also seems to be of a general nature. So, the Hon'ble Member can discuss it at the end before the demand is put.

Sri U. M. MADAPPA (Chamarajanagar).—Can I have a chance then to speak, Sir?

Mr. SPEAKER.—If time is available the Hon'ble Member will have a chance

to speak on the demand. In the order of cut motions, the respective Members will have preference to speak.

The next cut motion stands in the name of Sri S. Sreenivasa Iyengar. That also seems to be of a general nature; moreover the matter was discussed yesterday when we were discussing food policy.

Sri S. SREENIVASA IYENGAR (T. Narasipur).—There is a specific policy and that is Grow More Food scheme and that relates to the Agricultural Department.

Mr. SPEAKER.—In fact it is general. Similarly cut motion No. 5 stands in the name of Sri Devaraj Urs 'to raise a debate on the efficient working of the Department.' It is too general. The Hon'ble Member can speak on the Demand itself.

The next cut motion stands in the name of Sri H. C. Linga Reddy who is not here. The next cut motion which is about soil survey stands in the name of Sri A. Bheemappa Naik.

Need for taking up Soil Survey.

Sri A. BHEEMAPPA NAIK (Molakalmuru).—Sir, I move:

> "That the demand under the head "40. Agriculture (except Botanical and other Public Gardens) for Rs. 32,66,200 be reduced by Rs. 100" to raise a debate on the need of taking up soil survey so as to enable the Department to advise the agriculturist as to the particular crop being grown in a particular soil.'

ಸ್ವಾಮಿ, ಮೈಸೂರು ದೇಶದಲ್ಲಿ ಬಹಳ ದಿವಸಗಳಿಂದಲೂ ವ್ಯವಸಾಯದ ಇಲಾಖೆ ಕೆಲಸ ಮಾಡುತ್ತಿದೆ. ಈ ಇಲಾಖೆಯಲ್ಲಿ ಬಹಳ ದಕ್ಷರಾದ ಅಧಿಕಾರಿಗಳು ಅನೇಕ ಕಾಲ ಇದ್ದರು ಎಂಬುದನ್ನು ಎಲ್ಲರೂ ಒಪ್ಪಬೇಕಾಗುತ್ತದೆ. ಆದರೆ ಮೈಸೂರು ದೇಶದ ವ್ಯವಸಾಯದ ಪರಿಸ್ಥಿತಿ ಬಾಕಿಯ ದೇಶಗಳಿಗಿಂತ ಹಿಂದೆ ಬಿದ್ದಿದೆಯೆಂಬುದನ್ನು ವಿಷಾದದಿಂದ ಹೇಳಬೇಕಾಗಿದೆ. ವ್ಯವಸಾಯದ ಇಲಾಖೆಯ ವಿಚಾರದಲ್ಲಿ ಜನ ಸದ್ಭಾವನೆಯನ್ನು ಹೊಂದಿಲ್ಲವೆಂಬುದನ್ನೂ ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಇದಕ್ಕೆ ಕಾರಣವಿಷ್ಟೆ. ಯಾವ ಒಬ್ಬ ವಿದ್ಯಾರ್ಥಿಯೇ ಆಗಲಿ ಅ, ಆ, ಇ, ಈ ಕಲಿತುಕೊಳ್ಳದೆ ಹೇಗೆ ಮುಂದೆ ಹೋಗಲಾರನೋ ಹಾಗೆಯೇ, ಒಂದು ಭೂಮಿಯಿದ್ದರೆ ಅದರಲ್ಲಿರುವ ಸಾರವೇನು ಶಕ್ತಿಯೇನು, ಯಾವ ಬೆಳೆಯನ್ನು ಬೆಳೆಯುವ ಶಕ್ತಿ ಇದೆ ಎಂಬುದನ್ನು ವಿಜ್ಞಾನ ರೀತಿಯಲ್ಲಿ ತಪಶೀಲ್ಲು ಸರ್ವೆನಡೆಸಿ, ಪರೀಕ್ಷೆನಡೆಸಿ, ಪ್ರತಿಯೊಬ್ಬ ರೈತನಿಗೂ ತನ್ನ ಭೂಮಿಯಲ್ಲಿ ಏನಿದೆ ಎಂಬುದನ್ನು ತಿಳಿಸುವ ಶಕ್ತಿಇಲ್ಲದಿದ್ದರೆ ಅಂಥಾ ಇಲಾಖೆ ಇರುವುದಕ್ಕೆ ಅರ್ಹತೆಯೇ ಇಲ್ಲ, ಮುಂದೆ ಅದಕ್ಕೆ ಏನು ಮಾಡುವುದಕ್ಕೂ ಶಕ್ತಿಯಿಲ್ಲವೆಂದು ಹೇಳುತ್ತೇನೆ. ಇದಕ್ಕೆ ಕಾರಣವಿಷ್ಟೆ. ಯಾವಾಗ ಒಂದು ತಳಹದಿ ಎಂದು ಏನು ಹೇಳುತ್ತಾರೋ ಅದೇ ಇಲ್ಲದಿರುವಾಗ, ಅದರ ಮೇಲೆ ಯಾವ ಕಟ್ಟಡವೂ ನಿಲ್ಲುವುದಕ್ಕೆ ಸಾಧ್ಯವಿಲ್ಲ. ಮುಂದುವರಿದ ದೇಶಗಳಲ್ಲಿ ರೈತನಿಗಿರುವ ಜಮೀನಿನಲ್ಲಿ ಸಾರವತ್ತಾದ ಶಕ್ತಿಗಳೇನಿದೆ, ನೈಟ್ರೋಜೆರ್ ಅಂಶ ಎಷ್ಟಿದೆ, ಫಾಸ್‌ಫೇಟ್ ಮುಂತಾದ ಅಂಶಗಳೇನಿವೆ, ಯಾವ ಯಾವ ಕಾಲದಲ್ಲಿ ಯಾವ ಯಾವ ಬೆಳೆಯನ್ನು ಬೆಳೆಯಬಹುದು, ಯಾವ ಜಮೀನಿನಲ್ಲಿ ಯಾವ ಬೆಳೆಯನ್ನು ಬೆಳೆಯಬಹುದು ಎಂಬುದನ್ನೆಲ್ಲಾ ತಿಳಿಸುತ್ತಾರೆ. ಇದಕ್ಕೆ soil survey ಆಗಬೇಕು. ಇದು ಬಹಳ ಕಷ್ಟವೆಂಬುದನ್ನು ಒಪ್ಪಿಕೊಳ್ಳುತ್ತೇನೆ. ಇದನ್ನು ಮಾಡುವುದಕ್ಕೆ ಬಹಳ ಹಣ ಖರ್ಚಾಗುತ್ತದೆ. ಇದಕ್ಕೆ ಒಂದು ಲ್ಯಾಬೊರೇಟರಿ ಏರ್ಪಾಡುಮಾಡಬೇಕಾಗುತ್ತದೆ. ವಿಜ್ಞಾನಿಗಳ ಸೈನ್ಯವೇ ದೇಶದಲ್ಲೆಲ್ಲಾ ಪ್ರವಾಸಮಾಡಬೇಕಾಗುತ್ತದೆ. ಇದನ್ನೆಲ್ಲಾ ಒಪ್ಪುತ್ತೇನೆ. ಪ್ರಾರಂಭದಲ್ಲೇ ಇದನ್ನು ಮಾಡಬೇಕಾಗಿತ್ತು, ಆದರೆ ಮಾಡಲಿಲ್ಲ. ಆದರೆ ಎಲ್ಲಿಯವರೆಗೆ 'ಸಾಯಿಲ್‌ಸರ್ವೆ' ಮಾಡುವುದಿಲ್ಲವೋ ಅಲ್ಲಿಯವರೆಗೆ ವ್ಯವಸಾಯದ ಇಲಾಖೆ ದಕ್ಷತೆಯಿಂದ ನಡೆಯುವುದಕ್ಕೆ ಸಾಧ್ಯವಿಲ್ಲ; ರೈತನಿಗೆ ಸಹಾಯ, ಬುದ್ಧಿವಾದ ಕೊಡುವುದಕ್ಕೆ ಈ ಇಲಾಖೆಗೆ ಶಕ್ತಿಯಿರುವುದಿಲ್ಲ. ಸಾಧಾರಣವಾಗಿ ಅನೇಕ ಬೆಳೆಗಳು ಅನೇಕ ಪ್ರಾಂತಗಳಲ್ಲಿ

(SRI A. BHEEMAPPA NAIK.)

ಆಗುವುದಿಲ್ಲವೆಂದು ಜನರು ತಿಳಿದುಕೊಂಡಿದ್ದಾರೆ. ಏಕೆಂದರೆ ಭೂಮಿ ಎಂಥದು, ಅದರಲ್ಲಿ ಏನು ಬೆಳೆಯುತ್ತದೆ, ಯಾವ ಬೆಳೆ ಹಾಕಬೇಕು, ಯಾವ ಕಾಲದಲ್ಲಿ ಬಿತ್ತಬೇಕು, ಇವು ತಿಳಿಯದೇ ಇರುವುದರಿಂದ ಹೀಗಾಗಿದೆ. ವ್ಯವಸಾಯದ ಇಲಾಖೆಯ ಡೈರೆಕ್ಟರು ದೊರೆಗಳಾಗಿರುತ್ತಾರೆ. ಅವರಲ್ಲಿ ಇಂಥಾ ಲೆಕ್ಕಗಳಿದ್ದರೆ ರೈತನಿಗೆ ಬುದ್ಧಿ ಹೇಳುವುದಕ್ಕೆ ಅವಕಾಶವಿರುತ್ತಿತ್ತು. ಆದರೆ ಈಗ ದುರದೃಷ್ಟದಿಂದ ಅವರಲ್ಲಿ ಯಾವ ಲೆಕ್ಕವೂ ಇಲ್ಲದೆ ಇರುವುದರಿಂದ ಅವರಿಗೆ ಕೆಲಸವೇ ಇಲ್ಲದೇಹೋಗಿದೆ. ಹಿಂದೆ ಕೆಲವು ದಿವಸ ವ್ಯವಸಾಯದ ಇಲಾಖೆಯವರು ವ್ಯವಸಾಯದ ಸಲಕರಣೆಗಳನ್ನೂ, ಬೀಜ, ಗೊಬ್ಬರ ಇವುಗಳನ್ನೂ ಮಾರುವ ಕೆಲಸವನ್ನಿಟ್ಟುಕೊಂಡಿದ್ದರು. ಈಗ ಅದೂ ಇಲ್ಲವೆಂದು ಹೇಳುತ್ತಿದ್ದಾರೆ. ಕೆಲವರ ಒತ್ತಾಯದಮೇಲೆ ಈ ಕೆಲಸವನ್ನು ಬೇರೆಯವರಿಗೆ ಕೊಟ್ಟು ಆ ಇಲಾಖೆಗೆ ಆ ಕೆಲಸವೂ ಇಲ್ಲದೆ ದೊರೆಗಳಾಗಿದ್ದಾರೆ. ನಾನು ಧೈರ್ಯವಾಗಿ ಕೇಳುತ್ತೇನೆ, ಅವರು ಯಾವ ಊರಿಗೆ ಹೋಗಿ ಮೀಟಿಂಗ್ ಮಾಡಿ ರೈತರನ್ನು ಸೇರಿಸಿ, ಇಂಥ ಬೆಳೆ ಬೆಳೆಯಿರಿ, ಆರಿದ್ರೆ ಹೋಯಿತು, ಪುನರ್ವಸು ಬಂದಿದೆ, ಜೋಳ ಬಿತ್ತಿದರೆ ಏನೂ ಆಗುವುದಿಲ್ಲ, ಮುಂತಾಗಿ ಎಲ್ಲಿ ಬುದ್ಧಿವಾದ ಹೇಳಿದ್ದಾರೆ, ಎಷ್ಟು ಜನರಿಗೆ ಹೇಳಿದ್ದಾರೆ? ಇದಕ್ಕೆ ಕಾರಣ ಇಷ್ಟೆ. ಅವರು ವೈಜ್ಞಾನಿಕವಾಗಿ ಪರೀಕ್ಷೆ ನಡೆಸಿಲ್ಲ, ಯಾವ ಭೂಮಿಯನ್ನೂ ಸರ್ವೆಮಾಡಿಲ್ಲ. ಹೊರದೇಶಗಳಲ್ಲಿ 'ಸಾಯಿಲ್ ಸರ್ವೆ' ಮಾಡಿದ್ದಾರೆ, ಇಲ್ಲಿ ಮಾಡಿಲ್ಲ. ಇದರ ಫಲ ಗೊತ್ತೇ ಇದೆ. ಸೈನ್ಸ್ ಕಾಲೇಜಿನಲ್ಲಿ ಕೆಮಿಸ್ಟ್ರಿ ಬಿ. ಎಸ್. ಸಿ. ಯನ್ನು ಲ್ಯಾಬೊರೇಟರಿ ಇಲ್ಲದೆ ಪಾಸುಮಾಡಬೇಕೆನ್ನುವುದೂ ಒಂದೇ, ಇದೂ ಒಂದೇ. ಹಿಂದೆ ಸರ್ಕಾರದವರು ಎಷ್ಟೋ ಕಷ್ಟಪಟ್ಟು ಮಂಡ್ಯ ಜಿಲ್ಲೆಯಲ್ಲಿ ಕೆಲವು ಕಡೆ ಮಾಡಿದ್ದರೆಂದು ಕೇಳಿದ್ದೇನೆ. ಅದರ ವಿವರಗಳು ಸರ್ಕಾರದಲ್ಲಿಲ್ಲ.

ಶ್ರೀ ಎಚ್. ಕೆ. ವೀರಣ್ಣಗೌಡರು.—ಎಲ್ಲೋ 20 ವರ್ಷಗಳ ಹಿಂದೆ ಮಾಡಿದ್ದರೆ ಈಗ ಎಲ್ಲಿದೆ ?

ಶ್ರೀ ಭೀಮಪ್ಪನಾಯಕರು.—ಅಂತೂ ಮಾಡಿದ್ದರೆಂದು ಹೇಳುತ್ತಾರೆ. 'ಸಾಯಲ್ ಸರ್ವೆ' ಎನ್ನುವುದನ್ನು ದೇಶದ ಹಿತದೃಷ್ಟಿಯಿಂದ, ವ್ಯವಸಾಯದ ಅಭಿವೃದ್ಧಿಯ ದೃಷ್ಟಿಯಿಂದ ಮಾಡಬೇಕು, ಇದು ಬಹು ಮುಖ್ಯವಾದ ಕೆಲಸ. ಭೂಮಿಯಲ್ಲಿ ನೈಟ್ರೋಜನ್ ಕಡಮೆಯಿದೆಯೇ, ಫಾಸ್ಫೇಟ್ ಕಡಮೆ ಇದೆಯೆ, ಅದಕ್ಕೆ ಬೋನ್‌ಮೀಲ್ ಹಾಕಬೇಕೆ, ಹಸುರುವಾಣಿ ಗೊಬ್ಬರ ಹಾಕಬೇಕೆ ಎಂಬುದನ್ನು ತಿಳಿಯಬೇಕಾದರೆ ಭೂಮಿಯ ಮಣ್ಣಿನಲ್ಲಿ ಏನೇನಿದೆ ಎಂಬುದನ್ನು ತಿಳಿಯದೇ ಇದ್ದರೆ ಏನೂ ಗೊತ್ತಾಗುವುದಿಲ್ಲ. ಅವನವನ ಭೂಮಿಯ ವಿಷಯದ ಲೆಕ್ಕವೆಲ್ಲವೂ ಅವನವನ ಕೈಯಲ್ಲಿರಬೇಕು. ಪೂರ್ತಿಯಾಗಿ ಅವನ ಜಮೀನಿನ ಚರಿತ್ರೆಯೆಲ್ಲಾ ಅವನ ಕೈಯಲ್ಲಿದ್ದು ಅವನ್ನು ಸಂದರ್ಭ ಬಂದಾಗ ಹೇಗೆ ಉಪಯೋಗಿಸಿಕೊಳ್ಳಬೇಕೆಂಬುದನ್ನು ತಿಳಿದುಕೊಂಡಿರಬೇಕು. ಪೂರ್ಣವಾಗಿ ಈ ವ್ಯವಸ್ಥೆಯನ್ನು ಒಂದೇ ಸಾರಿ ಮಾಡುವುದಕ್ಕೆ ಕಷ್ಟವಾದರೆ ಹಂತಹಂತವಾಗಿ ಮಾಡಲಿ. ಇದಕ್ಕೆ ಬೇರೆ ಇಲಾಖೆ ಮಾಡಬೇಕು. ಇಲ್ಲದಿದ್ದರೆ, ವ್ಯವಸಾಯದ ಇಲಾಖೆಯಲ್ಲಿರುವವರನ್ನೇ ಇದಕ್ಕೆ ಅಳವಡಿಸಬೇಕು. ಯಾವ ರೀತಿ ವೈಜ್ಞಾನಿಕವಾಗಿ ಅಭಿವೃದ್ಧಿಪಡಿಸಬೇಕು, ಬೇರೆ ದೇಶಗಳಲ್ಲಿ ಯಾವ ರೀತಿ 'ಸಾಯಿಲ್ ಸರ್ವೆ' ಮಾಡಿದ್ದಾರೆ ಎಂಬುವನ್ನೆಲ್ಲಾ ಗಮನಿಸಿ ಇನ್ನು ಮುಂದಾದರೂ ನಮ್ಮಲ್ಲಿ ನಡೆಸಬೇಕೆಂದು ಪ್ರಾರ್ಥಿಸಿ ಈ ಖೋತಾ ನಿರ್ಣಯವನ್ನು ಸಭೆಯ ಮುಂದಿಡುತ್ತೇನೆ.

1-30 P.M.

MR. SPEAKER.—Cut motion moved :

"That the demand be reduced by Rs. 100."

ಶ್ರೀ ಕೆ. ಪಂಚಾಕ್ಷರಯ್ಯನವರು (ಅರಸೀಕೆರೆ).—ಸ್ವಾಮಿ, ಶ್ರೀಮರ್ಾ ಭೀಮಪ್ಪನಾಯಕರು ಈಗ ಸಭೆಯ ಮುಂದೆ ಮಂಡಿಸಿರತಕ್ಕ ಖೋತಾ ನಿರ್ಣಯವನ್ನು ನಾನು ಅನುಮೋದಿಸುತ್ತ ಒಂದೆರಡು ವಿಷಯಗಳನ್ನು ಈ ಮಾನ್ಯ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ.

ಈ ವ್ಯವಸಾಯದ ಇಲಾಖೆಯನ್ನು ಸರ್ಕಾರದವರು ಆ ಇಲಾಖೆಯಲ್ಲಿರತಕ್ಕ ನೌಕರಮಾನೇರುಗಳಿಗೆ ಒಂದು ಜೀವನೋಪಾಯವನ್ನು ಕಲ್ಪಿಸುವ ಉದ್ದೇಶದಿಂದಲೇ ನಡೆಸಿಕೊಂಡು ಬರುತ್ತಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಏತಕ್ಕೆಂದರೆ, ಈ ಹಿಂದೆ ಸರ್ಕಾರದವರು ಕೆಲವು ಪ್ರಶ್ನೆಗಳಿಗೆ ಉತ್ತರವನ್ನೊದಗಿಸುವ ಸಂದರ್ಭದಲ್ಲಿ 'ಈ ಇಲಾಖೆಯನ್ನು ನಾವು ಇಲ್ಲಿಗೆ ಸುಮಾರು 50-60 ವರ್ಷಗಳಿಂದಲೂ ನಡೆಸಿಕೊಂಡು ಬಂದಿರುತ್ತೇವೆ, ಆದ್ದರಿಂದ ಈಗ ಇದನ್ನು ತೆಗೆಯುವುದಕ್ಕೆ ಆಗುವುದಿಲ್ಲ, ಅಲ್ಲದೆ ಈ ಇಲಾಖೆಯಲ್ಲಿ ಅನೇಕ ದಕ್ಷರಾದ ಅಧಿಕಾರಿಗಳು ಬೇರೆ ಇದ್ದಾರೆ' ಎಂದು ಉತ್ತರ ಕೊಟ್ಟಿದ್ದಾರೆ. ಆದರೆ ಈ ಇಲಾಖೆಯಿಂದ ವ್ಯವಸಾಯಗಾರರಿಗೆ ಎಷ್ಟು ಪ್ರಯೋಜನವಾಗಬೇಕಾಗಿತ್ತೋ ಅಷ್ಟು ಪ್ರಯೋಜನವಾಗುತ್ತಿಲ್ಲ. ಆದ್ದರಿಂದ ಈಗ ತಾವು ಈ ಇಲಾಖೆಗೆ ಏನು ಹಣ ಖರ್ಚುಮಾಡುತ್ತಿದ್ದೀರೋ ಅದರಿಂದ ದೇಶಕ್ಕಾಗಲೀ ಅಥವ ಜನರಿಗಾಗಲೀ ಏನೂ ಪ್ರಯೋಜನವಾಗುತ್ತಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಅದಕ್ಕೆ ಕಾರಣವಾದರೂ ಇಷ್ಟೆ. ಈ ವ್ಯವಸಾಯದ ಇಲಾಖಾ ನೌಕರರು ನಾಡಿನಲ್ಲಿರತಕ್ಕ ರೈತಾಪಿಜನರೊಂದಿಗೆ ಬೆರೆತು ಕೆಲಸ ಮಾಡಬೇಕೆನ್ನುವ ಮನೋಭಾವ ಅವರಲ್ಲಿದ್ದಂತೆ ಕಂಡುಬರುವುದಿಲ್ಲ. ಮೇಲಾಗಿ ಅವರೆಲ್ಲರಿಗೂ ಈ ವ್ಯವಸಾಯಕ್ಕೆ ಸಂಬಂಧಪಟ್ಟಂಥ ಸಂಪೂರ್ಣ ಜ್ಞಾನ ಸಹ ಅವರಿಗೆ ಇರುವುದಿಲ್ಲ. ಅಧಿಕಾರಿಗಳು ಅಧಿಕಾರಿಗಳಾಗಿದ್ದಾರೆಯೇ ವಿನಾ ಬೇರೆ ಕೆಲಸಗಳೇನೂ ಅವರಿಂದ ನಡೆಯುತ್ತಿಲ್ಲ. ನಾನು ಉದಾಹರಣೆಗೆ ಹೇಳುವುದಾದರೆ ಹಾಸನಜಿಲ್ಲೆಯ ಅರಸೀಕೆರೆ ತಾಲೂಕಿನಲ್ಲಿ ನಮ್ಮ ದೇಶದ ಹತ್ತಿಯ ಬೆಳೆಯನ್ನು ಉತ್ತಮಪಡಿಸಲು ಈಗ್ಗೆ ಕೆಲವು ವರ್ಷಗಳ ಹಿಂದೆ ಒಂದು ಹೊಸ ಮಾದರಿಯ ಪ್ರಯತ್ನವನ್ನು ಕೈಕೊಂಡರು. ಆದರೆ ನಮ್ಮ ದೇಶದ ಹತ್ತಿ ಇತರ ಎಲ್ಲಾ ದೇಶಗಳ ಹತ್ತಿಗಿಂತಲೂ ಬಹಳ ಶ್ರೇಷ್ಠವಾದುದೆಂದು ಹೇಳಲಾಗುತ್ತಿದೆ. ಆದರೆ ಸರ್ಕಾರದವರು ಈ ಹಿಂದೆ ನಮ್ಮ ದೇಶದಲ್ಲಿ ಎಂ.ಎ. 5 ಎಂಬ ಹತ್ತಿಯನ್ನು ಬೆಳೆದರೆ ಅದರಿಂದ ಹೆಚ್ಚಿನ ಫಾಯಿದೆ ಇರುತ್ತದೆಯೆಂದು ಆ ಹತ್ತಿಯನ್ನು ಬೆಳೆಸಲು ರೈತರಿಗೆ ಉತ್ತೇಜನ ಕೊಟ್ಟರು. ಆಗೇನೋ ಅದಕ್ಕೆ ಒಂದು ನಿರ್ದಿಷ್ಟವಾದ ಬೆಲೆಯೂ ಇತ್ತು. ಹಾಗೆ ಇವರು ಅಮೇರಿಕಾ ಮತ್ತು ಮೈಸೂರು cross-seed ಹತ್ತಿಯ ಬೀಜಗಳನ್ನು ರೈತರಿಗೆ 5-6 ವರ್ಷಗಳ ಹಿಂದೆಯೇ ಒದಗಿಸಿಕೊಟ್ಟು ಇತ್ತೀಚೆಗೆ ಅದು ಏನಾಗಿದೆ, ರೈತನಿಗೆ ಅದರಿಂದ ಏನು ಫಲ ದೊರೆಯುತ್ತದೆ ಎಂಬುದೊಂದನ್ನೂ ನೋಡದೆ ಕೈಬಿಟ್ಟುಬಿಟ್ಟಿದ್ದಾರೆ. ಈ ವಿಚಾರದಲ್ಲಿ ಹೇಗೆ ವ್ಯವಸಾಯ ನಡೆಸಬೇಕು, ಏನು ಆರೈಕೆ ಮಾಡಬೇಕೆಂಬ ಬಗ್ಗೆ ಯಾವ ತಿಳಿವಳಿಕೆಯನ್ನೂ ಇವರು ರೈತರಿಗೆ ಕೊಟ್ಟಿರುವುದಿಲ್ಲ. ಆದರೆ ಆ ಬೀಜಗಳಲ್ಲಿ ಏನು ಗುಣವಿದೆ, ಅದು ಅನುಕೂಲವಾದದ್ದೇ, ಪ್ರತಿಕೂಲವಾದದ್ದೇ ಎಂಬ ಯಾವ ವಿಚಾರಗಳೂ ಅವರಿಗೆ ಅನುಭವದಲ್ಲಿದ್ದಂತೆ ಕಂಡುಬರುವುದಿಲ್ಲ. ಹೀಗೆ ಇವರು ತಂದು ಒದಗಿಸಿದ ಬೀಜದಿಂದ ಬೆಳೆದ ಹತ್ತಿಗೆ ವಣ ಒಂದಕ್ಕೆ $7\frac{1}{2}$ ರೂಪಾಯಿಗಳಿದ್ದರೆ ಹುಬ್ಬಳ್ಳಿ ಲಕ್ಷ್ಮಿ ಹತ್ತಿಗೆ $8\frac{1}{4}$ ರೂಪಾಯಿಗಳ ಬೆಲೆ ಇರುತ್ತದೆ ಹೀಗೆ ಧಾರಣೆಯಲ್ಲಿ ಕೂಡ ಆ ಹತ್ತಿಗೂ ನಮ್ಮ ಹತ್ತಿಗೂ ವ್ಯತ್ಯಾಸವಿದೆ. ಈ ಹತ್ತಿಯಾದರೋ ಕೇವಲ ನಮ್ಮ ಹಿಂದೂ ಸ್ಥಾನದಲ್ಲೇ ಜಾಸ್ತಿ ಬೇಕಾಗುತ್ತಿದೆಯೆಂದು ನನಗೆ ತಿಳಿದುಬಂದಿದೆ. ಈ ಹತ್ತಿಯಲ್ಲಿ staple ಮಾತ್ರ ಬರುತ್ತದೆ. ಆದರೆ ಅಷ್ಟು ಗಟ್ಟಿಯಾಗಿರುವುದಿಲ್ಲ. ಈ ಕಾರಣದಿಂದ ಈ ಹೊಸ ಜಾತಿ ಹತ್ತಿಗೆ ಪರದೇಶದ ಮಾರ್ಕೆಟ್ಟುಗಳಲ್ಲಿ ಅಷ್ಟು ಬೆಲೆ ದೊರೆಯುವುದಿಲ್ಲ. ಇದಕ್ಕೆ ಅನ್ಯದೇಶದ ಗಿರಾಕಿಗಳೂ ಕಡಮೆ. ಆದರೆ ಶ್ರೀಮರ್ಾ ಭೀಮಪ್ಪನಾಯಕರು ಸಾಯಿಲ್

(ಶ್ರೀ ಕೆ. ಪಂಚಾಕ್ಷರಯ್ಯನವರು)

ಸರ್ವೆಗೆ ಅನುಸರಿಸಿ ಮಾತನಾಡಬೇಕೆಂದು ಕೇಳಬಹುದು. ನಾನು ತಿಳಿಸುತ್ತಿರುವ ಹತ್ತಿ ಸಹ ಬೆಳೆಯುತ್ತಿರುವುದು ಆ ಸಾಯಿಲ್‌ನಲ್ಲೇ. ಆದರೆ ಬೊಂಬಾಯಿನಲ್ಲಿ ಈ ವರ್ಷ ಲಕ್ಷ್ಮಿ ಮಾರ್ಕ್ ಹತ್ತಿಗೆ ಧಾರಣೆ ಜಾಸ್ತಿ ಇದೆ. ಈಚೀಚೆಗೆ ಈ ಲಕ್ಷ್ಮಿ ಎಂಬ ಜಾತಿ ಹತ್ತಿಯನ್ನೇ ಪ್ರಾರಂಭಿಸಿ ಉತ್ತಮ ಜಾತಿ ಹತ್ತಿ ಜಾಸ್ತಿ ಬೆಳೆ ಮಾಡುತ್ತಿದ್ದಾರೆ. ಈಗ ಈ ಹೊಸ ಲಕ್ಷ್ಮಿ ಜಾತಿಯ, ಎಂ. ಎ. 5 ಹತ್ತಿಗಿಂತಲೂ ಉತ್ತಮ ಯೋಗ್ಯ strength ಉಳ್ಳ ಹತ್ತಿಯನ್ನು ಬೆಳೆಯುತ್ತಿದ್ದಾರೆ. ಮದ್ರಾಸಿನ ಪ್ರಾಂತದಲ್ಲಿ ರಾಜಪಾಳ್ಯಂ ಹತ್ತಿಗೆ ಒಂದಕ್ಕೆ ಎರಡಷ್ಟು ಬೆಲೆ ಇರುತ್ತದೆ. ಪರಪೇಟೆಯಲ್ಲಿ ಹೆಚ್ಚು ಗಿರಾಕಿಯಿಂದ ತೆಗೆದುಕೊಳ್ಳುತ್ತಿದ್ದಾರೆ. ನಮ್ಮ ಭೂಮಿಯಾದರೋ ಬಹಳ ಉತ್ಕೃಷ್ಟವಾದದ್ದು ಮತ್ತು ಹೆಚ್ಚು ಉತ್ಪತ್ತಿ ಕೊಡುವಂಥಾದ್ದು. ಮಾಮೂಲಾಗಿ ನಾವು ಈ ಲಕ್ಷ್ಮಿ ಅಥವಾ ರಾಜಪಾಳ್ಯಂ ಹತ್ತಿಯನ್ನೇ ಬೆಳೆಯುತ್ತಾ ಬಂದಿದ್ದರೆ ನಮಗೆ ಇಂದು ಕೊಂಚ ಅನುಕೂಲವಾಗಿ ವ್ಯವಸಾಯಗಾರರಿಗೆ ಸ್ವಲ್ಪ ದುಡ್ಡಾದರೂ ಸಿಕ್ಕುತ್ತಿತ್ತು. ಈ ಇಲಾಖೆಯಿಂದ ಹೀಗೆಲ್ಲಾ ಅನಾನುಕೂಲಗಳಾಗಿರುವುದರಿಂದ ನಾನೇ ಕೆಲವು ಪ್ರಶ್ನೆಗಳನ್ನು ಈ ಸಭೆಯ ಮುಂದೆ ತಂದು, ಈ ಇಲಾಖೆಯನ್ನೇ ಬರ್ತರ್ಫು ಮಾಡಬೇಕೆಂದು ವಾದ ಮಾಡಿದ್ದೇನೆ. ರೈತರಿಗೆಲ್ಲಾ ಈ ಇಲಾಖೆಯ ಮೇಲೆ ಈ ದಿವಸ ಅಷ್ಟು ಬೇಜಾರು ಬಂದು ಹೋಗಿದೆ. ನಾನು ಹೇಳುವುದು, ಬೇಕಾದರೆ ಇನ್ನೂ ಹೆಚ್ಚಾಗಿ ಈ ಇಲಾಖೆಗೆ ದುಡ್ಡನ್ನು ಖರ್ಚುಮಾಡೋಣ, ಆದರೆ ನಾವು ಖರ್ಚು ಮಾಡತಕ್ಕ ಪ್ರತಿಯೊಂದು ಕಾಸೂ, ರೈತನ ಕಷ್ಟಕ್ಕೆ ತಕ್ಕ ಪ್ರತಿಫಲವನ್ನೂ ಮತ್ತು ನಾಡಿಗೆ ಒಂದು ಉಪಯೋಗವನ್ನೂ ತರುವಂತೆ ಖರ್ಚಾಗಬೇಕು. ಹಾಗಲ್ಲದೆ ಈ ರೀತಿ ದುಡ್ಡನ್ನು ಸೂರೆ ಮಾಡುವುದು ಸರ್ವಥಾ ನ್ಯಾಯವಾದ್ದಲ್ಲವೆಂದು ಹೇಳಿ ನಾನು ಈ ಖೋತಾ ನಿರ್ಣಯಕ್ಕೆ ಬೆಂಬಲ ನೀಡುತ್ತೇನೆ.

Sri S. SRINIVASA IYENGAR.—Mr. Speaker, Sir, while supporting the cut motion moved by my Hon'ble friend Sri Bheemappa Naik, I beg to place before this House the following few points for their kind consideration and I also believe that Sri Bheemappa Naik will not withdraw the cut motion even though pressed to do so.

Mr. SPEAKER.—Let us wait and see.

Sri S. SRINIVASA IYENGAR.—Soil survey is really a very important factor. But even under the development schemes provided in the budget, I do not think that necessary allotment has been made for undertaking such an important survey. Soil survey is so important that the Government ought to have devoted greater attention towards that. Whatever may be the types of seedlings, whatever may be the quantities of manure that you supply, whatever may be the quantum of work put on the land, production depends upon the kind of soil. I believe at present the Agricultural Department has mostly confined itself to the sales of manure and agricultural implements. And of late, of course, this burden has been shifted on to the multi-purpose co-operative societies. But more than that, I feel that the present staff that is at the taluk headquarters is absolutely inadequate to devote itself to such research work. We read in all the publications issued by the Government about these agricultural extensions, expressed in big words and in good language, but I submit that very little is done. Soil survey is so important that in many places in the State even out of the cultivable extent of land, a large proportion of land is hopelessly alkaline. In these alkaline lands nothing can be grown. They are absolute waste lands, but they are assessed waste; we pay land revenue without raising any crop in those lands. At present, the agriculturist knows a few of the costly methods. I submit a thorough research is to be undertaken. Classification must be systematically done and new methods must be invented to see how best these lands could be brought under the plough.

There is a huge extent in T.Narsipur Taluk which is absolutely alkaline. Even if an animal gets into that land, it will completely drown itself in the field. The only method that we know is to drain the underground moisture in the land by cutting trenches and it is a costly process and it will take a long time. Will it not be correct on our part to expect Government to conduct researches, and give us the best methods so that greater relief may be extended to people to bring all those fields under the plough ?

ಶ್ರೀ ಪಿ. ಆರ್. ರಾಮಯ್ಯನವರು (ಬಸವನಗುಡಿ).—ಸಾಯಿಲ್ ಸರ್ವೆ ವಿಷಯವನ್ನು ನಮ್ಮ ಸರ್ಕಾರದ ಗಮನಕ್ಕೆ ತಂದಿರುವುದು ಬಹಳ ಅಭಿನಂದನೀಯವಾಗಿದೆ. ವ್ಯವಸಾಯದ ಇಲಾಖೆಯಲ್ಲಿ ಅವರು ಕೊಟ್ಟಿರತಕ್ಕ ವಿವರವನ್ನು ನೋಡಿದರೆ ಸಾಯಿಲ್ ಸರ್ವೆ ವಿಷಯಕ್ಕೆ ಯಾವ ಗಮನವನ್ನೂ ಕೊಟ್ಟಿಲ್ಲವೆಂಬುದು ವಿದಿತವಾಗುತ್ತದೆ. ನಮ್ಮ ದೇಶದಲ್ಲಿ ವ್ಯವಸಾಯವನ್ನು ಹೆಚ್ಚಾದ ರೀತಿಯಲ್ಲ ಅಭಿವೃದ್ಧಿಪಡಿಸಬೇಕೆಂದು ವ್ಯವಸಾಯ ಇಲಾಖೆಯವರು ಅನೇಕ ವರ್ಷಗಳಿಂದ ಪ್ರಯತ್ನ ಪಡುತ್ತಿದ್ದಾಗ್ಗೂ ಈ ಸಾಯಿಲ್‌ಸರ್ವೆ ವಿಷಯಕ್ಕೆ ಗಮನವನ್ನು ಕೊಡದಿರತಕ್ಕುದು ಆಶ್ಚರ್ಯಕರವಾದ ವಿಷಯವಾಗಿದೆ. ಈಗ ನಾನು ಹೆಚ್ಚು ಆಹಾರವನ್ನು ಬೆಳೆಯಬೇಕು ಮತ್ತು ಹೆಚ್ಚು ಜಮೀನುಗಳಿಗೆ ನೀರು ಒದಗಿಸುವುದಕ್ಕೆ ನೀರಾವರಿ ಕಾಮಗಾರಿಕೆಗಳನ್ನು ಕೈಕೊಳ್ಳಬೇಕು, ಹೊಸ ಪ್ರಾಜೆಕ್ಟು ಕೈಕೊಳ್ಳಬೇಕು ಎಂಬುದಾಗಿ ಆಲೋಚಿಸುತ್ತಿರುವ ಕಾಲದಲ್ಲಿ ಸಾಯಿಲ್ ಸರ್ವೆ ವಿಷಯ ಎಷ್ಟು ಮುಖ್ಯವಾದುದೆಂಬುದನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕು. ಅಮೆರಿಕಾ ದೇಶದಲ್ಲಿ ಟಿನೆಸಿ ವ್ಯಾಲಿ ಎಂಬ ಕಡೆ ಒಂದು ಪ್ರಾಜೆಕ್ಟನ್ನು ಜಾರಿಗೆತಂದ ಸಂದರ್ಭದಲ್ಲಿ ಸಾಯಿಲ್ ಸರ್ವೆಗಾಗಿ ಎಷ್ಟೋಕೋಟಿ ಡಾಲರುಗಳನ್ನು ವ್ಯಯಮಾಡಿದ್ದಾರೆ. ಈಗ ಇಂಡಿಯಾ ದೇಶದಲ್ಲಿ ದಾಮೋದರ ವ್ಯಾಲಿ ಪ್ರಾಜೆಕ್ಟು, ಹಿರಾಕುಡ್ ಪ್ರಾಜೆಕ್ಟು ಮುಂತಾದುವು ನಡೆಯುವ ಪ್ರದೇಶಗಳಲ್ಲಿ ಸಾಯಿಲ್ ಸರ್ವೆನಡೆದು ಎಷ್ಟೋ ರಿಸರ್ಚ್‌ಮಾಡಿ, ವ್ಯವಸಾಯಕ್ಕೆ ಸಂಬಂಧಪಟ್ಟ ಅಂಶಗಳನ್ನು ತಿಳಿಸುತ್ತಿದ್ದಾರೆ. ನಮ್ಮ ದೇಶದಲ್ಲಿ ಹೊಸ ನೀರಾವರಿ ಕಾರ್ಯಗಳಾದ ಭದ್ರಾ ಮತ್ತು ನುಗು ಅಣೆಕಟ್ಟುಗಳನ್ನು ಕಟ್ಟುವ ಸಂದರ್ಭದಲ್ಲಿ ಹೆಚ್ಚು ಭೂಮಿಯನ್ನು ವ್ಯವಸಾಯಕ್ಕೆ ತರುವ ಸಂದರ್ಭದಲ್ಲಿ ಯಾವ ಯಾವ ಭೂಮಿಗೆ ಯಾವ ಯಾವ ಬೆಳೆಯನ್ನು ನಿಗದಿಮಾಡುವುದು ಉತ್ತಮ, ಯಾವ ಯಾವ ಬೆಳೆಯನ್ನು ತೆಗೆಯಬಹುದು ಮತ್ತು ಯಾವ ಯಾವ ಗೊಬ್ಬರ ಹಾಕಬಹುದು, ಎಷ್ಟು ಪ್ರಮಾಣದಲ್ಲಿ ಹಾಕಬಹುದು, ಯಾವ ಯಾವ ಅಂಶಗಳು ಕಡಮೆಯಾಗಿದೆ ಎಂಬುದನ್ನು ಪರ್ಯಾಲೋಚಿಸಬೇಕಾಗಿದೆ. ಮನುಷ್ಯನ ದೇಹಕ್ಕೆ ನಾವು ಕೆಲವು ವಿಟಮಿನ್ಸ್ ಹೆಚ್ಚಾಗಿ ಹಾಕಿ ದೇಹಕ್ಕೆ ಖುಮುಕ್ಕು ಕೊಡುವ ಹಾಗೆ ಭೂಮಿಗೂ ಒಂದು ಪುಷ್ಟಿಕೊಡುವುದಕ್ಕೆ ಕೆಲವು ಹೆಚ್ಚಾದ ವಸ್ತುಗಳನ್ನು ಸೇರಿಸಬೇಕು, ಅದನ್ನು ತಿಳಿದುಕೊಳ್ಳಬೇಕಾದರೆ ಸಾಯಿಲ್ ಸರ್ವೆಮಾಡುವುದು ಆವಶ್ಯಕ. ಇದು ಬಹಳ ಮಟ್ಟಿಗೆ ಪಾಶ್ಚಾತ್ಯದೇಶಗಳಲ್ಲಿ ನಡೆಯುತ್ತಿದೆ. ಮತ್ತು ನಮ್ಮ ಇಂಡಿಯಾ ದೇಶದಲ್ಲೂ ಇಂಡಿಯಾ ಸರ್ಕಾರದವರು ಈ ವಿಜ್ಞಾನ ಸಂಶೋಧನೆಯನ್ನು ಮಾಡಿಸುವುದಕ್ಕಾಗಿ ಸಾಯಿಲ್ ಸರ್ವೆ ಅನೇಕ ಕಡೆ ಮಾಡುತ್ತಿದ್ದಾರೆ. ಆದರೆ ನಮ್ಮ ಸಂಸ್ಥಾನದಲ್ಲಿ ಈ ಸಂಬಂಧವಾಗಿ ಯಾವ ಪ್ರಯತ್ನವೂ ನಡೆದಿಲ್ಲ. ಆದ್ದರಿಂದ ಈಗಲಾದರೂ ಈ ವಿಷಯಕ್ಕೆ ಹೆಚ್ಚು ಗಮನಕೊಟ್ಟು ಸಾಯಿಲ್ ಸರ್ವೆ ಕೇಂದ್ರವನ್ನು ಸ್ಥಾಪಿಸಬೇಕು. ಸಾಯಿಲ್ ಸರ್ವೆಯನ್ನು ಆದಷ್ಟು ಬೇಗ ಕೈಕೊಳ್ಳಬೇಕು ಎಂದು ಸೂಚಿಸುತ್ತೇನೆ.

Sri T. MARIAPPA (Mysore City North).—Mr. Speaker, Sir, it was indeed very interesting to listen to the very vital observations made by Sri A. Bheemappa Naik on the question of soil survey in Mysore. It is, no doubt, as he has observed, very important that the soil analysis should be undertaken as early as possible. Sir, Mysore soils have no doubt been classified. We have got Red Soil, Red Lomi, Sandy Weed, Black Cotton, etc. These

(SRI T. MARIAPPA)

are general classifications for the purposes of assessment. But as one writer has put it, Mysore has got very poor soil. My Hon'ble friend Sri Panchakshariah was saying that we have got very good soil and very fertile soil too. Perhaps a plot here and a plot there may be fertile. Generally speaking, Mysore soil is very poor. As one writer has put it, it is inchoate and poor soil. That is the reason why there is greater need for soil analysis and furnishing proper opinion to the cultivator. During soil survey in the Irwin Canal area, the department collected very important material—material of immense use to the cultivator. But that I think is now out of date and further soil analysis has to be done, because, after the advent of canals, the method of cultivation has contributed for a lot of change in the existing composition of the soil. Sir, you are aware that our old system of cultivation has gone on for centuries. Mysore, along with the rest of India, has got an ancient civilization and for thousands of years, the soil has been tapped and necessarily it has become poor and exhausted. Unless we enrich the soil with the necessary components, we will not be able to get the best out of the soil. As you are aware, there are soils rich in phosphates. Such soils require nitrogenous material if the crop is to be very good. There are soils where we have got plenty of nitrogenous material. Where there is humus and where there is green manure, you get more nitrogenous material. Such soils require phosphates if we have to get the required maximum yield. Most of our Members come from the rural areas and they are aware that nitrogenous manure contributes for luxurious growth and phosphates for better yield. It is from this point of view that soil analysis along with the survey has to be undertaken. The results obtained have not only to be tabulated, but re-examined almost once in five or ten years, because the soil also undergoes change according to the manner and method of cultivation. At least in irrigated areas, more than in any other parts, the soil analysis is absolutely necessary. My Hon'ble friend Sri Srinivasa Iyengar was referring to the reclamation of alkaline soils. That can afford to wait for a little longer. Wherever there is already cultivation and wherever there is already pressure on land, it is there that we have to pass on the correct information to the cultivator.

Sir, the task of soil analysis and survey is not easy. It is a costly process. We have to have almost an army of chemists and surveyors who must be trained before they could be put on this important work. But that should not deter us from undertaking this job at least on a limited scale. The Government of India are having recourse to what is known as the Random Sample Survey. Even that could be done here. Enquiries could be made by the Agricultural Department. We have a competent staff in the Agricultural Department. The Random Sample Survey work could be undertaken by them. More than collecting the information. there is greater necessity to pass on the information to the agriculturist. Mysore no doubt consists of very small cultivators, who are too poor to afford to pay for such investigation. Let us not compare Mysore with America. In America the cultivator can afford to pay and they are paying. The Government agencies in America are running these, but the agriculturists pay. The agriculturists there are big farmers. Perhaps you may have heard that each farmer in America owns at least 150 acres. Therefore they can afford to pay. Our cultivators are illiterate no doubt. But they are illiterate scientists ; to the best of their ability, they are doing the work. It is a miracle how we are carrying on with agriculture. If we can supplement their knowledge with the correct data with regard to the contents of the soil, it will go a long way in saving the agriculturist from utter ruination. As I said, Sir, it is a very costly experiment and in the beginning the results may not be commensurate with the money spent and the energy put

in; but still as Sri Bheemappa Naik put it, it is the foundation on which we have to build; it is the most important preliminary work which we have to undertake. But as we are aware, financial stringency is facing us. Therefore, keeping that in view, I would suggest to Government to do it on a very small scale in an area where it has come to their notice that the target production is below the normal. At least in such areas they must undertake it and see how best the deficiency of either Nitrogen or Phosphate in the soil could be remedied. It is no doubt true that, as Sri Srinivasa Iyengar put it, we were distributing manures. But the composition of these manures is on a rough and ready basis. It is true also that we have for paddy an admixture of Ammonium Sulphate, Nitrogen, oil cake and a little of Phosphate. That is only for normal soil. There is also soil poor in Nitrogen or Phosphate. Therefore the best way is that unless the soil is examined and unless that information is passed on to the raiyat he will not be able to know what kind of manure he has to purchase. Therefore that is very necessary. But to charge the department that it is now engaged in distributing manure is not correct.

Sri S. SRINIVASA IYENGAR.—On a point of order, Sir. I said that work has now gone on to the Multi-purpose Co-operative Societies. I may not be charged with the observation that I said that the department has undertaken the distribution of manure.

Sri T. MARIAPPA.—The question of distribution is really very important. The raiyat has to get manure, agricultural implements and seeds. In fact there is lot of clamour for these articles. Government divested the technical officers of the power of distribution with a view to see that these technical officers engage themselves in the technical side of the job. That is the idea underlying the Government policy. In a country like India, it takes time for them to adjust themselves to the new set-up. As Sri Srinivasa Iyengar put it, it will not be possible for one Agricultural Inspector to handle the entire agricultural economy of that area.

One Hon'ble MEMBER.—Two.

Sri T. MARIAPPA.—Not necessarily two, in some cases three or even more.

Sri S. SRINIVASA IYENGAR.—As many as.........

Sri T. MARIAPPA.—Yes; but the question of finance comes. Who will pay for the particular services that the Government render? It is a very slow process. But nonetheless the staff at the disposal of the department must certainly mix with the raiyats. At least they must contact most important raiyats in that area. Steps have been taken to organise Raiyats Associations in each taluk of which the Agricultural Inspector is the Secretary. They must periodically convene meetings of important agriculturists and exchange information, listen to their grievances and try to remedy them. In fact they will not be worth their salt unless they engage themselves in passing on the information obtained as a result of research to the raiyat and try to help him in his work. I would like in this connection to say that the observations made by Sri Panchaksharaiah were irrelevant. I would like to tell him one fact to enlighten him on this subject. The department has really done good work with regard to propagation and encouragement of M.A. 5 cotton. The area is extended by 16,000 acres. It was solely due to the efforts of the Agricultural Department. The Central Cotton Committtee of Bombay and the Government of India have repeatedly pressed on the attention of the Government of Mysore that they should extend the area of cultivation of M.A. 5 Cotton. I am also aware of the cotton known as Lakshmi and Jayawant. They are in a flourishing condition in Bombay. I also got seeds of Lakshmi and Jayawant cotton and got them distributed in Chitaldrug at the request of my friends. Let us not therefore condemn before we fully know the thing. After all we are responsible men. We should be able to know the facts, sift them and try to remedy the defects and set things right.

With these few observations I would like to commend the underlying

(SRI T. MARIAPPA)

principles of this cut motion for the acceptance of the Government.

Sri M. SHANKAR LINGE GOWDA (Nagamangala).—The explanation given by the Hon'ble ex-Minister regarding Grow More Food Campaign is exaggerating and it is nothing but oratory.

Mr. SPEAKER.—The Hon'ble Member may speak on the cut motion rather than pass remarks on the speech of the previous speaker.

ಶ್ರೀ ಎಂ. ಶಂಕರಲಿಂಗೇಗೌಡರು.—ಅವರು ಪ್ರತಿಯೊಂದು ಸಂದರ್ಭದಲ್ಲೂ 1948ನೇ ಇಸವಿಯಿಂದ ಹೆಚ್ಚು ಆಹಾರ ಬೆಳೆ ಬೆಳೆಯುವ ಯೋಜನೆ ವಿಚಾರ ಹೇಳುತ್ತಾರೆ. ಮೊನ್ನೆ ಕೂಡ ಹೇಳಿದರು.......

Mr. SPEAKER.—This refers to soil survey.

Sri M. SHANKAR LINGE GOWDA.—Please excuse me.

Mr. SPEAKER.—The Hon'ble Minister will reply.

Sri H. SIDDAVEERAPPA.—Mr. Speaker, Sir, I thank my friend Sri Bheemappa Naik for having availed himself of this opportunity of bringing home or driving home the point about the extreme urgency and the need for the Government to bestow some attention on this vital subject regarding soil survey. I may at once say that the Government are in full agreement with regard to the spirit underlying this cut motion. If our agriculture is to be retained as a national industry, as it ought to be, because today it gives food for nearly eighty per cent of the population of the State and if our agricultural industry has become a source of profitable occupation, I am equally convinced that the necessary scientific knowledge required with regard to the variety of the soil, the nature of the soil, the kind of crop that has to be grown, and all that is absolutely necessary. But we have to bear in mind that in tackling a subject of such vital importance the limiting factors of the Government will have to be taken into consideration.

2 P.M.

Sir, it is estimated that if the soil survey on the lines suggested by this cut motion is undertaken, the Government must be prepared to spend a sum not less than 50 lakhs of rupees. Of course, in his anxiety to press home the point, my friend Sri Bheemappa Naik said that the Agricultural Department has not been doing or discharging its duties properly. Of course, it is a usual with him to say so on account of the vehemence at his command, but I presume it is only to bring home his point. I understand him to mean that the Agricultural Department must concentrate greater attention on this aspect. Sir, it may not be out of place to bring a particular point to the notice of this House that ever since the inception of the Agricultural Department in Mysore, Mysore has never lagged behind in the matter of scientific advancement and the Chemistry section of this department has been entrusted to do this kind of soil survey. Sir, soil survey is not a subject unknown to Mysore. I am one of those who believe that self-condemnation is as bad as self-adulation. It may as well be that we have not achieved as much progress as we expected to achieve, because in a Welfare State like Mysore where we have better facilities, the demand will be still more for better achievement. But this much can be said without fear of contradiction, the Agricultural Department in Mysore has not yielded its place to any other part of India in the progressive development of some of the ideals and some of the ideas too. I may illustrate my point by saying that the Chemistry Department in Mysore had undertaken soil survey right from the last 30 to 40 years. I may say, with pardonable pride, that Mysore was perhaps the first State in India to undertake soil survey where major irrigation works have been undertaken. It is well-known, and it is common knowledge that in the years 1932-35 soil survey was conducted under the Visvesvaraya Canal area, and the Government have thought of conducting another soil survey, a re-soil survey as it were, now

that a long period has elapsed, to find the effect of these extensive irrigation projects on the soil. Sir, it is also known that under the recent 'Kariyala' project we have undertaken soil survey. We have undertaken soil survey in the 'Bhadra' channel also. Therefore, let it be clearly understood and let it be also known that the Agricultural Department has not been totally negligent of its duties with regard to this important subject of soil survey. It may also be said Sir, with regard to this Chemistry Department, that many more things stand to its credit. I could have convinced not only the Mover of this cut motion but also this House as to the services, may I say yeoman services, rendered by the Agricultural Department during the last several years in the matter of, say, introducing improved seeds, manure, and pest control and so many other things, but if I try to give the details I am afraid you may call me to order saying that it is irrelevant to this cut motion. So, suffice it if I say that self-condemnation, in my humble opinion, is not correct. Of course, the Department may require a little pruning up and toning up.

Sri A. BHEEMAPPA NAIK.—Self-praise is also not correct.

Sri H. SIDDAVEERAPPA.—Self-praise is not correct. But there is a difference between vanity and pride. A man can justifiably be proud. Sir, I may say by way of illustrating the work done about compost: in the year 1944-45 we had hardly a few tons and in the year 1950. we have 36,000 tons. And then, take rural waste: in 1947-48 it was 10,000 tons, in 1951-52 it was 2·4 lakhs tons. I would be certainly one of those to criticize, and I would certainly agree with my friends' advise, if the Government were not satisfied with the usefulness of the Agricultural Department to the State.

Coming to the subject of this cut motion, it can be seen that as early as 1938-40 Government thought of a comprehensive scheme for soil survey. But due to the war conditions, that could not be taken up. Now, I am extremely thankful to Sri T. Mariappa who was rather mild in his expectation. I am glad to say that the Government can go to the extent he wants them to move in that particular direction. Government will certainly undertake this year a sample pilot survey in certain selected areas so that they may serve as useful 'climatic complex zones' etc. Certainly, I promise to see that a sample survey is undertaken as suggested by my friend. I hope the critics of the department, so far as soil survey is concerned, are satisfied.

I want to say only one sentence more by way of reply to the criticism levelled by Sri Panchaksharaiah because I do not want to go to details. I only say that the reply given by Sri T. Mariappa is sufficient for the purpose. I hope, Sir, with this assurance by Government, my friend Sri A. Bheemappa Naik will be good enough to withdraw the cut motion.

Sri A. BHEEMAPPA NAIK.—I beg leave of the House to withdraw my cut motion.

The cut motion was, by leave, withdrawn.

Mr. SPEAKER.—All the cut motions on this Demand are over. Some Hon'ble Members wanted to have a discussion on the main Demand. I think, while discussing the food policy and on two or three other occasions, the Members had their opportunity to express their views. There is also the next Demand, *i.e.*, Rural Development, which, in the opinion of some Members, is also important. Now, it is left to the Hon'ble Members to have a debate on this main Demand or to proceed to the next Demand.

Janab J. MOHAMED IMAM.—Some of the Members are anxious to offer their remarks. I think till 3 o'clock (it was 2-8 P.M. at this stage) we can have a debate on this demand.

Sri A. BHEEMAPPA NAIK.—Rural Development and Industries, all these Demands are there. It is better that we close the debate on this demand at 2-30.

Mr. SPEAKER.—Yes. Let each Member speak for five minutes and we

(MR. SPEAKER)

shall close the discussion on this demand at 2-30.

(Sri S. SRINIVASA IYENGAR—*rose*.)

MR. SPEAKER.—The Hon'ble Member had an opportunity to talk on the previous cut motion. Sri M. Linganna and Sri U. M. Madappa may have the opportunity now.

Sri S. SREENIVASA IYENGAR.—I will take only five minutes, Sir.

Mr. SPEAKER.—Yes.

Sri S. SREENIVASA IYENGAR (T.-Narsipur).—Mr. Speaker, as the time allotted to me is just five minutes, I will confine myself to one or two points under the Grow More Food Scheme while opposing this Demand.

Under the Grow More Food Scheme we have spent nearly about two crores of rupees without any appreciable rise in the quantity of food produced. Our surplus holders remain at 1·87 lakhs in spite of our heavy expenditure and most of the.........

Sri T. MARIAPPA.—Surplus holders are 7 lakhs.

Sri S. SREENIVASA IYENGAR.—Surplus holders in the State are 1·87 lakhs, is the answer furnished by Government in reply to a question. I will stand corrected if correct figures are furnished.

Mr. SPEAKER.—Yes, there is the answer to a particular question. It is given as 1·87 lakhs. I too got some doubt when I read it. It must be a *bona fide* mistake. It may be corrected.

Sri H. SIDDAVEERAPPA.—I will examine it, Sir.

Sri S. SREENIVASA IYENGAR.—Any way that is the figure furnished by Government.

Sri H. SIDDAVEERAPPA.—Sir, it is my practice that if any mistake is entered, I will certainly apologise to the House and get it corrected.

Sri S. SREENIVASA IYENGAR.—Sir, so far as the Grow More Food Scheme is concerned, I beg to bring to the kind notice of this House that although a sum of 6 lakhs of rupees has been spent under this scheme to extend the Thuruganoor branch, still water has not been allowed to flow in that channel. If you had only taken care to see that water was let in this channel, 6,000 acres could have been brought under irrigation and nearly 60,000 pallas of paddy grown in the T.-Narsipur Taluk. In addition to that, while spending huge sums of money under the Grow More Food plan, the Government have lost both ways. Not only are they paying interest on the loans raised, but they have also been unable to convert whatever they could save out of the general revenues into brick and mortar. I submit Sir, they could have certainly financed such of those schemes which would have yielded some appreciable results. There are tanks in T.-Tarsipur Taluk which breached 10 years ago and are still not cared for. Huge extents of *atchkat* under these tanks are lying fallow. Do we call this as gross negligence or do we term it as inability on our part to make ourselves felt at the Government level ? I submit Sir, that 25 tractors for providing facilities to the raiyats owning an extent of 87 lakhs of cultivable land in the State, are absolutely inadequate.

Sri A. BHEEMAPPA NAIK.—It is not 25 tractors.

Sri S. SREENIVASA IYENGAR.—I must say 25 bulldozers and 67 tractors. Am I correct ?

Sri A. BHEEMAPPA NAIK.—125 tractors.

Sri S. SREENIVASA IYENGAR.—But working tractors are 67. Looking at that figure, I would say Sir, that we must own more number of tractors and bulldozers to aid the agriculturist so that he can bring a larger extent under the plough to contribute to the grow more food campaign. The major irrigation schemes undertaken so far have cost us 2·15 crores while the estimated cost is 24·2 crores. I would like to know when we will be able to complete these works. Perhaps, it will be 100 years by the time we complete them. On the other hand, I submit Sir, that the Government should take some measure to raise some money and see that at least these two projects, the Thunga and the Nugu, are completed within a period of 2 or 3 years, thereby bringing under its

operation nearly 40,000 acres of land. In addition to that Sir, I find in vol. 2 of the Budget many works for the restoration of tanks. Most of these estimates have been prepared long back. By the time the work is undertaken revision of the estimate would be necessary. By the time they complete half the portion of the work, a further revision would be necessary. By the time they complete the work it would be nearly 10 years from the date of the original estimate; and I submit that all these things are due to delay in the sanction of these estimates. The earnestness on the part of the Department to complete them and the seriousness with which.........

Mr. SPEAKER.—The Hon'ble Member is speaking mostly with regard to the Demand No. 37—Irrigation Works—rather than on this department.

Sri S. SREENIVASA IYENGAR.—Under the Grow More Food campaign some restoration of tanks has been taken up.

Mr. SPEAKER.—Anything could be brought in. Yesterday the Hon'ble Member discussed about the food policy wherein he has referred to all these things. If any difficulties are there in the working of the Agricultural Department, he can refer to them and make suggestions.

Sri S. SREENIVASA IYENGAR.—Yes Sir, I will take some other opportunity to speak on the Irrigation Works.

Sri M. LINGANNA (Nanjangud).—Sir, the whole problem of agriculture and the policy we are pursuing in the State are rather out-moded. Why I offer that particular remark is, as we know, in other parts of the world they are raising huge crops with scientific equipment. We also know full well how best this problem of agriculture is being tackled on scientific basis. Every part of this agricultural problem is treated as if it were a laboratory problem. While I offer this remark, the Tennessee Valley Scheme will be before my mind. It is only one example we find in the whole world, leaving of course the agricultural experiments that have been conducted and that have yielded successful results in Russia. And probably this is the only one example we can copy and which is suited to the civilisation that we have inherited in this land. I say that is the only alternative because we are not in a position to shake off the old institutions and customs that we have inherited, from ages long. From this point of view, if we examine the agricultural problem in the State, I am afraid we are centuries behind. Take for example the subject that we have discussed a few minutes ago—the question of soil survey. No doubt the Hon'ble Minister for Agriculture has placed before this House that Mysore State was the pioneer in tackling this particular problem and ever since 1929 the survey has been made. But I am afraid that due to various agricultural operations and also to the operations of Nature, soil changes its surface and therefore a periodical soil survey is essential. And Sir, now he has given a hope to this House, like the Government of India, that he is going to take up a random soil survey here and there. I am afraid that the little efforts that the Hon'ble Minister is going to put forth in this direction will not yield the full results, because, I am constrained to observe, we are given to this habit of taking up sample survey and of experimenting here and there in the case of a huge problem like Agriculture. Take for example the community projects, which are being propounded by the Central Government. No doubt our Government is also falling in line with them. Further, some lakhs of rupees are being given to our Government by way of loans and this kind of project is going to be started in Sorab and Shikaripur Taluks. I am afraid this sort of piece-meal work, so far as the agricultural problem is concerned, will not take us a long way and the lot of the agriculturist cannot be improved by such piece-meal methods. Why I am saying this is, when we take into account the *per cap ta* income in India—when I say *per capita* I say that with authority—it is anything between 25 to 33 rupees as per the statistics provided by the Government of India and as per the Bombay Planners it varies between

(SRI M. LINGANNA)

Rs. 66-70 and the cloth that is worn, per year, is only 6 to 7 yards. And why do we find such a bad state of affairs in the rural parts, why is it that the agricultural problem is not given the proper attention that it deserves? We have got so many factories established here and there. We have given lakhs of rupees by way of loans to these factories. But look at this particular agricultural problem which is being neglected. We are not treating it on the same lines as we are treating the other industries. No doubt, certain measures have been enacted like the Agricularist Relief Act and the Debt Conciliation Act and also they have put in Rs. 16–17 lakhs in the Land Mortgage Bank by which the poor agriculturist can get short-term or long-term loans. But this kind of help will not improve the fate of the agriculturist. The Community project started in Sorab and Shikaripur is on an experimental basis. I do not know whether this community project is going to be taken up in other Districts or not. And also it is not known to us whether this Community project will be put on a scientific basis. And as every one has known, the Prime Minister of India is very much inclined to say that every one of us should have a scientific attitude. The Ministers of our State should take this particular attitude in regard to the problems of the State; much more so it is needed in regard to the agricultural problem of the land. Some of my friends were pleased to state that the extent of fallow land is increasing day by day. If my memory does not give me a slip, I am afraid that nearly 17 lakhs of acres of land which are cultivable are lying fallow.

SRI H. SIDDAVEERAPPA.—For the information of my friend, it is 14,59,000 acres.

SRI M. LINGANNA.—This is an index to the agricultural economy. As I said, the agriculturist mainly depends upon the land and as it has been stated just a few minutes back, there are only 7 lakhs of surplus holders and the rest are mainly dependent on agricultural labour. If such a large number of agricultural labour are left to themselves and to their fate and if their economy is not improved and the State is not in a position to chalk out a programme for their amelioration or betterment, I am afraid, there will be one more social revolution and they will become an easy fodder for one issue or the other.

ಶ್ರೀ ಡಿ. ದೇವರಾಜ ಅರಸ್‌ಅವರು (ಹುಣಸೂರು).—ಸ್ವಾಮಿ, ಈ ವ್ಯವಸಾಯದ ಇಲಾಖೆಯೇನೋ ಬಹಳ ಮುಖ್ಯವಾದದ್ದೇ. ಇದನ್ನು ಮನಗಂಡೇ ನಮ್ಮ ಸರ್ಕಾರದವರು ಈ ಸಾಲಿಗೆ ಹೋದ ಸಾಲಿಗಿಂತ 10ಲಕ್ಷ ರೂಪಾಯಿಗಳನ್ನು ಜಾಸ್ತಿ ಒದಗಿಸಿದ್ದಾರೆ. ಇದು ಬಹಳ ಸಂತೋಷದ ವಿಚಾರವೇ. ಆದರೆ ನಾನು ಕೆಲವು ವಿಷಯುಗಳ ಕಡೆಗೆ ಈ ಇಲಾಖೆಯ: ಬಗ್ಗೆ ಸರ್ಕಾರದವರ ಗಮನವನ್ನು ಸೆಳೆಯಲು ಒಂದೆರಡು ಬಹಳ ಮುಖ್ಯವಾದ ವಿಚಾರಗಳನ್ನು ತಿಳಿಸುತ್ತೇನೆ. ಆದರೆ ಈ ದಿವಸ ನಾವು ಈ ಇಲಾಖೆಗೆ ಎಷ್ಟು ದುಡ್ಡನ್ನು ಖರ್ಚು ಮಾಡುತ್ತೇವೋ ಅಷ್ಟಕ್ಕೆ ತಕ್ಕಹಾಗೆ ಜನರಿಗೆ ಉಪಕಾರವಾಗದಿದ್ದರೂ, ಕೆಲಕೆಲವು ಭಾಗದಲ್ಲಿ ಕೆಲವರಿಗೇನೋ ಇದರಿಂದ ಉಪಯೋಗವಾಗಿರುತ್ತದೆ. ಆದರೂ ಒಟ್ಟಿನಲ್ಲಿ ಹೇಳುವುದಾದರೆ, ಈ ಇಲಾಖೆಯಿಂದ ರೈತರಿಗೆ ಆಗುತ್ತಿರುವ ಉಪಕಾರಕ್ಕಿಂತಲೂ ಅಪಕಾರವೇ ಜಾಸ್ತಿಯಾಗಿರುತ್ತದೆಯೆಂದು ಹೇಳಿದರೆ ತಪ್ಪಾಗಲಾರದು. ಹೀಗೆ ತಪ್ಪಾಗಲಾರದು ಎಂದು ತಿಳಿಸಿದ್ದರ ಬಗ್ಗೆ ಒಂದೆರಡು ವಿಚಾರ ಹೇಳುತ್ತೇನೆ.

ಪ್ರೊಪಗ್ಯಾಂಡಾ ಡಿಪಾರ್ಟ್‌ಮೆಂಟಿನಲ್ಲಿ 6ಲಕ್ಷ ರೂಪಾಯಿಗಳ ಖರ್ಚನ್ನು ತೋರಿಸಿದ್ದಾರೆ. ಈ ಮೊಬಲಗನ್ನು ಅವರು ಯಾವ ಪ್ರೊಪಗ್ಯಾಂಡ ಮಾಡಲಿಕ್ಕೆ ಖರ್ಚುಮಾಡಿದ್ದಾರೋ ಅದು ನನಗಂತೂ ಅರ್ಥವಾಗುವುದಿಲ್ಲ. ಇಷ್ಟೊಂದು ಮೊಬಲಗನ್ನು ಅವರು ಖರ್ಚುಮಾಡಿರಬೇಕಾಗಿದ್ದರೆ – ಅವರು ರೈತರ ಹಿತದೃಷ್ಟಿಯಿಂದ, ಆತನಿಗೆ ಸರಿಯಾದ ಒಂದುತಿಳುವಳಿಕೆ ಕೊಡಲು, ಅಥವಾ ಆತನಿಗೆ ಯಾವ ಒಂದು ವಿವೇಕವನ್ನು ಹೇಳಲು ಈ ಹಣವನ್ನು ಖರ್ಚು

ಮಾಡಿದ್ದಾರೆಯೆ? ಎಂದು ನಾನು ಕೇಳಬೇಕಾಗಿದೆ. ಇಂಥ ಜಮೀನಿಗೆ, ಈ ವರ್ಷ ಇಂಥ ಬೆಳೆಯನ್ನೇ ಇಡಿ, ಈ ವರ್ಷ ಇಂಥ ಫಸಲನ್ನಿಟ್ಟರೇ ಅದು ಚೆನ್ನಾಗಿ ಬೆಳೆಯುತ್ತದೆ, ಈ ವರ್ಷ ಮಳೆ ಬಹಳ ಕಡಮೆಯಾಗಿದೆ, ಆದ್ದರಿಂದ ನೀವು ಖುಷ್ಕಿ ಫಸಲುಗಳನ್ನೇ ಎಂದರೆ, ರಾಗಿ, ತೊಗರಿ, ಅವರೆ, ಇತ್ಯಾದಿಗಳನ್ನು ಹಾಕಬೇಡಿ, ಅಥವಾ ಯಾವ ಒಂದು ರೊಟೇಷ್ಹ ಪದ್ಧತಿಯೆಂದು ಹೇಳುತ್ತಾರೋ, ಅದಕ್ಕನುಸಾರವಾಗಿ, ಯಾವ ಬೆಳೆ ಆದನಂತರ ಯಾವ ಬೆಳೆಯನ್ನಿಡಬೇಕು, ಹೊಗೆಸೊಪ್ಪನ್ನು ಹಾಕಿದ್ದ ಭೂಮಿಗೆ ಆನಂತರ ಯಾವ ಬೆಳೆಯಿಡಬೇಕು, ಎಂಬ ಇತ್ಯಾದಿ ವಿಚಾರಗಳ ಬಗ್ಗೆ ತಿಳುವಳಿಕೆ ಕೊಡಲು ರೈತನಿಗೇನಾದರೂ ಈ ಹಣವನ್ನು ಖರ್ಚುಮಾಡಿದ್ದಾರೇನು? ಇಲ್ಲ; ಹೀಗೆ ಅವರು ಖರ್ಚುಮಾಡಿರತಕ್ಕ ಒಂದು ಪೈಯನ್ನುಕೂಡ ಈ ರೀತಿಯ ಕೆಲಸಗಳೊಂದಕ್ಕೂ ಉಪಯೋಗಮಾಡಿರುವುದಿಲ್ಲ. ಆದರೆ ಇಲಾಖೆಯವರೇನೋ ಕೆಲವು ಬುಕ್‌ಲೆಟ್ಸ್‌ಗಳನ್ನು ಮಾಡಿ ಜನರಿಗೆ ಹಂಚಿರಬಹುದು. ಆದರೆ ಅಂಥ ಒಂದು ಬುಕ್‌ಲೆಟ್ಸ್‌ಗಳನ್ನು ಹಂಚಿಬಿಟ್ಟನಂತರ, ಜನರು ಆ ಪುಸ್ತಕಗಳನ್ನು ತೆಗೆದುಕೊಂಡು, ಅವುಗಳನ್ನು ಓದಿ, ಅದರಂತೆ ವ್ಯವಸಾಯ ಮಾಡಲು ದೇಶದಲ್ಲಿರತಕ್ಕ ಎಷ್ಟು ಭಾಗದ ಜನಗಳಿಗೆ ಇದು ಸಾಧ್ಯಾವಾದೀತೆಂಬುದನ್ನೂ ಸ್ವಲ್ಪ ಆಲೋಚಿಸಿ ನೋಡತಕ್ಕ ವಿಚಾರವಾಗಿದೆ. ನಮ್ಮ ದೇಶದಲ್ಲಿ ವಿದ್ಯಾವಂತರ ಸಂಖ್ಯೆ ಎಷ್ಟಿದೆ? ಓದಲು ಎಷ್ಟು ಜನರಿಗೆ ಬರುತ್ತದೆ? ಹೀಗೊಂದು ಪ್ರಚಾರದಿಂದ ದೇಶಕ್ಕೆ ಏನು ಉಪಕಾರವಾದೀತು? ಅವಿದ್ಯಾವಂತರು ತುಂಬಿತುಳುಕುವಂಥ ನಮ್ಮ ಈ ದೇಶಕ್ಕೆ ಇಂಥ ಪುಸ್ತಕ ಪ್ರಚಾರವೇನೂ ಉಪಕಾರ ಮಾಡಲಾರದು. ಇಷ್ಟೇ ಅಲ್ಲದೆ, ಈ ವ್ಯವಸಾಯದ ಇನ್‌ಸ್ಪೆಕ್ಟರವರುಗಳಿಗೆ Practical side of things ಒಂದೂ ಗೊತ್ತಿರುವುದಿಲ್ಲ. ಅಲ್ಲದೆ ಈಗ ಅವರು ತಯಾರಿಸಿರತಕ್ಕ ಹೊಸಬಗೆಯ ಆಧುನಿಕ ಮಾದರಿಯ ನೇಗಿಲಿನಿಂದ, ನಮ್ಮ ವ್ಯವಸಾಯಗಳಿಗೆ ಖಂಡಿತವಾಗಿಯೂ ಏನೂ ಪ್ರಯೋಜನವಾಗುತ್ತಿಲ್ಲ. ಈ ಇಲಾಖೆಯವರ ನೇಗಿಲಿಗಿಂತಲೂ, ನಮ್ಮ ನಾಡು ನೇಗಿಲೇ ಬಹಳ ಅನುಕೂಲವಾದದ್ದಾಗಿದೆ. ಅದಕ್ಕೆ ಕಾರಣವೇನೆಂಬುದನ್ನೂ ಸಹ ಈಗ ತಿಳಿಸುತ್ತೇನೆ. ಇಲಾಖೆ ನೇಗಿಲಿನಿಂದ ಭೂಮಿಯನ್ನು ಉತ್ತು ಬೆಳೆಮಾಡಿದ ಕೆಲವು ಜಮೀನುಗಳಲ್ಲಿ ಬೆಳೆ ಬೆಳೆಯುವುದು ತೀರ ಕಡಮೆಯಾಗಿರುತ್ತದೆ. ಇದಕ್ಕೆ ನಾನು ಪ್ರತ್ಯಕ್ಷ ರುಜುವಾತುಗಳನ್ನು ಕೊಡಬಲ್ಲೆ. ನಮ್ಮ ಭೂಮಿಯಲ್ಲಿ ಇರತಕ್ಕ ಸಾರವೆಲ್ಲವೂ ಕೇವಲ 5-6 ಇಂಚುಗಳ ಆಳದಲ್ಲಿ ಇರುತ್ತದೆ. ಇಂಥ ಭೂಮಿಗಳಲ್ಲಿ ಆ ಸೀಮೆ ನೇಗಲಿನಿಂದ ಉತ್ತರೆ ಅದು ಭೂಮಿಯನ್ನು 8-9 ಇಂಚುಗಳ ಮೇಲೆ ಆಳವಾಗಿ ಉಳುವುದರಿಂದ ಬೆಳೆಯಿಡುವಂಥ ಪೈರುಗಳಿಗೆ ಅಲ್ಲಿ ಆವಶ್ಯಕವಾದ ಸಾರವಸ್ತುಗಳು ಇಲ್ಲದೇ ಇರುವುದರಿಂದ ಆ ಬೆಳೆಯಲ್ಲಿ ಬರತಕ್ಕ ಫಸಲೂ ಕೂಡ ಬಹಳ ಕಡಮೆಯಾಗಿರುತ್ತದೆ. ಈ ಇಲಾಖೆಯವರು ಇಲ್ಲಿಯವರೆಗೇನಾದರೂ ಆ ನೇಗಿಲುಗಳಿಂದ ಇಂಥ ಭೂಮಿಯನ್ನು ಉಳಬೇಡಿ ಅಥವಾ ಉಳಬೇಕು ಎಂದು ಏನಾದರೂ ಹೇಳಿದ್ದಾರೆಯೇ?

ಅಧ್ಯಕ್ಷರು.—ಅವರಿಗೇನೂ ಗೊತ್ತಿಲ್ಲವೆಂದು ತಾವು ಹೇಗೆ ಹೇಳುತ್ತೀರಿ? ಇಂಥದನ್ನು ಮಾಡಿಸಿಕೊಡಿ ಎಂದು ತಾವು ಕೇಳಬಹುದಲ್ಲ?

ಶ್ರೀ ಡಿ. ದೇವರಾಜ ಅರಸ್‌ರವರು.—ನಮ್ಮ ನಾಡು ನೇಗಿಲನ್ನೇ ಸರಿಯಾಗಿ ಎಳೆಯಲು ನಮ್ಮ ಎತ್ತುಗಳಿಗೆ ಸಾಧ್ಯವಿಲ್ಲದಿರುವಾಗ, ಇನ್ನು ಆ ಕಬ್ಬಿಣದ ನೇಗಿಲನ್ನು ಎಳೆಯಲು ಈ ಎತ್ತುಗಳಿಂದ ಸಾಧ್ಯವಿದೆಯೇ? ಇಂಥ ಸಾಮಾನ್ಯ ವಿಚಾರಗಳಲ್ಲಾದರೂ ಇವರಿಗೆ ತಿಳಿವಳಿಕೆ ಇರಬೇಡವೆ ಎಂದು ನಾನು ಕೇಳುತ್ತಿರುವುದು. ಮೊನ್ನೆ ಒಂದಾವರ್ತಿ ಒಂದು ವಿಚಾರ ನನ್ನ ಎದುರಿನಲ್ಲೇ ನಡೆಯಿತು. ಅದು ಏನೆಂದರೆ—ವ್ಯವಸಾಯದ ಇಲಾಖೆ ಅಸಿಸ್ಟೆಂಟ್ ಸೂಪರಿಂಟೆಂಡೆಂಟರವರು ಒಂದಾವರ್ತಿ ನಮ್ಮ ಜಮೀನಿನ ಬಳಿ ಬಂದಿದ್ದಾಗ್ಗೆ ಅವರು, ಟ್ರ್ಯಾಕ್ಟರಿನಿಂದ ಈ ಜಮೀನನ್ನು ಉಳಲು ಸಾಧ್ಯವಿದೆಯೇ ಎಂದು ನಮ್ಮನ್ನೇ ಕೇಳಿದರು. ಹೀಗೆ ಅವರು ಇಂಥ ವಿಚಾರಗಳನ್ನು ನಮ್ಮಿಂದ

(ಶ್ರೀ ಡಿ. ದೇವರಾಜ ಅರಸ್‌ರವರು)

ಕೇಳಿ ತಿಳಿದುಕೊಳ್ಳಬೇಕಾಗಿದ್ದರೆ, ನಾವು ಅವರಿಗೇತಕ್ಕೆ ಇನ್ನು ಈ ಸಂಬಳ, ಟಿ. ಎ., ಡಿ. ಎ. ಮುಂತಾದುವುಗಳನ್ನೆಲ್ಲಾ ಕೊಡಬೇಕು? ಅವರು ಪಾಸು ಮಾಡಿರುವುದಾದರೂ ಏನು? ಇಂಥವರಿಗೆ ನಾವೇಕೆ ಇಷ್ಟೊಂದು ಹಣವನ್ನು ವ್ಯಯಮಾಡಿಕೊಳ್ಳಬೇಕು? ಹೀಗೆ ಇವರಿಗೆ ಈ ವಿಚಾರಗಳೇ ಗೊತ್ತಿಲ್ಲದಿರುವಾಗ ನಾವು ಆ ಡ್ರೈವರುಗಳಿಗೇ ಸಂಬಳಕೊಟ್ಟು, ಅವರನ್ನೇ ಈ ಬಗ್ಗೆ ಜನರಿಗೆ ತಿಳುವಳಿಕೆ ಕೊಡಲು ಇಟ್ಟುಕೊಳ್ಳಬಹುದಲ್ಲ?

2-30 P.M.

ಇನ್ನೊಂದು ವಿಚಾರ. ಬೀಜಗಳನ್ನು ಹಂಚುವಾಗ ಕೆಲವು ಭಾಗಗಳಲ್ಲಿ ಕಾರುರಾಗಿಯನ್ನು, ಅದರಲ್ಲೂ ಸುಧಾರಿತವಾದ ಬೀಜಗಳನ್ನು, ಕಂಡುಹಿಡಿದು ಹಂಚಿದ್ದಾರೆ. ಅದರಿಂದ ಅನುಕೂಲವಾಗಿದೆ. ಬತ್ತದ ವಿಚಾರ ತೆಗೆದುಕೊಳ್ಳೋಣ, ಹೋದವರ್ಷ ನಡೆದ ಒಂದು ಉದಾಹರಣೆಯನ್ನು ಕೊಡುತ್ತೇನೆ. ಹುಣಸೂರು ತಾಲ್ಲೂಕಿನಲ್ಲ ಮಳೆಯ ಅಭಾವದಿಂದ ಬೆಳೆಗೆ ನೀರು ಸಾಲದೇ ಹೋಯಿತು. ಆಗ ಮೂರು ತಿಂಗಳಲ್ಲೇ ಬೆಳೆಯಾಗುವ ಬತ್ತವನ್ನು ಹೈದರಾಬಾದು ಕಡೆಯಿಂದ ತಂದು ಹಂಚಿದರು. ಅದನ್ನೇ ಹಾಕಬೇಕೆಂದು ಒತ್ತಾಯವನ್ನೂ ಮಾಡಲಾಯಿತು ಅದನ್ನು ನಂಬಿ ಒಬ್ಬ ಜಮೀನ್ದಾರರು 40 ಎಕರೆಗಳಿಗೆ ಪೂರ್ತಿಯಾಗಿ ಆ ಬಿತ್ತನೆ ಹಾಕಲಾಗಿ ಒಟ್ಟು 15 ಪಲ್ಲ ಕೂಡ ಬೆಳೆಯಾಗಲಿಲ್ಲ. ಇಲಾಖೆಯವರು ಪರೀಕ್ಷೆಮಾಡಿ ನೋಡಿ ಆಮೇಲೆ ಅದನ್ನು ಹಂಚಬೇಕಾಗಿತ್ತು, ಹಾಗೆ ಮಾಡದೆ ಹೋದ್ದರಿಂದ ಈ ರೀತಿಯಾಗಿ ನಷ್ಟವಾಯಿತು. ಬೇಕಾದಷ್ಟು ವರ್ಷೇ ವರ್ಷೇ ಇಲಾಖೆಯವರು ಪ್ರಚಾರಮಾಡಿ ಇಂಥ ಬಿತ್ತನೆ ಸರಬರಾಯಿ ಮಾಡುವುದು ಸೂಕ್ತವೆ? ಈ ಇಲಾಖೆಗಾಗಿ ಖರ್ಚು ಮಾಡುವುದರಿಂದ ಪ್ರಯೋಜನವೇನಾದಹಾಗಾಯಿತು? ಪೂರ್ವಭಾವಿಯಾಗಿ ಆ ತಾಲ್ಲೂಕಿಗೆ ಅದು ಅನ್ವಯಿಸುತ್ತದೆಯೆ, ಇಲ್ಲವೆ, ಆಕಾಲದಲ್ಲಿ ಆ ಬತ್ತ ಬೆಳೆಯಲು ಅವಕಾಶವಿದೆಯೆ, ಆ ನೆಲದಲ್ಲಿ ಸರಿಯಾಗಿ ಬೆಳೆಯಬಹುದೇ ಎಂಬುದನ್ನು ನೋಡಿ ಅನಂತರ ಅದನ್ನು ಹಂಚಬೇಕಾದದ್ದು ಅವರ ಆದ್ಯಕರ್ತವ್ಯ; ನಮ್ಮ ಸಾಮಾನ್ಯ ಬುದ್ಧಿಗೂ ಇದು ಹೊಳೆಯುತ್ತದೆ. ಹಾಗಿಲ್ಲದೆ ಮೇಲೆ ಹೇಳಿದಂತೆ, ಇಲಾಖೆಯವರು ಅಂಥ ಸಹಾಯ ಮಾಡುವುದಾದರೆ ಆ ಇಲಾಖೆಯಿಂದ ಪ್ರಯೋಜನವೇನು?

Sri H. SIDDAVEERAPPA.—My friend should not forget that our agriculture is always a gamble with rain and it depends upon several other circumstances over which the department has no control.

ಶ್ರೀ ಡಿ. ದೇವರಾಜ ಅರಸ್‌ರವರು:—ಬೀಜಕ್ಕಾಗಿ ಕೊಟ್ಟ ಬತ್ತ ಹಾಕಿದ್ದರಿಂದ ನಷ್ಟವಾಯಿತು ಎಂಬುದನ್ನು ಹೇಳುತ್ತಿದ್ದೇನೆ. ಇದಲ್ಲದೆ ಅದೇಸ್ಥಳದಲ್ಲಿ ಬೇರೆ ಬಿತ್ತನೆ ಹಾಕಿರುವ ಸಂದರ್ಭಗಳಲ್ಲಿ ಚೆನ್ನಾಗಿ ಬೆಳೆದಿದ್ದಾರೆ, ಅದನ್ನು ಪರಿಶೀಲಿಸಬೇಕು. ಹೀಗೆ ನಷ್ಟವಾದದ್ದರಿಂದ ಅಲ್ಲಿನ ರೈತರು ಸರ್ಕಾರದ ಮೇಲೆ ದಾವಾ ಹಾಕಬೇಕೆಂದಿದ್ದಾರೆ, ಅದರಲ್ಲೂ ಇಲಾಖೆಯವರು ಕೊಟ್ಟಿರುವ ಬಿತ್ತನೆಯಿಂದ ಹೀಗಾಗಿದೆಯೆಂದು ಹೇಳುತ್ತಾರೆ, ಬೇರೆ ಬತ್ತವನ್ನು ಅದೇ ಜಾಗದಲ್ಲಿ ಹೆಚ್ಚಾಗಿ ಬೆಳೆದಿದ್ದಾರೆ, ತಮ್ಮ ಇಲಾಖೆಯವರು ಕೊಟ್ಟ ಬಿತ್ತನೆ ಹಾಕಿದ್ದರಿಂದ ಈ ರೀತಿ ತೊಂದರೆಯಾಯಿತು. ಅದಕ್ಕೇನು ಜವಾಬು ಹೇಳುತ್ತೀರಿ?

ಇನ್ನೊಂದು ವಿಚಾರ, ಸಹಕಾರದ ವಿಚಾರ ತೆಗೆದುಕೊಳ್ಳೋಣ. ಈಗ ವ್ಯವಸಾಯದ ಇಲಾಖೆಯವರು ಇಂಥ ಗೊಬ್ಬರ ಹಾಕಬೇಕು, ಹಿಂಡಿ, ಉಪ್ಪು, ಪೊಟಾಸಿಯಂ ಸಲ್ಫೇಟ್ ಹಾಕಬೇಕು ಎಂದು ಹೇಳುತ್ತಾರೆ. ರೈತರಿಗೆ ಈ ವಿಚಾರದಲ್ಲಿ ಹೆಚ್ಚು ಅನುಭವ ಬಂದಿದೆ. ಯಾವ ಜಮೀನಿಗೆ ಯಾವಗೊಬ್ಬರ ಹಾಕಿದರೆ ಅನುಕೂಲ ಎಂಬುದನ್ನು ಜಮೀನು ಸರ್ವೆ ಮಾಡಿನೋಡಿ ತಿಳಿದು, ಆಯಾ ಸ್ಥಳಕ್ಕೆ ಸರಿಹೋಗುವುದೇ ಇಲ್ಲವೆ ಎಂಬುದನ್ನು ಪರಿಶೀಲಿಸಿ ಹೇಳುವುದಿಲ್ಲ. ಇದರಿಂದ ರೈತರಿಗೆ ತೊಂದರೆಯಾಗುತ್ತಿದೆ. ಹೀಗೆ ಜಮೀನಿಗೆ ತಕ್ಕುದಾದ ಗೊಬ್ಬರಹಾಕದೆ ಅವರು ಕೊಡುವುದನ್ನು ಹಾಕು

ವುದರಿಂದ ಕಾಲಕ್ರಮೇಣ ಉತ್ತಮವಾಗಿದ್ದ ಜಮೀನು ಚೌಳು ಭೂಮಿಯಾಗುತ್ತದೆ. ಈ ರೀತಿ ಕೆಲವು ಕಡೆ ಆಗಿದೆ. ಆದ್ದರಿಂದ ವ್ಯವಸಾಯದ ಇಲಾಖೆ ಸಿಬ್ಬಂದಿ ವಗೈರೆಗೆ ಖರ್ಚು ಮಾಡುತ್ತಿರುವ ಹಣ ಸದ್ವಿನಿಯೋಗವಾಗುತ್ತಿಲ್ಲ. ಒಂದು ಕಡೆ ಬಾಳೆಗಿಡಗಳಿಗೆ ಇಲಾಖೆಯಿಂದ ತಂದು ಗೊಬ್ಬರ ಹಾಕಲು ಬಾಳೆ ತೋಟವೆಲ್ಲಾ ನಿರ್ನಾಮವಾಯಿತು. ಈರೀತಿ ನಡೆಯುತ್ತಿರುವುದು ಸೂಕ್ತವೆ ಎಂಬುದನ್ನು ಯೋಚನೆ ಮಾಡಿ. ದನದ ಗೊಬ್ಬರಹಾಕಿ ಚೆನ್ನಾಗಿ ಬೆಳೆಯುತ್ತಿದ್ದುದನ್ನೂ ತಪ್ಪಿಸಿದರು, ಇದನ್ನೆಲ್ಲಾ ನೋಡಿ ಎಷ್ಟೋ ಸಲ ವ್ಯವಸಾಯದ ಇಲಾಖೆಯ ಇನ್ಸ್ಪೆಕ್ಟರು ಮತ್ತು ಸೂಪರಿಂಟೆಂಡೆಂಟರನ್ನು ಇದೇಕೆ ಹೀಗಾಗಿದೆ ಎಂದು ಕೇಳಿದರೆ ಅವರಿಗೆ ಒಂದೂ ಅರ್ಥವಾಗುವುದಿಲ್ಲ. ಇದನ್ನೆಲ್ಲಾ ನೋಡಿದರೆ ಅವರಿಗೆ ನಿಜವಾದ ಅನುಭವವಿದೆಯೆ ಎಂದು ಕೇಳಬೇಕಾಗುತ್ತದೆ. ಇದಕ್ಕೇಕೆ ಇಲಾಖೆ, ಇನ್ಸ್ಪೆಕ್ಟರು, ನೌಕರರು ಮುಂತಾದವರನ್ನಿಟ್ಟುಕೊಳ್ಳಬೇಕು? ಹಾಗಿದ್ದ ಮೇಲೆ, ಅವರಿಗೆ ಅನುಭವ ಸಾಕಷ್ಟಿರಬೇಕು, ಅವರಿಂದ ಜನರಿಗೆ ಸಹಾಯವಾಗಬೇಕು. ಈಗಿರುವ ರೀತಿಯಲ್ಲಿ ವ್ಯವಸಾಯದ ಇಲಾಖೆ ಇರುವುದಕ್ಕಿಂತ ಅದನ್ನು ಮುಚ್ಚುವುದು ಉತ್ತಮವೆಂಬುದು ನನ್ನ ಭಾವನೆ.

ಕೊನೆಯದಾಗಿ ಒಂದು ಮಾತು, ಸರ್ಕಾರದ ಮುಂದೆ ಮುಖ್ಯವಾದ ಒಂದು ಸಲಹೆ. ವ್ಯವಸಾಯದ ಇಲಾಖೆ, ಸಹಕಾರ ಇಲಾಖೆ ಇವೆರಡನ್ನೂ ಸೇರಿಸಿ ಕೆಲಸನಡೆಸುವುದರಿಂದ ಎಲ್ಲರಿಗೂ ಬಹಳ ಅನುಕೂಲವಾಗುತ್ತದೆ, ಅದರಲ್ಲೂ ರೈತರಿಗೆ ಬಹಳ ಅನುಕೂಲವಾಗುತ್ತದೆ ಎಂಬ ಭಾವನೆಯಿದೆ. ಹಾಗೆ ಎರಡು ಇಲಾಖೆಗಳನ್ನೂ ಸೇರಿಸುವುದರಿಂದ ಅನುಕೂಲವೇನು ಎಂದು ವಿವರಿಸಿ ಹೇಳಲು ಕಾಲವಿಲ್ಲದಿರುವುದರಿಂದ, ಅದನ್ನು ಸರ್ಕಾರದವರು ನಿಧಾನವಾಗಿ ಆಲೋಚನೆ ಮಾಡಬೇಕು. ಈ ಎರಡು ಇಲಾಖೆಗಳೂ ಸೇರಿ ಕೋಆರ್ಡಿನೇಟಾಗಿ ಕೆಲಸಕಾರ್ಯಗಳು ನಡೆಯುವುದಾದರೆ, ಗೊಬ್ಬರ ಕೊಡಿ ಎಂದು ವ್ಯವಸಾಯದ ಇಲಾಖೆಯಲ್ಲಿ ಕೇಳಿ ಸಹಕಾರದ ಇಲಾಖೆಯಲ್ಲಿ ತೆಗೆದುಕೊಳ್ಳುವುದು, ಅದೊಂದು ಕಡೆ ಇದೊಂದುಕಡೆ ಇರುವುದು ತಪ್ಪುತ್ತದೆ. ರೈತರಿಗೆ ಈ ರೀತಿ ನಾನಾಇಲಾಖೆಗಳಿಗೆ ಹೋಗುವುದಕ್ಕೆ ಅವಕಾಶವಿರುವುದಿಲ್ಲ ಮತ್ತು ಗೊತ್ತಿರುವುದಿಲ್ಲ. ಇವೆರಡು ಇಲಾಖೆಗಳನ್ನೂ ಜೋಡಿಸಿದರೆ, ಈ ಕೆಲಸ ಸುಲಭವಾಗಿ ರೈತರಿಗೆ ಅನುಕೂಲವಾಗುತ್ತದೆ ಮತ್ತು ರಿಟ್ರೆಂಚ್‌ಮೆಂಟ್ ದೃಷ್ಟಿಯಿಂದಲೂ, ದೇಶದ ಹಿತದೃಷ್ಟಿಯಿಂದಲೂ ಒಳ್ಳೆಯದು.

ಶ್ರೀ ಎಚ್. ಸಿದ್ದವೀರಪ್ಪನವರು.—ಸ್ವಾಮಿ, ನನ್ನ ಮಾನ್ಯ ಸ್ನೇಹಿತರಾದ ಶ್ರೀ ದೇವರಾಜ ಅರಸ್‌ರವರು ಭಾಷಣಮಾಡಿದ ಮೇಲೆ ಸ್ವಲ್ಪ ವಿಶದವಾಗಿ ಜವಾಬು ಕೊಡಬೇಕಾದ ಪ್ರಸಂಗ ಬಂದಿದೆ. ಅದಕ್ಕಾಗಿ ದಯವಿಟ್ಟು ನನಗೆ ಸ್ವಲ್ಪ ಅವಕಾಶಕೊಡಬೇಕೆಂದು ಮೊದಲೇ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ವ್ಯವಸಾಯದ ಇಲಾಖೆಯಿಂದ ಏನೂ ಪ್ರಯೋಜನವಿಲ್ಲ, ಇವೊತ್ತೇ ಮುಚ್ಚಬೇಕು ಎಂದು ಶ್ರೀ ದೇವರಾಜಅರಸ್ ಅವರು ಹೇಳಿದ್ದನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ವ್ಯವಸಾಯದ ಇಲಾಖೆಯ ಕೆಲಸ ಹೇಳುವಷ್ಟು ಸುಲಭವಲ್ಲ. ಅದನ್ನು ಮಾಡಬೇಕಾದರೆ ಅನೇಕ ವರ್ಷಗಳಕಾಲ ಪ್ರಯತ್ನಮಾಡಿ ಅದರ ಫಲವಾಗಿ ಉತ್ತಮಗೊಳಿಸಬೇಕೇ ವಿನಾ ಒಂದೇಸಾರಿ ಒಂದುಕಡೆ ಪರೀಕ್ಷೆಮಾಡಿನೋಡಿ ಹೇಳುವುದು ಸರಿಯಲ್ಲವೆಂದು ತಿಳಿದುಕೊಂಡಿದ್ದೇನೆ. ಒಟ್ಟಿನಲ್ಲಿ ಅಲ್ಲಿ ಲೋಪದೋಷಗಳಿರಬಹುದು, ಅವುಗಳನ್ನು ತಿದ್ದುವುದಕ್ಕೆ ಸರ್ಕಾರದವರು ಸಂಪೂರ್ಣವಾಗಿ ತಯಾರಾಗಿದ್ದಾರೆ, ಖರ್ಚು ಮಾಡುವ ಹಣಕ್ಕೆ ತಕ್ಕಷ್ಟು ಉತ್ಪತ್ತಿಯನ್ನು ಇತರರು ನಿರೀಕ್ಷಿಸುವಂತೆ ಸರ್ಕಾರವೂ ಸ್ವಾಭಾವಿಕವಾಗಿಯೇ ನಿರೀಕ್ಷಿಸುತ್ತದೆ. ಎಂದಮಾತ್ರಕ್ಕೆ ಎಲ್ಲೂ ಈ ಕೆಲಸ ಸರಿಯಾಗಿ ನಡೆಯುತ್ತಿಲ್ಲ, ಯಾವುದನ್ನೂ ಈ ಇಲಾಖೆ ಮಾಡುತ್ತಿಲ್ಲ ಎಂಬ ವಾದವನ್ನು ಒಪ್ಪಲಾಗುವುದಿಲ್ಲ. ವ್ಯವಸಾಯದ ಇಲಾಖೆಯವರು ಜಮೀನುಗಳ ಕಡೆ ಹೆಚ್ಚು ಗಮನ ಕೊಡುವುದಕ್ಕೆ ಆಗದಿದ್ದುದು ಅಲ್ಲಿನ ಲೋಪದೋಷಗಳಿಗೆ ಒಂದು ಕಾರಣ

(ಶ್ರೀ ಎಚ್. ಸಿದ್ದವೀರಪ್ಪನವರು)

ವಾಗಿದೆ. ಯುದ್ಧ ಪ್ರಾರಂಭವಾದ ಮೇಲೆ ಕೆಲಸಕಾರ್ಯಗಳು ಇತ್ತೀಚೆಗೆ ಹೆಚ್ಚಿವೆ ಎಂಬುದನ್ನು ಮಾನ್ಯ ಸಭೆ ಗಮನಿಸಬೇಕು. ಯುದ್ಧ ಷುರುವಾದ ಮೇಲೆ ಆಹಾರವನ್ನು ಉತ್ಪತ್ತಿ ಮಾಡುವುದಕ್ಕೆ ಬೇಕಾದ ವ್ಯವಸಾಯದ ಸಲಕರಣೆ, ಬೀಜ, ಗೊಬ್ಬರ, ಕಬ್ಬಿಣದ ಸಾಮಾನು ಮುಂತಾದುವನ್ನು ಶೇಖರಣೆ ಮಾಡುವ ಜವಾಬ್ದಾರಿಯೂ ಸಹ ವ್ಯವಸಾಯದ ಇಲಾಖೆಗೇ ಬಿತ್ತು. ತಕ್ಕಡಿ ಹಿಡಿದು ವ್ಯಾಪಾರಮಾಡುವ ಕಡೆಗೆ ಹೆಚ್ಚು ಕಾಲ ವಿನಿಯೋಗವಾಗಿ ವ್ಯವಸಾಯದ ಇಲಾಖೆಯವರಿಗೆ ತಮ್ಮ ನೈಜವಾದ ಕೆಲಸದಕಡೆ, ತಾವು ಮಾಡಬೇಕಾದ ಕರ್ತವ್ಯದ ಕಡೆ ಗಮನ ಕೊಡುವುದಕ್ಕೆ ಅವಕಾಶವಾಗಲಿಲ್ಲ. ಆದ್ದರಿಂದ ಅವರಮೇಲೆ ಆಪಾದನೆಮಾಡಲು ಅವಕಾಶವಿಲ್ಲ. ಈಗ ಅದಕ್ಕೆ ಅವಕಾಶಕೊಡುವುದಿಲ್ಲ. ವ್ಯವಸಾಯದ ಇಲಾಖೆ ಜಮೀನಿನ ಮೇಲೆಯೇ ಇರಬೇಕು, ಜಮೀನಿನ ಮೇಲೆ ಹೆಚ್ಚು ಕೆಲಸ ಮಾಡಬೇಕು ಎಂಬ ಒಂದು ಗೊತ್ತಾದ ನೀತಿಯನ್ನು ಸರ್ಕಾರದವರು ಜಾರಿಗೆ ತಂದಿದ್ದಾರೆಂದು ನಿವೇದನೆಮಾಡುತ್ತೇನೆ. ಒಂದು ಯೋಜನೆ ಈಗಲೂ ಇದೆ. ಸಹಕಾರ ಸಂಘಗಳಿಗೆ ವ್ಯಾಪಾರದ ಕೆಲಸವನ್ನು ಒದಗಿಸಿ ಬಾಕಿ ಕೆಲಸ ವ್ಯವಸಾಯದ ಇಲಾಖೆ ಮಾಡಬೇಕು, ಎಲ್ಲಿ ಸಾಧ್ಯವೋ ಅಲ್ಲಿ ಆರೀತಿಮಾಡಬೇಕು ಎಂದು ಮಾಡಿದೆ.

ವ್ಯವಸಾಯದ ಇಲಾಖೆಗೆ ಎಲ್ಲಿ ಏನು ಬಿತ್ತಬೇಕು, ಏನು ಬೆಳೆಸಬೇಕು ಎಂಬುದೇ ಗೊತ್ತಿಲ್ಲವೆಂದು ದೇವರಾಜ ಅರಸ್‌ರವರು ಹೇಳಿದರು. ಅವರಿಗೆ ಒಂದು ವಿಷಯ ತಿಳಿಸಬೇಕಾಗಿದೆ. ಅಲ್ಲಲ್ಲಿ ಒಂದೊಂದುವರ್ಷ ಹೀಗೆ ಆಗಿರಬಹುದು. ಬಾಟನಿ ಸೆಕ್ಷನ್ ತೆಗೆದುಕೊಂಡರೆ, ಸುಮಾರು 25 ವರ್ಷಗಳಿಂದ ಯಾವರೀತಿ ಕೆಲಸ ಮಾಡಿದೆ, ಹೇಗೆ ಕೆಲಸ ಮಾಡಿದ್ದರಿಂದ ಪ್ರಯೋಜನ ಹೊಂದಲು ಅವಕಾಶವಾಯಿತು ಎಂಬುದನ್ನು ತಿಳಿದುಕೊಳ್ಳಬಹುದು. ರಾಗಿ ತೆಗೆದುಕೊಳ್ಳೋಣ. ಮೈಸೂರು ದೇಶದ ಮುಖ್ಯ ಆಹಾರ ಧಾನ್ಯವದು. 300 ನಮೂನೆಗಳ ರಾಗಿಯನ್ನು ಪ್ರಯೋಗಮಾಡಿ ನಮ್ಮ ದೇಶಕ್ಕೆ ಯಾವ ರಾಗಿ ಆಗುತ್ತದೆ, ಯಾವ ರಾಗಿ ಬೆಳೆಯಬೇಕು, ಯಾವುದನ್ನು ಬೆಳೆದರೆ ರೈತನಿಗೆ ಅನುಕೂಲವಾಗುತ್ತದೆ ಎಂಬ ವಿಷಯದಲ್ಲಿ ತಿಳಿವಳಿಕೆ ಕೊಟ್ಟಿದ್ದೇವೆ. ರೈತರು ಬಹಳ ಸಂತೋಷವಾಗಿ ಕೆಲಸ ಮಾಡಿದ್ದಾರೆ. ಮೊದಲು ರಾಗಿ ಬೀಜ ಕೊಟ್ಟಿದ್ದರಲ್ಲಿ ಎಷ್ಟು ಇಳಿವರಿ (yield) ಬರುತ್ತಿತ್ತೋ ಅದಕ್ಕಿಂತ ಶೇಕಡ 60 ರಷ್ಟು ಜಾಸ್ತಿ ಇಳಿವರಿ ಬರುತ್ತದೆ ಎಂದು ಅಂದಾಜುಮಾಡಿದ್ದೇವೆ. ಬತ್ತ ತೆಗೆದುಕೊಳ್ಳೋಣ. ಇವೊತ್ತು ಎಲ್ಲರಿಗೂ ಕೊಯಮತ್ತೂರು ಸಣ್ಣ ಬಹಳ ಚೆನ್ನಾಗಿದೆ ಎಂಬ ಅನುಭವ ಬಂದಿದೆ. ಆ ಕೊಯಮುತ್ತೂರು ಸಣ್ಣಕ್ಕೆ ಒಂದು ಸಾಯಿಲ್ ಇಳಿಸಬೇಕಾದರೆ ಅದು 25 ವರ್ಷಕಾಲ ಅವಿಚ್ಛಿನ್ನವಾಗಿ, ಅವಿಶ್ರಾಂತಿಯಿಂದ ವ್ಯವಸಾಯದ ಇಲಾಖೆ ದುಡಿದುದರ ಪ್ರತಿಫಲವೇ ಹೊರತು ಮತ್ತೆ ಬೇರೆ ಕಾರಣ ಇಲ್ಲ ಎಂಬುದನ್ನು ಮಾನ್ಯ ಸಭೆಯವರು ತಿಳಿದು ಕೊಳ್ಳಬೇಕು. ಆ ಮೇಲೆ ಕಬ್ಬು ತೆಗೆದುಕೊಳ್ಳೋಣ. ಅದರ ವಿಷಯದಲ್ಲಿ 30 ವರ್ಷಗಳಿಂದ ಪ್ರಯೋಗ ನಡೆಸಿದ್ದೇವೆ. 30 ವರ್ಷಗಳ ಪ್ರಯೋಗದ ಫಲವಾಗಿ ಇವೊತ್ತು ಮಂಡ್ಯದ ರೈತರು ಇಷ್ಟುಮಟ್ಟಿಗೆ ಸುಖವಾಗಿ ಬಾಳಲು ಅವಕಾಶವಾಗಿದೆ. ಇದಕ್ಕೆ ವ್ಯವಸಾಯದ ಇಲಾಖೆ ಬಹು ಮಟ್ಟಿಗೆ ಕಾರಣವೆಂದು ಹೇಳಿದರೆ ಮಂಡ್ಯದ ರೈತರು ಖಂಡಿತ ಒಪ್ಪುತ್ತಾರೆ ಎಂದು ತಿಳಿದುಕೊಂಡಿದ್ದೇನೆ. ಅದೇ ರೀತಿ ಕಡಲೇಕಾಯಿ ತೆಗೆದುಕೊಳ್ಳೋಣ. ಇಲ್ಲಿ ನೋಡಿದರೆ 1917-18ರಲ್ಲಿ ನಮ್ಮ ದೇಶದಲ್ಲಿ 77 ಸಾವಿರ ಎಕರೆ ಈ ಬೆಳೆಗಿತ್ತು. ಉತ್ಪನ್ನ ಚೆನ್ನಾಗಿರಲಿಲ್ಲ. ಇವೊತ್ತಿನ ದಿವಸ 2·89 ಲಕ್ಷ ಎಕರೆಗಳನ್ನು ಸಾಗಿಗೆ ತಂದಿದ್ದೇವೆ. ಹೀಗೆ ಹೇಳುತ್ತಾ ಹೋದರೆ ಬಹಳ ಹೇಳಬಹುದು. ಒಂದು ಮಾತು ಹೇಳುತ್ತೇನೆ. ವ್ಯವಸಾಯದ ಇಲಾಖೆಯ ಕಾರ್ಯಕ್ರಮ ಬಹಳ ಚೆನ್ನಾಗಿ ಆಗಬೇಕು, ರೈತರಿಗೆ ನಾನಾ ರೀತಿಯಲ್ಲಿ ಇನ್ನೂ ಹೆಚ್ಚಿನ ಅನುಕೂಲ ದೊರೆಯಬೇಕು ಎಂಬ ವಿಚಾರದಲ್ಲಿ ಶ್ರೀಮಾನ್ ದೇವರಾಜ ಅರಸ್‌ರವ

ರಿಗೂ ಸರ್ಕಾರದವರಿಗೂ ಭಿನ್ನಾಭಿಪ್ರಾಯ ವಿಲ್ಲ. ಭಿನ್ನಾಭಿಪ್ರಾಯ ಇಷ್ಟೆ. Out right ಆಗಿ condemn ಮಾಡುವುದಕ್ಕಿಂತ 'ಇನ್ನೂ ಕೆಲಸಮಾಡಿ, ಮಾಡಿರುವುದು ಚೆನ್ನಾಗಿದೆ', ಎಂದು ಹೇಳಿದರೆ ಉತ್ತಮ. ನೀವು ಮಾಡಿರು ವುದೆಲ್ಲಾ ನಿಷ್ಪ್ರಯೋಜನ ಎಂದು ಹೇಳಿದರೆ, ಎಷ್ಟು ಮಾಡಿದರೂ ಇಷ್ಟೇ ತಾನೇ ಎಂಬ ಮನೋಭಾವ ಬರುತ್ತದೆ.

ಶ್ರೀ ಡಿ. ದೇವರಾಜ ಅರಸ್‌ರವರು.— ಕೆಲಸ ಮಾಡುವವರ ವಿಷಯ ನಮಗೆ ಗೊತ್ತಿದೆ.

ಶ್ರೀ ಎಚ್. ಸಿದ್ದವೀರಪ್ಪನವರು.—ಇಷ್ಟು ಮಾತ್ರ ಹೇಳುತ್ತೇನೆ. ಖಂಡಿತವಾಗಿಯೂ ವ್ಯವ ಸಾಯದ ಇಲಾಖೆಯು ಮೇಲೆ ನಮ್ಮೆಲ್ಲರ ಕಣ್ಣು ಇರುವಾಗ, ಅದು ಬಹಳ ಚೆನ್ನಾಗಿ ಕೆಲಸ ಮಾಡಬೇಕು. ಖಂಡಿತವಾಗಿಯೂ ಇದನ್ನು ಜಾರಿಗೆ ತರಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀಮಾನ್ ಶ್ರೀನಿವಾಸ ಅಯ್ಯಂಗಾರ್ ರವರು ಮತ್ತು ಎಂ. ಲಿಂಗಣ್ಣನವರು ಹೆಚ್ಚು ಆಹಾರ ಬೆಳೆ ಬೆಳೆಯುವ ವಿಚಾರದಲ್ಲಿ ಒಂದು ಮಾತು ಹೇಳಿದರು, ಮತ್ತು ಇಮಾಂರವರೂ ಸಹ ನಿನ್ನೆಯದಿನ ಕೇಳಿದರು 'ಇಂಡಿಯಾ ಸರ್ಕಾರದವರಿಂದ ಎಷ್ಟು ತರಿಸಿದ್ದೀರಿ, ನೀವು ಎಷ್ಟು ಕೊಟ್ಟಿದ್ದೀರಿ' ಎಂದು. ಈ ವಿಚಾರದಲ್ಲಿ ಇಷ್ಟು ಮಾತ್ರ ಹೇಳುತ್ತೇನೆ. ಇಂಡಿಯಾ ಸರ್ಕಾರದವರು ನಮಗೆ 1949-50, 1950-51, 1951-52, ರಿಂದ ಗ್ರಾಂಟ್ ಮತ್ತು ಲೋನ್ ರೂಪದಲ್ಲಿ 3,17,83,516 ರೂಪಾಯಿಗಳನ್ನು ಕೊಟ್ಟಿದ್ದಾರೆ. ಈ ಎಲ್ಲಾ ಹಣವನ್ನೂ ರೈತರಿಗೇ ನೇರವಾಗಿ ಕೊಟ್ಟಿದೆ. ನಿನ್ನೆ ನಾನು ಅರಿಕೆ ಮಾಡಿಕೊಂಡಹಾಗೆ, ಒಂದು ಪರ್ಸೆಂಟ್ ಎಸ್ಟಾಬ್ಲಿಷ್‌ಮೆಂಟ್ ಚಾರ್ಜಿಗೆ ಹಾಕಿರುವುದು. ನಾವು ಖರ್ಚುಮಾಡಿರುವುದು 2,74,43,245 ರೂಪಾಯಿಗಳನ್ನು. ಇದನ್ನು ಮಾನ್ಯ ಸಭೆ ಯವರು ಗಮನಿಸಿದರೆ ನಮ್ಮ ವಿಚಾರದಲ್ಲಿ ಇಂತಕ್ಕ ಕಟುವಾದ ಟೀಕೆ ಸ್ವಲ್ಪ ಸಡಿಲವಾಗ ಬಹುದು ಎಂದು ನಾನಾದರೂ ಭಾವಿಸುತ್ತೇನೆ. ಹೆಚ್ಚು ಆಹಾರ ಬೆಳೆ ಬೆಳೆಯುವ ಯೋಜನೆ ಯಲ್ಲಿ ಮೈಸೂರು ಸರ್ಕಾರದವರು ದೊಡ್ಡ ಯೋಜನೆಗಳನ್ನು ಹಾಕಿದ್ದಾರೆ. ಮೇಜರ್ ಇರಿಗೇಷನ್ ವರ್ಕ್ಸ್‌ಗೆ ಬಹಳ ದುಡ್ಡು ಖರ್ಚು ಮಾಡಿದ್ದಾರೆ ಎಂಬುದನ್ನು ಮರೆಯಬಾರದು.

ಜನಾಬ್ ಜೆ. ಮಹಮದ್ ಇಮಾಂ ಅವರು.— May I interrupt for a minute for clarification? ನಿನ್ನೆ ತಾವು ಕೊಟ್ಟ ಉತ್ತರದಲ್ಲಿ 2,67,24,579 ರೂಪಾಯಿಗಳನ್ನು ಎಂಬುದಾಗಿ ಹೇಳಿದ್ದಿರಿ. ಈಗ ಹೇಳಿದ ಪ್ರಕಾರ 5 ಕೋಟಿ 91 ಲಕ್ಷ ಚಿಲ್ಲರೆ ಬರುತ್ತದೆ. ಯಾವುದು ಸರಿ? Perhaps it does not include the amounts for all the three years.

SRI H. SIDDAVEERAPPA.—Probably that figure was supplied according to the tenor of the question. I am giving these figures from 1949-50 right up to 1951-52. I have given the grant, the loan and the total. I will place this copy in the hands of my friend. He may get them verified.

MR. SPEAKER.—That does not include the grant made to the co-operative societies in regard to farming.

ಶ್ರೀ ಎಚ್. ಸಿದ್ದವೀರಪ್ಪನವರು.—ಒಂದು ಅಂಶವನ್ನು ನಾನು ತಮ್ಮಲ್ಲಿ ಅರಿಕೆಮಾಡಿ ಕೊಳ್ಳುತ್ತೇನೆ. ಜಿ. ಎಂ. ಎಫ್. ಸ್ಕೀಂ ಪ್ರಕಾರ ಕೈಕೊಂಡ ಕಾರ್ಯಕ್ರಮವನ್ನು ಜಾಗ್ರತೆ ನೀವು ಪೂರೈಸಿಲ್ಲ ಎಂದು ಹೇಳ ಬಹುದು. ನೋಡಲಿಕ್ಕೆ ಅದು ಹಾಗೆ ಕಾಣು ತ್ತದೆ. ಇಷ್ಟು ದುಡ್ಡು ಖರ್ಚುಮಾಡಿದರೂ ಆಹಾರದ ಅಭಾವ ಹೋಗಲಿಲ್ಲವಲ್ಲಾ ಎಂದು ನಿಮಗೆನ್ನಿಸಬಹುದು. ಆದರೆ ಒಂದು ವಿಷಯ ವನ್ನು ಮರೆಯಕೂಡದು. ಅವೊತ್ತಿನ ದಿವಸ ಏನಾಗಿತ್ತು ಎಂದರೆ ಪ್ರೊಕ್ಯೂರ್‌ಮೆಂಟು, ಕಂಟ್ರೋಲು ಇಂಥ ಸಂಕೋಲೆಗಳಿಂದ ರೈತನಿಗೆ ಎಷ್ಟು ಉತ್ತೇಜನ ಇರಬೇಕಾಗಿತ್ತೋ ಅಷ್ಟು ಉತ್ತೇಜನ ಇರಲಿಲ್ಲ. ಎಷ್ಟು ಹೆಚ್ಚು ಸಹಾಯ ನೀಡಿದರೂ ಕಮರ್ಷಿಯಲ್ ಕ್ರಾಪ್ಸ್‌ಗೆ ನಿಗಾ ಕೊಡುತ್ತಿದ್ದರೇ ಹೊರತು ಆಹಾರ ಧಾನ್ಯ ಬೆಳೆಯುತ್ತಿರಲಿಲ್ಲ. ಅನೇಕ ಕೆಲಸಗಳನ್ನು ಮಾಡಿದ್ದೇವೆ. ತಮ್ಮಲ್ಲಿ ಅರಿಕೆಮಾಡಿಕೊಳ್ಳುವು ದಾದರೆ, 1949-50ರಲ್ಲಿ 481, 1950-51ರಲ್ಲಿ

(ಶ್ರೀ ಎಚ್. ಸಿದ್ದವೀರಪ್ಪನವರು)

1,295, 1951-52ರಲ್ಲಿ 552 ಬಾವಿಗಳನ್ನು ತೆಗೆದಿದ್ದಾರೆ, 18 ಮೇಜರ್ ವರ್ಕ್ಸ್ ಮಾಡಿದ್ದಾರೆ.

Out of the Grow More Food Scheme, we have advanced 13,26,000 rupees for major works and the area to be benefited is 22,765 acres.

Sri S. SRINIVASA IYENGAR.—Are the works completed ?

Sri H. SIDDAVEERAPPA.—Most of them are complete.

ಆಮೇಲೆ ಮೇಜರ್ ಮತ್ತು ಮೈನರ್ ಕೆರೆಗಳನ್ನು ತೆಗೆದುಕೊಂಡರೆ, ಅನೇಕ ಮೇಜರ್ ಮತ್ತು ಮೈನರ್ ಕೆರೆಗಳನ್ನು ರೀಪೇರಿ ಮಾಡಿದ್ದೇವೆ, ಹೊಳುತೆಗೆಸಿದ್ದೇವೆ ಲಿಫ್ಟ್ ಇರಿಗೇಷನ್ ಮತ್ತು ರಿವರ್ ವ್ಯಾಲಿ ಪ್ರಾಜೆಕ್ಟುಗಳನ್ನು ತೆಗೆದುಕೊಂಡು ಆ ಕೆಲಸ ಮಾಡಿದ್ದೇವೆ, ಫೀಡರ್ ಚಾನಲ್‌ಗಳನ್ನು ರಿಪೇರಿ ಮಾಡಿದ್ದೇವೆ, ಬೀಜ ಮತ್ತು ಗೊಬ್ಬರ ಹಂಚಿಕೆ ಮಾಡಿದ್ದೇವೆ. ಇಷ್ಟೆಲ್ಲಾ ಆಗಿ ತಕಾವಿಸಾಲಗಳನ್ನು ಕೊಟ್ಟಿದ್ದೇವೆ. ಹೀಗೆ ಅನೇಕ ಉಪಯುಕ್ತವಾದ ಕಾರ್ಯಗಳನ್ನು ಮಾಡಿದ್ದೇವೆ. ಕಾಲ ಇಲ್ಲದೇ ಇರುವುದರಿಂದ ಎಲ್ಲವನ್ನೂ ಹೇಳಲು ಅವಕಾಶವಿಲ್ಲ. ಯಾರಾದರೂ ಮಾನ್ಯ ಸದಸ್ಯರು ನಿಜವಾಗಿಯೂ ಜಿ.ಎಂ.ಎಫ್. ಸ್ಕೀಂ ಪ್ರಕಾರ ಎಷ್ಟು ಕಾರ್ಯಗಳಾಗಿವೆ, ಏನು ಕೆಲಸ ನಡೆದಿದೆ, ಯಾವ ಯಾವ ರೀತಿ ಮುಂದುವರಿದಿದೆ ಎಂಬುದನ್ನು ತಿಳಿದುಕೊಳ್ಳಲು ಅಪೇಕ್ಷೆಪಟ್ಟರೆ ಅವರಿಗೆ ಕೃತಜ್ಞತೆಯಿಂದ, ಸಂತೋಷದಿಂದ ತಿಳಿಸುತ್ತೇನೆ. ಆದ್ದರಿಂದ ವಿಷಯ ಸಂಗ್ರಹಣೆ ಮಾಡಿ ತಪ್ಪಿದ್ದರೆ ಹೇಳಬೇಕೇ ಹೊರತು, ಒಂದೇ ಒಂದು ಬ್ರಷ್ ಇಟ್ಟುಕೊಂಡು ಒಂದೇ ಬಣ್ಣ ಬಳಿಯುವಂತೆ ಹೇಳುವುದು ಚೆನ್ನಾಗಿರುವುದಿಲ್ಲ.

ಶ್ರೀ ಎಸ್. ಗೋಪಾಲಗೌಡರು.—ಸ್ಥಳಕ್ಕೆ ಕರೆದುಕೊಂಡು ಹೋಗಿ ತೋರಿಸುತ್ತೀರಾ, ಅಂಕಿ ಸಂಖ್ಯೆ ಕೊಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪನವರು.—ಸ್ಥಳಕ್ಕೆ ಕರೆದುಕೊಂಡು ಹೋಗಿ ತೋರಿಸುತ್ತೇನೆ. ವ್ಯವಸಾಯದ ಇಲಾಖೆ ಉಪಯುಕ್ತವಾದದ್ದು. ವ್ಯವಸಾಯದ ಇಲಾಖೆಯ ಪ್ರಾಮುಖ್ಯತೆ ಸರ್ಕಾರದ ಗಮನಕ್ಕೆ ಬಂದಿದೆ. ತಾವು ಯಾವ ದೃಷ್ಟಿಯಿಂದ ಟೀಕೆಮಾಡಿದ್ದರೂ ಅದನ್ನು ಸಲಹಾ ರೂಪವಾಗಿ ತೆಗೆದುಕೊಂಡು ಸರ್ಕಾರದವರು ವ್ಯವಸಾಯದ ಇಲಾಖೆಯನ್ನು ಉತ್ತಮಪಡಿಸಲಿಕ್ಕೂ ಸರಿಪಡಿಸಲಿಕ್ಕೂ ಇನ್ನೂ ಹೆಚ್ಚಾಗಿ ಪ್ರಯತ್ನ ಮಾಡುತ್ತೇವೆ. ಸಲಹೆಗಾರರೆಲ್ಲರಿಗೂ ನನ್ನ ಧನ್ಯವಾದಗಳು. ಈ ಡಿಮ್ಯಾಂಡ್‌ಗೆ ಅವರ ಒಪ್ಪಿಗೆಯನ್ನು ಕೊಡಬೇಕೆಂದು ಕೇಳುತ್ತೇನೆ.

Mr. SPEAKER.—The question is:

"That a sum not exceeding Rs. 32,66,200 be granted to the Government to complete the sum necessary to defray the charges which will come in course of payment during the year ending 31st day of March 1953, in respect of 'Agriculture (Except Botanical and other Public Gardens)'."

The motion was adopted.

Demand No. 23.—Rural Development.

40 (A) RURAL DEVELOPMENT.

Mr. SPEAKER.—Motion moved:

"That a sum not exceeding Rs. 30,62,000 be granted to the Government to complete the sum necessary to defray the charges which will come in course of payment during the year ending 31st day of March 1953, in respect of 'Rural Development'."

Completion of Inter-village Communication Road between Malavalli and Purigali.

ಶ್ರೀ ಬಿ. ಪಿ. ನಾಗರಾಜ ಮೂರ್ತಿಯವರು (ಮಳವಳ್ಳಿ).—ಮಾನ್ಯ ಅಧ್ಯಕ್ಷರೇ, I move.—

"That the demand under the head '40. A. Rural Development' for Rs. 30,62,000 be reduced by Rs. 100 (to press for the immediate completion of the inter-village communication road

between Malvalli and Purigali *via* Ravani, Kyathanahalli and Bovvalli, Mallinathapura and Kagla".

Sri R. ANANTHARAMAN.—On a point of order Sir. This matter is so simple that it need not have been brought to the notice of the Minister in this form. It is a small matter and it need not take up the time of the House.

Janab J. MOHAMED IMAM.—The ruling given by the Chair is that we must bring specific grievances to the notice of Government—not broad and general matters.

Mr. SPEAKER.—Yes. I have allowed it. Probably, in order to save time, he may be suggesting this.

ಶ್ರೀ ಬಿ. ಪಿ. ನಾಗರಾಜಮೂರ್ತಿಯವರು.—ಸ್ವಾಮಿ ಮಳವಳ್ಳಿಯಿಂದ ಪುರೀಗಾಲಿಗೆ ಹೋಗುವರಸ್ತೆ ಜನಸಂದಣಿ ಜಾಸ್ತಿಯಾಗಿರುವ ಹಲವಾರು ಹಳ್ಳಿಗಳ ಮೂಲಕ ಹೋಗಿ ಒಂದಕ್ಕೊಂದಕ್ಕೆ ಸಂಚಾರ ಸಂಬಂಧ ಕಲ್ಪಿಸಿದೆ. ಈ ರಸ್ತೆಯೊಂದನ್ನು ಬಿಟ್ಟರೆ ಮೋಟಾರಾಗಲಿ ಗಾಡಿಗಳಾಗಲಿ ಸರಾಗವಾಗಿ ತಿರುಗಾಡುವ ರಸ್ತೆ ಇನ್ನಾವುದೂ ಅಲ್ಲಿಲ್ಲ. ಯಾವುಪಾದರೂ ಒಂದು ಕೆಟ್ಟ ಖಾಯಿಲೆ ಬಂದು ರೋಗಿಗಳು ಮರಣೋನ್ಮುಖರಾದಾಗ, ಒಂದು ಘಂಟೆಯೊಳಗೆ ಆಸ್ಪತ್ರೆಗೆ ಹೋದರೆ ಪ್ರಾಣ ಉಳಿದೀತೆನ್ನುವಾಗ, ಇಂಥ ಒಂದು ರಸ್ತೆಯ ಅಭಾವವಿದ್ದರೆ ಆ ಪ್ರದೇಶದ ಜನರಿಗೆ ವೈದ್ಯಕೀಯ ಸಹಾಯವನ್ನು ಪಡೆಯುವುದಕ್ಕೂ ಅವಕಾಶವಿಲ್ಲದಂತಾಗುತ್ತದೆ. ಅದೂ ಅಲ್ಲದೆ, ಅಲ್ಲೇ ಹತ್ತಿರದಲ್ಲೇ ಪ್ರಾಮುಖ್ಯವಾದ 5-6 ಜನಸಂದಣಿಯಿರತಕ್ಕ ಗ್ರಾಮಗಳಿಗೆ ಸಂಬಂಧವನ್ನು ಕಲ್ಪಿಸುವ ರಸ್ತೆ ಆದಲ್ಲಿ, ಅಲ್ಲಿ ಸರ್ಕಾರದವರು ಒಂದು ಟ್ರಾನ್ಸ್ಪೋರ್ಟ್ ಬಸ್ಸನ್ನೇರ್ಪಡಿಸಿದರೆ, ನೀವು ಈ ರಸ್ತೆಗೆ ಖರ್ಚು ಮಾಡುವ ದುಡ್ಡು ಸುಲಭವಾಗಿ ಒಂದೆರಡು ವರ್ಷಗಳಲ್ಲೇ ಬರುವುದಲ್ಲದೆ, ಮೇಲೆ ಆದಾಯದ ರೂಪದಲ್ಲಿಯೂ ಹಣ ಬರುವ ಸಂಭವವಿದೆ. ಈ ರಸ್ತೆಗೆ 30,000 ರೂಪಾಯಿಗಳನ್ನು ಆಗಲೇ ಗ್ರಾಮಾಭಿವೃದ್ಧಿ ಇಲಾಖೆಯಿಂದ ಖರ್ಚು ಮಾಡಿದೆ. ಈಗೇನಿದ್ದರೂ ಕಗ್ಲ ಪ್ರದೇಶದಿಂದ ಮುಂದಕ್ಕೆ ರಸ್ತೆಗೆ ಒಂದು cause-way ಹಾಕದಿರುವುದರಿಂದ, ಮಳವಳ್ಳಿಯಿಂದ ಹೊರಟು ಕಗ್ಲ ಗ್ರಾಮಕ್ಕೆ ಹೋಗಿ ಅಲ್ಲಿ ಹಳ್ಳವನ್ನು ನೋಡಿ ಮುಂದಕ್ಕೂ ಹೋಗುವುದಕ್ಕಾಗದೆ, ಹಿಂದಕ್ಕೂ ಬರುವುದಕ್ಕಾಗದೆ ಒಂದು ಇಕ್ಕಟ್ಟಿನಲ್ಲಿ ಸಿಕ್ಕುವ ಸಂಭವವಿದೆ. ಆದ್ದರಿಂದ ಈ ರಸ್ತೆಗೆ ಈಗ ಇಷ್ಟೊಂದು ಹಣವನ್ನು ಖರ್ಚು ಮಾಡಿ ಮಧ್ಯೆ ಬಿಟ್ಟಿರುವುದರಿಂದ ಹೇಗಾಗಿದೆಯೆಂದರೆ, ಒಬ್ಬ ಅತಿಥಿಗೆ ಚೆನ್ನಾಗಿ ಊಟ ಹಾಕಿ ಕೊನೆಗೆ ಕೈತೊಳೆಯುವುದಕ್ಕೆ ನೀರಿಲ್ಲ ಎನ್ನುವಹಾಗಿದೆ. ಆದ್ದರಿಂದ ಇಷ್ಟೆಲ್ಲಾ ಹಣ ಖರ್ಚುಮಾಡಿ ಬಹಳ ದೂರ ಕೆಲಸ ಮಾಡಿದ ಮೇಲೆ ಕೇವಲ ಎರಡು ಮೈಲಿಗಳನ್ನು ಮಾಡದೆ ಇಂಥ ಮುಖ್ಯ ರಸ್ತೆಯನ್ನು, ಅದರಲ್ಲೂ ಇನ್ನಾವ ರಸ್ತೆಯ ಸೌಕರ್ಯವೂ ಇಲ್ಲದೆ ಇದೇ ರಸ್ತೆಯನ್ನೇ ಜನರು ನಂಬಿಕೊಂಡಿರುವಾಗ, ಹಾಗೆಯೇ ಬಿಟ್ಟರೆ ಗ್ರಾಮಾಂತರದ ಜನಗಳಿಗೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಈ ರಸ್ತೆಯನ್ನು ಮಾಡಿಸಿಕೊಟ್ಟು, ಈಗಾಗಲೇ ಮಾಡಿರುವ ರಸ್ತೆಯನ್ನೂ ಸ್ವಲ್ಪಮಟ್ಟಿಗೆ ಸರಿಪಡಿಸಿ ಸರ್ಕಾರದವರು ನಮ್ಮ ಭಾಗದ ಜನಗಳಿಗೆ ಸೌಕರ್ಯವನ್ನು ಕಲ್ಪಿಸಿಕೊಡಬೇಕೆಂದು ಈ ನಿರ್ಣಯವನ್ನು ತಂದಿದ್ದೇನೆ. ಮಾನ್ಯ ಸದಸ್ಯರೆಲ್ಲರೂ ತಮ್ಮ ಒಪ್ಪಿಗೆಯನ್ನು ಕೊಡಬೇಕೆಂದು ಬೇಡುತ್ತೇನೆ.

Mr. SPEAKER.—Cut motion moved:

"That the demand be reduced by Rs. 100".

ಶ್ರೀ ಎಂ. ಚಿಕ್ಕಲಿಂಗಯ್ಯನವರು (ಮಳವಳ್ಳಿ ಅನುಸೂಚಿತ ಜಾತಿಗಳು).—ಅಧ್ಯಕ್ಷರೇ, ನನ್ನ ಸ್ನೇಹಿತರು ತಂದಿರತಕ್ಕ ಈ ನಿರ್ಣಯ ಬಹಳ ಮುಖ್ಯವಾದುದು. ಏಕೆಂದರೆ ಈ ರಸ್ತೆಯನ್ನು ಈಗಾಗಲೇ 5-6 ವರ್ಷದ ಹಿಂದೆಯೇ ತೆಗೆದುಕೊಂಡು ಅವರು ಹೇಳಿದಹಾಗೆ 30-40 ಸಾವಿರ ರೂಪಾಯಿಗಳನ್ನು ಅದರ ಮೇಲೆ ಖರ್ಚು ಮಾಡಿದೆ. ಈಗೇನಿದ್ದರೂ ಎರಡು ಮೂರು cause-way ಗಳನ್ನು ಕಟ್ಟಿಸುವುದಕ್ಕೆ ಸಾಧ್ಯವಾಗದೇ ಕೆಲಸ ನಿಲ್ಲಿಸಿಕೊಂಡಿದ್ದಾರೆ. ಈ

(ಶ್ರೀ ಎಂ. ಚಿಕ್ಕಲಿಂಗಯ್ಯನವರು)

ಒಂದು ಕಾರಣದಿಂದ ತಾವಿದನ್ನು ಮಾಡಿಸಬೇಕೆಂದು ಹೇಳುವುದಲ್ಲದೆ, ಇನ್ನೊಂದು ಕಾರಣವಿದೆ. ನಮ್ಮ ಮಳವಳ್ಳಿಗೆ ಆಹಾರಪದಾರ್ಥಗಳನ್ನು ತರಬೇಕಾದರೆ ಎಷ್ಟೊಂದು ಕಷ್ಟಪಟ್ಟು ಲಾರಿಗಳಿಗೆ ವಿಪರೀತವಾಗಿ ಖರ್ಚುಮಾಡಬೇಕಾಗಿದೆಯೆಂಬುದನ್ನು ಅಲ್ಲಿನ ಲೋಕಲ್ ಆಫೀಸರುಗಳನ್ನು ಕೇಳಿದರೆ ಗೊತ್ತಾಗುತ್ತದೆ. ಈ ರಸ್ತೆಯನ್ನು ಕೈಕೊಳ್ಳಬೇಕೆಂದು ಹಿಂದೆಯೇ 60,000 ರೂಪಾಯಿಗಳಿಗೆ ಒಂದು ರಿವೈಸ್ಡ್ ಎಸ್ಟಿಮೇಟ್ ಸಹ ಆಗಿ ದುಡ್ಡಿನ ಅಭಾವದಿಂದ ಹಾಗೆಯೇ ನಿಂತಿದೆ. ಇದು ಬಹು ಮುಖ್ಯವಾದ ರಸ್ತೆ; ಎಲ್ಲಾ ವಿಧದಲ್ಲೂ ಆವಶ್ಯಕವಾದದ್ದು. ಆದ್ದರಿಂದ ಆದಷ್ಟು ಜಾಗ್ರತೆ ಈ ವರ್ಷವೇ ಇದನ್ನು ಪೂರೈಸಿ ಜನರಿಗೆ ಮಾರ್ಗಾನುಕೂಲ ಕಲ್ಪಿಸಿಕೊಡಬೇಕೆಂದು ಹೇಳಿ ಈ ನಿರ್ಣಯವನ್ನು ನಾನು ಸಮರ್ಥಿಸುತ್ತೇನೆ.

Sri T. CHANNIAH (Minister for Public Health and Local Self-Government).—Mr. Speaker Sir, I realise the importance of this road but the Government have to observe certain formalities before any sanction is accorded to an estimate. The original estimate, Sir, was made in the year 1946 for Rs. 4,800, but a revised estimate was again made and was sent to the Rural Development Commissioner. Government now have received the revised estimate and they have again asked the Deputy Commissioner, Mandya, to send a detailed report regarding the particulars of the length of the road and the number of villages that would be benefitted and the village contribution and also the amount already spent for the formation of the road. As soon as the reply is received from the Deputy Commissioner, we, on the part of Government, will expedite the work and complete the work. In view of this assurance, I request the Member to withdraw the cut motion.

Sri B. P. NAGARAJAMURTHY.—I beg leave of the House to withdraw my cut motion.

The cut motion was, by leave, withdrawn.

Tree-planting on a Planned Basis.

Sri H. C. LINGA REDDY (Malur).—Sir, I move:

"That the demand under the head '40-A. Rural Development' for Rs. 30,62,000 be reduced by Rs. 100 (to raise a discussion on the necessity for tree-planting on a planned basis in the State)."

*ಈ ಖೋತಾ ನಿರ್ಣಯವನ್ನು ಸಭೆಯ ಮುಂದಿಡುತ್ತಾ ಕೇವಲ ಒಂದೆರಡು ಮಾತುಗಳನ್ನು ಮಾತ್ರ ನಾನು ಹೇಳಬೇಕೆಂದಿದ್ದೇನೆ. ನಮ್ಮ ಸಂಸ್ಥಾನದಲ್ಲಿ ಮರಗಳ ಸಂಖ್ಯೆ ಬಹಳ ಕಡಮೆಯಾಗುತ್ತಿದೆಯೆಂದು ಮಾನ್ಯ ಸದಸ್ಯರನೇಕರು ಅರಣ್ಯಶಾಖೆಯ ವಿಷಯ ಚರ್ಚೆಗೆ ಬಂದಾಗ ತಿಳಿಸಿದ್ದಾರೆ. ಅಲ್ಲದೆ ಅನೇಕ ಸಂದರ್ಭಗಳಲ್ಲಿ ಮರಗಳ ಸಂಖ್ಯೆಯನ್ನು ಆದಷ್ಟು ಜಾಸ್ತಿಮಾಡಬೇಕೆಂದೂ, ವ್ಯವಸ್ಥಿತ ರೀತಿಯಲ್ಲಿ ಬೆಳೆಸಬೇಕೆಂದೂ ಈ ಸಭೆಯ ಸದಸ್ಯರು ಒತ್ತಾಯ ಪಡಿಸಿದ್ದಾರೆ. ಇಷ್ಟಾದರೂ ಇಂದು ಸಂಸ್ಥಾನದಲ್ಲಿ ನೋಡಿದರೆ ಮರಗಳನ್ನು ಕಡಿಯುವುದೇ ಜಾಸ್ತಿಯಾಗಿದೆಯೆಂದು ತೋರುತ್ತದೆ. ಮರಗಳನ್ನು ಜಾಸ್ತಿಯಾಗಿ ನೆಟ್ಟು ಅಭಿವೃದ್ಧಿಪಡಿಸುವ ಬದಲು ಎಲ್ಲೆಲ್ಲೂ ಕೂಡ ಅನೇಕರು ಮರಗಳನ್ನು ಕಡಿದು ಹಾಕುತ್ತಿದ್ದಾರೆ. ಅದರಲ್ಲೂ ಇತ್ತೀಚೆಗೆ ಕ್ಷಾಮ ಪ್ರದೇಶಗಳಲ್ಲಿ ದನಗಳಿಗೆ ಮೇವಿಲ್ಲದಿರುವಾಗ ಮರಗಳ ಸೊಪ್ಪನ್ನೂ ರೆಂಬೆಯನ್ನೂ ಕಡಿದು ಹಾಕಿ ಮರಗಳನ್ನು ನಾಶಪಡಿಸಿರುವ ವಿಷಯ ಕ್ಷಾಮ ಪ್ರದೇಶಗಳಿಗೆ ಹೋಗಿರುವವರಿಗೆ ಚೆನ್ನಾಗಿ ಮನವರಿಕೆಯಾಗಿರಬೇಕು. ಅದರಲ್ಲೂ ಬಾಗೇಪಲ್ಲಿ, ಗುಡಿಬಂಡೆ, ಗೋರಿಬಿದನೂರು ತಾಲ್ಲೂಕುಗಳಲ್ಲಿ ರಸ್ತೆಯ ಮಗ್ಗುಲಲ್ಲಿರುವ ಆಲದ ಮರ, ಹೊಂಗೆಮರಗಳೆಲ್ಲಾ ಸೊಪ್ಪಿಲ್ಲದೆ ಬರಿದಾಗಿ ಕಾಣುತ್ತಿರುವುದು ಎಲ್ಲರ ಗಮನಕ್ಕೂ ಬಂದಿರಬಹುದು. ಹೀಗೆಯೇ ಬೇರೆ ಕಡೆಗಳಲ್ಲೂ ಸಹ ಸಾಲುಮರಗಳನ್ನು ಹೆಚ್ಚಿಗೆ ಕಡಿದು ಹಾಕುತ್ತಿರುವುದನ್ನು ಕಾಣಬಹುದು. ಉದಾಹರಣೆಗೆ ಬೆಂಗಳೂರು—ಹೊಸಕೋಟೆ ರಸ್ತೆಯಲ್ಲಿ ವೈಟ್‌ಫೀಲ್ಡ್ ಕಡೆ ಹೋಗಿ ನೋಡಿದರೆ, ರಸ್ತೆಯ ಸಾಲುಮರಗಳ ಕೊಂಬೆ ರೆಂಬೆಗಳನ್ನು

ಕಡಿದು ಹಾಕಿರುವುದನ್ನು ನೋಡಿದರೆ, ಅಲ್ಲಿ ಯಾರೂ ಹೇಳುವವರು ಕೇಳುವವರು ಇಲ್ಲವೋ ಎಂದೆನಿಸುತ್ತದೆ. ಹೀಗೆ ನಾವು ಒಂದೆಡೆ ಮರಗಳನ್ನು ಜಾಸ್ತಿಮಾಡಬೇಕು, ಜಾಸ್ತಿಯಾಗಿ ಬೆಳೆಯಬೇಕು ಎಂದು ಹೇಳುತ್ತಿದ್ದು, ಇನ್ನೊಂದುಕಡೆ ವಿಶೇಷವಾಗಿ ಜನರು ಕಡಿಯಲಿಕ್ಕೆ ಅವಕಾಶಕೊಟ್ಟದ್ದರೆ ಹೇಗೆ? ಇದು ಬಹಳ ಅನ್ಯಾಯ. ಆದ್ದರಿಂದ ಮರಗಳನ್ನು ಹೆಚ್ಚಿಗೆ ನೆಟ್ಟು ಬೆಳೆಸಬೇಕಾದರೆ ಮೊದಲು ಈಗ ಮರಗಳನ್ನು ಕಡಿದುಹಾಕುತ್ತಿರುವುದರ ಕಡೆ ಹೆಚ್ಚಿಗೆ ಗಮನಕೊಟ್ಟು ಮರಗಳನ್ನು ಕಡಿದುಹಾಕುವವರಿಗೆ ಸರಿಯಾದ ಶಿಕ್ಷೆಯನ್ನು ವಿಧಿಸಬೇಕೆಂದು ನಾನು ಒತ್ತಾಯದಿಂದ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಮರಗಳನ್ನು ನೆಡುವ ಕಾರ್ಯಕ್ರಮ ನಮ್ಮಲ್ಲಿ ಸಾಮಾನ್ಯವಾಗಿ ಮಹಾರಾಜರ ವರ್ಧಂತ್ಯುತ್ಸವದ ಸಂದರ್ಭದಲ್ಲೂ ಮಹಾತ್ಮಾ ಗಾಂಧಿಯವರ ಜನ್ಮದಿನೋತ್ಸವದ ಸಂದರ್ಭದಲ್ಲೂ ವಿಜೃಂಭಣೆಯಿಂದ ಸಾಗುತ್ತಿತ್ತು. ಈ ಸಲವೇಕೋ ಮಹಾರಾಜರ ವರ್ಧಂತಿ ದಿನ ಹತ್ತಿರಬಂದರೂ ಸರ್ಕಾರದವರು ಏನು ಕಾರ್ಯಕ್ರಮ ಹಾಕಿಕೊಂಡಿದ್ದರೆಂಬುದೇ ಕಾಣುವುದಿಲ್ಲ ಬಹುಶಃ ಇನ್ನೂ ಮಳೆ ಬಂದಿಲ್ಲವೆಂದು ಬಿಟ್ಟಿರಬಹುದು. ಮಹಾತ್ಮಾಗಾಂಧಿಯವರ ಜನ್ಮದಿನೋತ್ಸವದ ಹೊತ್ತಿಗಾದರೂ ಮಳೆ ಬರಲೆಂದು ಪ್ರಾರ್ಥನೆಮಾಡೋಣ. ಆ ಸಂದರ್ಭದಲ್ಲಿ ಹೆಚ್ಚಾಗಿ ಮರಗಳನ್ನು ನೆಡುವ ಏರ್ಪಾಡು ಮಾಡಬೇಕೆಂದು ಪ್ರಾರ್ಥನೆ.

ಸರ್ಕಾರದವರು ಈಗ ಅನೇಕ ಕಡೆಗಳಲ್ಲಿ ಕೂಪುಗಳನ್ನು ಮಾಡಿ ಸೌದೆಗಾಗಿ ಕಾಡುಗಳನ್ನು ಕಡಿಯುವುದಕ್ಕೆ ಕೊಡುತ್ತಿದ್ದಾರೆ. ಬಾಗೆಪಲ್ಲಿ, ಗುಡಿಬಂಡೆ ತಾಲ್ಲೂಕಿನ ಅರಣ್ಯಗಳಲ್ಲಿ ಕೂಪ್‌ಸಿಸ್ಟಂ ಪ್ರಕಾರ ಬೆಂಗಳೂರಿಗೆ ಸೌದೆಯನ್ನು ಸರಬರಾಯಿಮಾಡಲು ಕಂಟ್ರಾಕ್ಟರುಗಳಿಗೆ ಕೊಟ್ಟು ಮರಗಳನ್ನು ಕಡಿಸಿಹಾಕುತ್ತಿದ್ದಾರೆ. ಇನ್ನಾದರೂ ಕೂಡಲೆ ಈ ರೀತಿ ಮರಗಳನ್ನು ಕಡಿಸುವುದನ್ನು ನಿಲ್ಲಿಸಬೇಕೆಂದು ಹೇಳುತ್ತೇನೆ. ಸೌದೆ ಬೇಕಾದರೆ ಮಲೆನಾಡಿನಲ್ಲೋ ಅಥವಾ ಬೇರೆ ಪ್ರದೇಶಗಳಲ್ಲೋ ಎಲ್ಲಿ ಯಥೇಚ್ಛವಾಗಿ ಮರಗಳು ಬೆಳೆಯುತ್ತವೆಯೋ ಅಲ್ಲಿಂದ ತರಿಸಿಕೊಳ್ಳುವ ಏರ್ಪಾಡುಮಾಡಿಕೊಳ್ಳಿ. ಏಕೆಂದರೆ, ಮರಗಳು ಎಲ್ಲಿ ಹೆಚ್ಚಾಗಿ ಬೆಳೆದಿರುತ್ತವೆಯೋ ಅಲ್ಲಿ ಮರಗಳ ಮೇಲಿನ ತಂಪು ವಾತಾವರಣ ಮೋಡಗಳನ್ನು ಆಕರ್ಷಿಸಿ ಮಳೆಯನ್ನು ಬರುವಂತೆ ಮಾಡುತ್ತವೆಂಬುದು ಎಲ್ಲರಿಗೂ ಅನುಭವಕ್ಕೆ ತಿಳಿದುಬಂದಿರುವ ವಿಷಯವಾಗಿದೆ. ಅರಣ್ಯಗಳು ವಿಶೇಷವಾಗಿರುವಕಡೆ ಮಳೆ ಹೆಚ್ಚಾಗಿ ಬರುತ್ತದೆಂದು ವಿಜ್ಞಾನಿಗಳು ಹೇಳುತ್ತಾರೆ. ನಮ್ಮ ಕಡೆಗಳಲ್ಲಿ ವಿಶೇಷವಾಗಿ ಮಳೆ ಬಾರದಿದ್ದರೂ ಯಾವ ಭಾಗದಲ್ಲಿ ಹೆಚ್ಚಿಗೆ ಮರಗಳಿರುತ್ತವೋ ಅಲ್ಲಿ ಆಗಾಗ್ಗೆ ಮಳೆ ಬರುತ್ತದೆಂದು ಗೊತ್ತಾಗಿದೆ. ಆದ್ದರಿಂದ ಸರ್ಕಾರದವರು ದಯವಿಟ್ಟು ಮಳೆಯ ಅಭಾವದ ಪ್ರದೇಶಗಳಲ್ಲಾದರೂ ಮರಗಳನ್ನು ಹೀಗೆ ಕಡಿಯುವುದನ್ನು ನಿಲ್ಲಿಸುವುದಲ್ಲದೆ ಅಲ್ಲಿ ಹೆಚ್ಚಿಗೆ ಮರಗಳನ್ನು ನೆಡೆಸುವ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ. ಇಷ್ಟು ವಿಷಯಗಳನ್ನು ಹೇಳಿ ಈ ಖೋತಾ ನಿರ್ಣಯವನ್ನು ಮಾನ್ಯ ಸದಸ್ಯರ ಒಪ್ಪಿಗಾಗಿ ಸಭೆಯ ಮುಂದಿಡುತ್ತೇನೆ.

Mr. SPEAKER.—Cut motion moved:

"That the demand be reduced by Rs. 100."

If any Hon'ble Member wants to oppose this cut motion, he will be given a chance.

(Several members rose)

At this rate we cannot finish all the cut motions by 5 O' Clock. The Hon'ble Minister may reply.

Sri T. CHANNIAH.—Mr. Speaker Sir, the Government have realised the need for planting more trees and appreciate the suggestions made by the Hon'ble Members. The planting of trees was in vogue from the time of King Ashoka. This is not therefore a new suggestion made by the Member who spoke just now. I must say, Sir, that it is the duty of the villagers to plant trees on the road side, in parks and other areas intensively. The Government of India, in the year 1949, gave a suggestion to our Government to take to intensive planting of trees.

[(SRI T. CHANNIAH)

On that suggestion, the Mysore Government took up this intensive drive to planting trees. Accordingly, in the year 1949, our Government gave a sum of Rs. 10,000 for this drive. In that year 15,78,236 trees were planted. Again in the year 1950 our Government gave Rs. 12,000 for the planting of trees.

Sri B. HUTCHE GOWDA (Turuvekere).—How many survived ?

Sri T. CHANNIAH.—That year, 13,86,828 trees were planted. Again, in the year 1951 Government gave Rs. 15,000 for this purpose. During that year 36,54,379 trees were planted. Now our friend Sri Linga Reddy suggests that Government should again give sufficient funds for this purpose. But, I may bring to his notice that what is got for nothing, sometimes is good for nothing. That he must understand. It is the people who should take better care of the trees and when people pay for them, then only they will have the zeal to maintain and protect the trees ; not otherwise. As Hon'ble Members know, the financial condition of Government is such that it is not in a position to provide or allot sums for this purpose. On this ground we have not allotted any amount in the budget for 1952-53.

Sri H. C. LINGA REDDY.—I said, it must be encouraged.

Sri T. CHANNIAH.—It is the duty of the villagers to take up this intensive drive. It is a sort of encouragement that Government was giving. It is for the villagers to take up this work and grow more trees. It is on that basis Government gave some funds and not to continue it for ever. The Member may also know that Government have issued instructions to the Deputy Commissioners that if the villagers plant trees they should be given ' Sanads ' and they may have the right over the trees. Accordingly, we have instructed the Deputy Commissioners to see that more trees are planted along the road side and that intensive planting of trees must be taken up wherever there is possibility.

Sri Linga Reddy said that there was more destruction of trees rather than planting. Of course, it is a fact. But, again I want to make him understand that it is the duty of the villagers to prevent such cutting of trees, because Government cannot have watch and ward over those people who cut the branches of trees on road sides.

ಶ್ರೀ ಕೆ. ವಿ. ಶಂಕರ ಗೌಡರು (ಮಂಡ್ಯ).—ಮೈಸೂರು-ಬೆಂಗಳೂರು ಮೇಯಿರ್ ರೋಡಿನಲ್ಲಿ ಮರಗಳನ್ನು ಹೀಗೆ ಕತ್ತರಿಸುವುದನ್ನು ನಿಲ್ಲಿಸುವುದೂ ಹಳ್ಳಿಯ ಜನರ ಕರ್ತವ್ಯವೇ?

Sri T. CHANNIAH.—Generally, that was the practice. The village officers have an obligatory duty to look after these trees.

Sri K. V. SHANKARE GOWDA.—I am referring to trees which are on the main road side where there are no villages.

Sri T. CHANNIAH.—Of course, the Public Works Department will have to look after such cases, but some times such things happen and Government cannot help in the matter.

3 P.M.

The Hon'ble Member also suggested that deterrent punishment should be given to those who cut trees indiscriminately. In this regard I may assure Hon'ble Members that the Chief Minister is very much interested to impose severe punishment on such persons who cut trees without the permission of the Government.

Further, the Hon'ble mover of the cut motion referred to the fuel coupes that are being given and said that a lot of trees are being cut and wasted. I may state for his information that Government have taken all precautionary measures to ensure that the fuel trees are cut by contractors only to the extent covered by the licence permits and not more than that. Government have given instructions to forest officers to see that these fuel coupes are............

ಶ್ರೀ ಹೆಚ್. ಸಿ. ಲಿಂಗಾರೆಡ್ಡಿಯವರು.—'ಕೂಪ್' ಪದ್ಧತಿಯ ಪ್ರಕಾರ ಕೊಡುವುದರಿಂದ ಮರಗಳು ನಷ್ಟವಾಗುತ್ತವೆ. ಇದನ್ನು ನಿಲ್ಲಿಸಿದರೆ ಮರಗಳು ವೃದ್ಧಿಯಾಗುತ್ತವೆ.

Sri T. CHANNIAH.—If the Hon'ble Member brings to the notice of the Government any such places, I assure him that Government will take care that in areas where fuel coupes are given to the contractors they do not cut trees indiscriminately. But wherever it is possible and necessary from the point of view of conserving the forest wealth and allowing necessary exploitation, the Government will have to give out these coupes.

So, Sir, in the light of the information I have given that it is the duty of the villagers to plant more trees and not that of the Government, I request the Hon'ble Member Sri H. C. Linga Reddy to kindly withdraw his cut motion.

Sri H. C. LINGA REDDY.—One information :

'ಕೂಪ್' ಪದ್ಧತಿಯನ್ನು ವಜಾಮಾಡುವುದನ್ನು ಪರಿಶೀಲಿಸುವುದಿಲ್ಲವೆ?

Mr. SPEAKER.—The Hon'ble Minister has answered it already. What does the Hon'ble Member propose to do with his cut motion ?

Sri H. C. LINGA REDDY.—I have no alternative but to seek leave to withdraw it.

The cut motion was, by leave, withdrawn.

Mr. SPEAKER.—I will now put the Demand to the vote.

Sri B. HUTCHE GOWDA.—I rise to oppose the Demand, Sir.

Mr. SPEAKER.—Then we will adjourn now and meet at 3-40 P.M.

The House adjourned at Ten Minutes past Three of the Clock and re-assembled at Forty Minutes past Three of the Clock.

[Mr. Speaker in the Chair.]

Mr. SPEAKER.—Now discussion on the main Demand.

ಶ್ರೀ ಬಿ. ಹುಚ್ಚೇಗೌಡರು.—ಸ್ವಾಮಿ, ಇದರಲ್ಲಿ ಒಂದು ವಿಚಾರವಿದೆ. ಅದನ್ನು ತಿಳಿಸುವ ಸಲುವಾಗಿ ಎರಡು ಮಾತುಗಳನ್ನಾಡಬೇಕೆಂದು ನಾನು ɛ ; ನಿಂತಿದ್ದೇನೆ.

ಗ್ರಾಮಾಂತರ ಪ್ರದೇಶಗ ? ಕುಡಿಯುವ ನೀರಿನ ಅಭಾವ ವಿಪರೀತವಾಗಿದೆ. ಅದನ್ನು ಇಷ್ಟೇ ಎಂದು ಹೇಳತೀರದಾಗಿದೆ. ಅದನ್ನು ವರ್ಣಿಸಲು ಸಾಧ್ಯವಿಲ್ಲ. ಈ ಕ್ಷಾಮ ನಿವಾರಣೆಯ ಬಾಬಿನಲ್ಲಿ ಕಳೆದ ಸಾಲಿನಲ್ಲಿ ತಾವು ಗ್ರಾಮಾಂತರಗಳಲ್ಲಿ ಕುಡಿಯುವ ನೀರಿನ ಸೌಕರ್ಯಕ್ಕೆ ಒದಗಿಸಿದ್ದ 12ಲಕ್ಷ ರೂಪಾಯಿಗಳಲ್ಲಿ ಎಂದರೆ ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಗೋಸ್ಕರ ಒದಗಿಸಿದ್ದ ಈ ಮೊಬಲಗಿನಲ್ಲಿ, ವಾಟರ್‌ಸಪ್ಲೈ ಬಗ್ಗೆ ಕೇವಲ $4\frac{1}{2}$ ಲಕ್ಷ ರೂಪಾಯಿಗಳು ಖರ್ಚಾಗಿ, ಬಾಕಿ ದುಡ್ಡೆಲ್ಲಾ ಲ್ಯಾಪ್ಸಾಗಿ ಸರ್ಕಾರಕ್ಕೆ ಉಳಿತಾಯವಾಯಿತು. ಈ ಹಿಂದೆ ಈ ಬಾವಿಗಳ ಕೆಲಸವನ್ನು ರೆವಿನ್ಯೂ ಇಲಾಖೆಗೆ ವಹಿಸಲಾಗಿತ್ತು. ಇತ್ತೀಚೆಗೆ ಆ ಕೆಲಸವನ್ನೂ ತಾವು ಪಿ. ಡಬ್ಳ್ಯು. ಡಿ. ಗೆ ವಹಿಸಿರುವುದರಿಂದ, ಈ ದಿವಸ ಆ ಕೆಲಸವನ್ನು ಅವರೂ ಮಾಡುತ್ತಿಲ್ಲ ಇವರೂ ಮಾಡುತ್ತಿಲ್ಲ. ಹೀಗಾಗಿ, ಅನೇಕ ಕೆಲಸಗಳು ಅರ್ಧಮರ್ಧವಾಗಿ ಹಾಗೆಯೇ ಕೈಬಿಟ್ಟುಹೋಗಿವೆ. ಹೀಗೆ ಅನೇಕ ವರ್ಷಗಳಿಂದಲೂ ಕುಡಿಯುವ ನೀರಿಗಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಬಹಳ ಕಷ್ಟವಾಗಿರುತ್ತದೆ. ತಾವು ಈ ಬಗ್ಗೆ ಯಾವ ನಿಗಾವಣೆಯನ್ನೂ ತೆಗೆದುಕೊಂಡಿಲ್ಲ. ಆದರೆ, ಈವರ್ಷ ಈಬಾಬಿಗೆ 9 ಲಕ್ಷ ರೂಪಾಯಿಗಳನ್ನು ಮಾತ್ರ ಒದಗಿಸಿದ್ದಾರೆ. ಈಗ ಇರತಕ್ಕ ಆಕ್ಟಿನ ಪ್ರಕಾರ ಮುಂದಕ್ಕೆ ಜಿಲ್ಲಾ ಬೋರ್ಡುಗಳವರು ಗ್ರಾಮಾಂತರ ಒಳ ರಸ್ತೆಗಳ ಖರ್ಚನ್ನೂ ಸಹ ವಹಿಸಬೇಕಾಗಿರುತ್ತದೆಯೆಂದು ತಿಳಿಸಿದ್ದಾರೆ. ಆದರೆ ಆ ಬಾಬುಗಳಿಗೆಲ್ಲಾ 10 ಲಕ್ಷದಮೇಲೆ ಖರ್ಚಾಗತಕ್ಕ ಅವಕಾಶವಿದೆ. ಹಾಗೆಯೇ ಆ ಒಂದು ಕಮ್ಯುನಿಕೇಷನ್ ಬಾಬಿಗೆ 10 ಲಕ್ಷದಮೇಲೆ ಹಣ ಬೇಕಾಗಿರುವಾಗ, ಇವರು ಒದಗಿಸಿರತಕ್ಕ 12 ಲಕ್ಷದಲ್ಲಿ ನಾವು ಈ ಕುಡಿಯುವನೀರಿನ ಬಾವಿಗಳ ಬಗ್ಗೆ ಎಷ್ಟು ಖರ್ಚುಮಾಡಲು ಸಾಧ್ಯವಿದೆ ಯೆಂಬುದು ತಾವೇ ಆಲೋಚಿಸಬೇಕಾಗಿರುವ ವಿಷಯ. ಜಿಲ್ಲಾ ಬೋರ್ಡುಗಳವರು ನಡೆಸ

(ಶ್ರೀ ಬಿ. ಹುಚ್ಚೇಗೌಡರು)

ಬೇಕಾಗಿರುವ ಬಾಬುಗಳಾದರೋ ಒಂದಲ್ಲ; ಗ್ರಾಮಾಂತರ ಪ್ರದೇಶಕ್ಕೆ ಕುಡಿಯುವ ನೀರಿನ ಸರಬರಾಯಿ ಮಾಡುವುದು, ಗ್ರಾಮಾಂತರ ರಸ್ತೆಗಳನ್ನು ಮಾಡಿಸುವುದು, ಜನಾರೋಗ್ಯದ ಕಾರ್ಯಗಳನ್ನು ಕೈಕೊಳ್ಳುವುದು, ಡ್ರೈನೇಜು, ಆಟದ ಮೈದಾನ, ಹೀಗೆ ನಾನಾರೀತಿಯ ಕೆಲಸಗಳಿರುತ್ತವೆ. ಈ 1950-51ನೇ ಸಾಲಿಗೆ ಈ ಡೆವಲಪ್‌ಮೆಂಟ್ ಬಾಬಿಗೆ 81ಲಕ್ಷ 45 ಸಾವಿರ ರೂಪಾಯಿಗಳನ್ನು ಒದಗಿಸಿದ್ದಾರೆ. ಈವರ್ಷ ಪಂಚಾಯಿತಿಗಳಿಗೂ ಮತ್ತು ಜಿಲ್ಲಾ ಬೋರ್ಡು ಗಳಿಗೂ 20ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಇವರಿಗೆ ಈ 20ಲಕ್ಷ ರೂಪಾಯಿಗಳನ್ನು ಒದಗಿಸಿರುವುದರಿಂದ, ಈಗ ಅವರು 80 ಲಕ್ಷ ರೂಪಾಯಿಗಳ ಖರ್ಚನ್ನು ಒಪ್ಪಿಕೊಂಡು ಕೆಲಸ ನಡೆಸಬೇಕಾಗಿರುತ್ತದೆ. ಇಂಥ ಒಂದು ಕಠಿಣವಾದ ಜವಾಬ್ದಾರಿ ಜಿಲ್ಲಾ ಬೋರ್ಡಿನವರ ಮೇಲೆ ಈಗ ಬಿದ್ದಿದೆ. ಹೀಗಾಗಿ ಈ ತಹಲ್‌ವರೆಗೂ ಏನೊಂದು ಸರ್ಕಾರದವರು ರೂರಲ್ ಡೆವಲಪ್‌ಮೆಂಟ್ ಸಮಿತಿಗಳಿಗೆ ಗ್ರಾಂಟನ್ನು ಕೊಟ್ಟಿದ್ದಾರೇ, ಅದರಿಂದ ಅವರು ಗ್ರಾಮಾಂತರ ಪ್ರದೇಶಕ್ಕೆ ಮಾಡಿರತಕ್ಕ ರಸ್ತೆ ಇತ್ಯಾದಿ ನಾನಾಕೆಲಸಗಳಲ್ಲಿ ಗ್ರಾಮಾಂತರದ ಜನರಿಗೆ ಏನೂ ಸಹಾಯವಾಗಿಲ್ಲ. ಆದ್ದರಿಂದ ಈ ಸಾಲಿನ ಬಡ್ಜೆಟ್ಟಿನಲ್ಲಿ ಈ ಕಾಮುಗಾರಿಗಳಿಗೆ ಯಾವ ಮೊಬಲಗನ್ನೂ ಒದಗಿಸದೆ ಇರುವುದರಿಂದ ನಾನು ಈ ಗ್ರಾಂಟನ್ನೇ ವಿರೋಧಿಸಬೇಕಾಗಿದೆ.

ಶ್ರೀ ಎಸ್. ಗೋಪಾಲಗೌಡರು (ಸಾಗರ-ಹೊಸನಗರ).--ಸ್ವಾಮಿ, ಈಗ ಸಭೆಯ ಮುಂದೆ ಇಟ್ಟಿರತಕ್ಕಂಥ ಡಿಮ್ಯಾಂಡ್ ನಂಬರ್ 23ನ್ನು ವಿರೋಧಿಸುತ್ತಾ ನಾನು ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ. ಮುಖ್ಯವಾಗಿ ಹಳ್ಳಿಗಳ ಅಭಿವೃದ್ಧಿ ಕಾರ್ಯವನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಈಚೆಗೆ ಗ್ರಾಮಾಭಿವೃದ್ಧಿ ಇಲಾಖೆಯನ್ನು ಜಾರಿಗೆ ತಂದಿದ್ದಾರೆ. ಈಗಾಗಲೇ ಸಾಕಷ್ಟು ಹಣ ಕೂಡ ಈ ಬಾಬಿನಲ್ಲಿ ಖರ್ಚಾಗಿದೆ. ಈ ವರ್ಷದ ಆಯವ್ಯಯ ಪಟ್ಟಿಯಲ್ಲಿ ಈ ಬಾಬಿಗಾಗಿ 49 ಲಕ್ಷ 2 ಸಾವಿರ ರೂಪಾಯಿಗಳನ್ನು ಅಂದಾಜು ಮಾಡಿ ಇಡಲಾಗಿದೆ; ಮತ್ತು ಜಿಲ್ಲೆ, ತಾಲ್ಲೂಕುಗಳಲ್ಲಿ ಸಮಿತಿಗಳನ್ನು ಸ್ಥಾಪಿಸಿದ್ದಾರೆ. ಹೆಚ್ಚುಹಣ ವರ್ಕ್ಸ್ ಔಟ್‌ಲೇ ಎಂಬ ಬಾಬಿನಲ್ಲಿ ಖರ್ಚು ಮಾಡಬೇಕೆಂದಿಟ್ಟಿರುವುದು ನಮಗೆ ಕಂಡುಬರುತ್ತಿದೆ. ಸುಮಾರು 38ಲಕ್ಷ 31 ಸಾವಿರ ರೂಪಾಯಿಗಳನ್ನು ವರ್ಕ್ಸ್ ಔಟ್‌ಲೇಗಾಗಿ ಇಟ್ಟಿದ್ದಾರೆ, ನಿಜವಾಗಿಯೂ ಗ್ರಾಮಾಭಿವೃದ್ಧಿ ಬಗ್ಗೆ ಹೆಚ್ಚು ಆಸಕ್ತಿವಹಿಸಬೇಕಾದದ್ದು ಉಚಿತ. ಆದರೆ ನಾವು ಯಾವ ಉದ್ದೇಶದಿಂದ ಈ ಒಂದು ಯೋಜನೆಯನ್ನು ಕೈಕೊಂಡಿದ್ದೇವೋ ಆ ಉದ್ದೇಶ ಸಾರ್ಥಕವಾಗಿಲ್ಲ ಎಂಬುದು ನಮಗೆ ಅನುಭವದಿಂದ ಗೊತ್ತಾಗಿದೆ. ನಾನು ನೋಡಿದ ಹಾಗೆ ಈ ಗ್ರಾಮಾಭಿವೃದ್ಧಿ ಯೋಜನೆ ಸಮಿತಿ ಆಯಾ ತಾಲ್ಲೂಕು ಮತ್ತು ಜಿಲ್ಲೆಯ ಸಾರ್ವಜನಿಕ ಕ್ಷೇತ್ರದಲ್ಲಿರ ತಕ್ಕಂಥ ಕೆಲವು ಮುಖಂಡರಿಂದ ರಚಿತವಾಗಿರುತ್ತದೆ. ಆಸಮಿತಿಯವರು ಅಭಿವೃದ್ಧಿ ಕಾರ್ಯವನ್ನು ಸರ್ಕಾರ ಯಾವರೀತಿ ಮಾಡಬೇಕೆಂದು ಸೂಚಿಸುತ್ತದೆಯೋ ಆರೀತಿಯಲ್ಲಿ ಮಾಡಿಕೊಂಡು ಹೋಗಬೇಕಾಗಿದೆ. ಆದರೆ ನಿಜವಾಗಿ ಹಳ್ಳಿಗಳಲ್ಲಿ ಯಾವ ಕಾರ್ಯವನ್ನು ಕೈಕೊಳ್ಳಬೇಕೋ ಅದು ಸಾರ್ಥಕವಾಗಿಲ್ಲ. ಈ ಇಲಾಖೆಗೆ ಸಂಬಂಧಪಟ್ಟ ವ್ಯಾನು ಜಿಲ್ಲೆಯಲ್ಲಿ ಜಿಲ್ಲಾ ಅಭಿವೃದ್ಧಿ ಸಮಿತಿಯ ಅಧ್ಯಕ್ಷರು ಯಾರಾಗಿರುತ್ತಾರೋ ಅವರ ಹತ್ತಿರ ಇರುತ್ತದೆ ಮತ್ತು ಕೆಲವುವೇಳೆಗಳಲ್ಲಿ ಅವರು ಹೆಚ್ಚಾಗಿ ತಮ್ಮ ಸ್ವಂತ ಉಪಯೋಗಕ್ಕೆ ಈ ಕಾರನ್ನು ಕೂಡ ಉಪಯೋಗಿಸಿಕೊಂಡಿರುವುದು ನಮ್ಮ ಗಮನಕ್ಕೆ ಬಂದಿದೆ. ಅನೇಕವೇಳೆ ಹಳ್ಳಿಗಳಿಗೆ ಈ ಪ್ರಚಾರದಿಂದಲಾಗಲಿ ಅಥವಾ ವ್ಯಾನ್ ಮುಖಾಂತರವಾಗಲಿ ಹೆಚ್ಚಿನ ಒಂದು ಉಪಯೋಗ ಕಂಡುಬಂದಿಲ್ಲ. ಉದಾಹರಣೆಗಾಗಿ ನಾನು ಇದನ್ನು ಹೇಳುತ್ತಿದ್ದೇನೆ. ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಕೊಳ್ಳಬೇಕಾದರೆ ಸಾಮಾನ್ಯವಾಗಿ ಮೊದಲು ಒಂದು ಸರ್ವೇಮಾಡಿ ಎಲ್ಲಿ ಅತ್ಯಗತ್ಯ

ವಾಗಿ ಅಭಿವೃದ್ಧಿ ಕಾರ್ಯಗಳಾಗಬೇಕೋ ಅಲ್ಲಿ ಅದನ್ನು ಕೈಕೊಳ್ಳುವುದಕ್ಕೆ ಬದಲಾಗಿ ಆ ಸಮಿತಿಯಪರ ಮತ್ತು ಸಮಿತಿ ಸದಸ್ಯರ ಪ್ರಭಾವದ ಸಲಹೆಗೆ ಮತ್ತು ಪ್ರಭಾವಕ್ಕೆ ಒಳಗಾಗಿ, ಅವರಿಗೆ ಎಲ್ಲಿ ಅಗತ್ಯವೋ, ಎಲ್ಲಿ ಆವಶ್ಯಕವೆಂದು ಕಂಡುಬರುತ್ತದೋ ಅಲ್ಲಿ ಬೇಕಾದ ಕಾರ್ಯಗಳನ್ನು ಕೈಕೊಂಡಿದ್ದಾರೆಯೇ ಹೊರತು ಜನತೆಯ ಒಂದು ಅಗತ್ಯತೆಯನ್ನು ಅರಿತು ಅವರಿಗೆ ಎಲ್ಲಿ ಬಾವಿ ಆಗಬೇಕು, ರಸ್ತೆಯಾಗಬೇಕು ಎಂದು ಯಾವ ಕಡೆ ಹೆಚ್ಚು ಆವಶ್ಯಕವಿರುತ್ತದೆಯೋ ಆ ಸ್ಥಳದಲ್ಲಿ ಆ ಕಾರ್ಯ ಕೈಕೊಂಡಿಲ್ಲ. ಇದಕ್ಕೆ ಅನೇಕ ನಿದರ್ಶನಗಳನ್ನು ಕೂಡ ಕೊಡಬಹುದು.

ಇನ್ನು ಜಿಲ್ಲೆಯಲ್ಲಿ ಸರ್ಕಾರದ ಒಂದು ಅಂಗವಿರುವುದರ ಜೊತೆಗೆ ಜಿಲ್ಲಾ ಬೋರ್ಡನ್ನೂ ಇಟ್ಟುಕೊಂಡಿದ್ದೇವೆ. ಅದಾದಮೇಲೆ ಗ್ರಾಮಾಭಿವೃದ್ಧಿ ಇಲಾಖೆಯೊಂದು ಬಂದಿದೆ. ಹೀಗಾಗಿ ಕಳೆದ 15-20 ವರ್ಷಗಳಿಂದೀಚೆಗೆ ಇಲಾಖೆಗಳನ್ನು ಹೆಚ್ಚಿಸುತ್ತಾ ನಡೆದಿದ್ದಾರೆ. ವ್ಯವಸಾಯದ ಇಲಾಖೆ, ಗ್ರಾಮಾಭಿವೃದ್ಧಿ ಇಲಾಖೆ ಎಂದು ಮಾಡಿದ್ದೇವೆ. ಹಾಗೆಯೇ ಜಿಲ್ಲಾ ಬೋರ್ಡಿದೆ. ಅವು ಹೆಚ್ಚು ಹೆಚ್ಚಾಗಿ ಕೆಲಸ ಮಾಡಲಿ ಎಂಬ ಉದ್ದೇಶದಿಂದ ನಾವು ಇಲಾಖೆಗಳನ್ನು ಹೆಚ್ಚಿಸಿಕೊಂಡು ಹೋದರೂ ಕೂಡ ಈ ದಿವಸ ಅವುಗಳಲ್ಲಿ ಒಳ್ಳೆಯ ಕಾರ್ಯಕ್ರಮ ನಮಗೆ ಕಂಡುಬರುತ್ತಿಲ್ಲ. ಒಂದೊಂದು ಸಣ್ಣ ಬಾಬಿಗೂ ದೇಶದ ಹಣವನ್ನು ಸ್ವಲ್ಪ ಸ್ವಲ್ಪವಾಗಿ ತೆಗೆದುಕೊಂಡು ಒಂದು ರೀತಿಯಲ್ಲಿ ಖರ್ಚುಮಾಡಿಕೊಂಡು ಹೋಗಿದೆಯೇ ಹೊರತು ಅವುಗಳಲ್ಲಿ ಒಂದು ಮ್ಯೂಚುಯಲ್ ಅಂಡರ್‌ಸ್ಟ್ಯಾಂಡಿಂಗ್ ಮತ್ತು ಸಹಕಾರ ನಮಗೆ ಕಂಡುಬಂದಿಲ್ಲ. ಈಗ ಏನಾಗುತ್ತಿದೆಯೆಂದರೆ, ಒಟ್ಟಿನಲ್ಲಿ ನಮಲ್ಲಿರುವ ಹಣವನ್ನು ಆ ರೀತಿ ಹಂಚಿದರು, ಅಷ್ಟೆ. ಅದಕ್ಕೆ ಈಗ ಉದಾಹರಣೆ ಕೊಡಬೇಕೆಂದರೆ ಹೆಚ್ಚು ಆಹಾರ ಬೆಳೆಯುವ ಯೋಜನೆ ಮೇಲೆ ಸುಮಾರು ಎರಡು ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದೇವೆಂದು ಲೆಕ್ಕಸಿಕ್ಕುತ್ತದೆ. ಆದರೆ, ಅದರಿಂದ ಎಷ್ಟು ಉತ್ಪತ್ತಿ ಬಂದಿದೆಯೆಂಬುದು ಈದಿವಸ ಬಹಳ ಚೆನ್ನಾಗಿ ನಮಗೆ ಸ್ಪಷ್ಟವಾಗಿದೆ. ಮಾನ್ಯ ಮಂತ್ರಿಗಳು ಇದರ ಉತ್ಪತ್ತಿ ಒಂದೇಸಲ ಬರದಿದ್ದರೂ ಅನೇಕ ಕಾರ್ಯಮಾಡಿದ್ದೇವೆ, ಇನ್ನು ಮೇಲೆ ಫಲಕೊಡಬಹುದು, ಈಗಸದ್ಯಕ್ಕೆ ಆದಾಯವಿಲ್ಲದಿರಬಹುದು, ಇಂಥ ಕೆಲಸಗಳಿಗೆ ಹಾಕಿರುವುದರಿಂದ ತಕ್ಷಣ ಬತ್ತ ಅಥವಾ ರಾಗಿ ರೂಪದಲ್ಲಿ ಹೆಚ್ಚುಬೆಳೆಕೊಡದಿರಬಹುದು ಎಂದು ಹೇಳಿದರು. ಆದರೆ ಆ ರೀತಿಯಾಗಿ ನಾವು ಹಣವನ್ನು ಖರ್ಚುಮಾಡಿದ್ದೇವೆ. ಸುಮಾರು ಎರಡು ಕೋಟಿ ರೂಪಾಯಿಗಳ ಒಂದು ನೀರಾವರಿ ಯೋಜನೆ ಕೈಕೊಂಡಿದ್ದರೆ ಅದರಿಂದ ಹೆಚ್ಚು ಆಹಾರ ಬೆಳೆಯುವ ಯೋಜನೆಯಂತೆ ಸುಮಾರು 20 ಸಾವಿರ ಎಕರೆಗೆ ನೀರನ್ನೊದಗಿಸಿ ಅದರಿಂದ ಸಹಸ್ರಾರು ಪಲ್ಲ ಬತ್ತ, ರಾಗಿ ಬೆಳೆಯಬಹುದಾಗಿತ್ತು. ಹಾಗೆಯೇ ಗ್ರಾಮಾಭಿವೃದ್ಧಿಯ ಬಾಬಿನಲ್ಲಿ 40 ಲಕ್ಷ ರೂಪಾಯಿಗಳನ್ನು ಖರ್ಚುಮಾಡಲಾಗಿದೆ. ಜಿಲ್ಲಾ ಬೋರ್ಡಿನ ಹಣವನ್ನೂ ಇದೇರೀತಿಯಲ್ಲಿ ಉಪಯೋಗಿಸುತ್ತೇವೆ, ಇದರ ಜೊತೆಗೆ ವ್ಯವಸಾಯದ ಇಲಾಖೆಯಲ್ಲಿ ಇಂಥ ಬಾಬುಗಳ ಮುಖಾಂತರ ಹಣ ಖರ್ಚುಮಾಡುತ್ತೇವೆ. ಇದರಿಂದ ಆಗುತ್ತಿರುವುದು ಏನೆಂದರೆ: ನೇರವಾಗಿ ರೈತರಿಗೆ ಏನು ಹಂಚಬೇಕೊ, ಹಳ್ಳಿಗಳಿಗೆ ಏನು ಹಂಚಬೇಕೊ ಅದನ್ನು ಹಂಚದೆ ತೆಗೆದುಕೊಂಡುಹೋಗಿ ಸಿಬ್ಬಂದಿ, ದೊಡ್ಡ ದೊಡ್ಡ ಅಧಿಕಾರಿಗಳು ಮುಂತಾದವರ ವೇತನ, ಕಾಗದಪತ್ರ, ವ್ಯವಹಾರಗಳು ವಗೈರೆಗೆ ವ್ಯಯಮಾಡುತ್ತಿದ್ದಾರೆ. ಆಕಡೆಯಿಂದ, ನೇರವಾಗಿ ರೈತನಕಡೆಯಿಂದ ನೋಡಿದರೆ ಬಹುಶಃ ಅವನಿಗೆ ನಮ್ಮ ಸರ್ಕಾರ ಮಾಡಿರುವುದೇನು? ದೂರದಲ್ಲಿ ನಿಂತು ನಿರೀಕ್ಷೆ ಮಾಡುವವನಿಗೆ ಈ ಹಣವ್ಯಯವಾಗುತ್ತಿದ್ದರೂ ಯಾವ ಉದ್ದೇಶವೂ ಸಾರ್ಥಕವಾಗಿಲ್ಲವೆಂದು ಕಂಡುಬರುತ್ತದೆ. ಅಲ್ಲದೆ ನಾನು ಕಂಡ ಹಾಗೆ ನಮ್ಮ ಜನತೆಗೆ ಉತ್ತೇಜನದೊರೆತಿಲ್ಲ, ಸಹಾಯ ಒದಗಿಲ್ಲ. ಆರೇಳು ವರ್ಷಗಳಿಂದ ನೋಡಿದರೂ, ಹೆಚ್ಚು ಆಹಾರಬೆಳೆಯುವ ಯೋಜನೆ, ಗ್ರಾಮಾಭಿವೃದ್ಧಿ ಯೋಜನೆ ಎಂಬ

(ಶ್ರೀ ಎಸ್. ಗೋಪಾಲಗೌಡರು)

ವೆಲ್ಲಾ ಇದ್ದರೂ ಹಳ್ಳಿಯಲ್ಲಿ ಒಂದು ಬಾವಿಯಾಗಲಿ, ಒಂದು ರಸ್ತೆಯಾಗಲಿ ಆಗಿಲ್ಲ, ನೇರವಾಗಿ ಯಾವ ಒಂದು ಏರ್ಪಾಡೂ ಆಗಿಲ್ಲ ಎಂದು ಪ್ರಜೆಗಳು ದುಃಖಪಡುವುದನ್ನು ನೋಡಬಹುದು. ಸಹಸ್ರಾರು ರೈತರು ಇದನ್ನು ಹೇಳುತ್ತಾರೆ, ತೋರಿಸುತ್ತಾರೆ. ಇದಕ್ಕಿಂತ ಹೆಚ್ಚಾಗಿ ಈ ಕೆಲಸದ ಸಫಲತೆಗೆ ಸಾಕ್ಷಿ ಕೊಡಬೇಕಾಗಿಲ್ಲ. ಈದಿವಸ ಎಷ್ಟೋ ವಾದಮಾಡಬಹುದು, ನಮ್ಮ ಜನರಿಗೆ ಫಲದೊರಕಿಲ್ಲ ಎಂದು ವ್ಯಸನವನ್ನೂ ಪಡಬಹುದು, ಈ ಯೋಜನೆ ಫಲಕೊಟ್ಟಿದೆ, ಕೊಡುತ್ತದೆ, ಎಲ್ಲಾ ಹಣ ಸಾರ್ಥಕವಾಗಿದೆ ಎಂದೂ ವಾದಮಾಡಬಹುದು. ಅಷ್ಟೇ ಹೊರತು ಸತ್ಯಾಂಶ ನೋಡಿದರೆ ಹಳ್ಳಿಗಳಿಗೆ ಉಪಯೋಗವೇನಾಗಿದೆ? ನಿಜವಾಗಿಯೂ ಗ್ರಾಮಾಭಿವೃದ್ಧಿ ಯೋಜನೆಯಿಂದ, ವ್ಯಾಗ್ ಮುಖಾಂತರ, ಪ್ರಚಾರದ ಮುಖಾಂತರ ಅನುಕೂಲವಾಗಿದೆಯೆ ಎಂದರೆ ಏನೂ ಕಾಣುತ್ತಿಲ್ಲ. ಇದಕ್ಕೆ ಬದಲಾಗಿ ಅಧ್ಯಕ್ಷರು ಮತ್ತು ಸಮಿತಿ ಸದಸ್ಯರು ಊರಿಂದೂರಿಗೆ ಮೀಟಿಂಗುಗಳಿಗೆ, ಅವರ ಕೆಲಸಗಳಿಗೆ ಓಡಾಡಲು ವ್ಯಾಗ್ ಉಪಯೋಗವಾಗುತ್ತಿರುವುದನ್ನು ನೋಡಿದರೆ ಬಹಳ ಸಂಕಟವಾಗುತ್ತದೆ.

4 P.M.

ಆದರೆ ಎಲ್ಲಕ್ಕಿಂತಲೂ ಮುಖ್ಯವಾದ ವಿಷಯವೇನೆಂದರೆ, ಜನಗಳಿಂದ ವಸೂಲಾಗುವ ಹಣ ಕಾಸನ್ನು ಈ ರೀತಿ ಬಾಬುಗಳಿಗೆ ಹಂಚುವಾಗ ಅದಕ್ಕೆ ನಿಗಾಹೆಚ್ಚಿ ಪ್ರತಿಯೊಂದು ಕಾಸೂ ನ್ಯಾಯವಾಗಿ ಖರ್ಚಾಗಬೇಕು ಎಂಬುದು. ಆದ್ದರಿಂದ, ನಮ್ಮ ಉದ್ದೇಶದ ಕೆಲಸ ಆಗಲೇಬೇಕೆಂಬುದು ಬಹಳ ಮುಖ್ಯ. ಈ ಒಂದು ಸಂದರ್ಭದಲ್ಲಿ ರೂರಲ್‌ಡೆವಲಪ್‌ಮೆಂಟ್ ಎಂಬ ಒಂದುಯೋಜನೆ ಏನಿದೆ ಅದನ್ನು ಬಹುಶಃ ಬಿಡಬೇಕು ಎಂಬ ತೀರ್ಮಾನಕ್ಕೆ ಸರ್ಕಾರದವರು ಬಂದಹಾಗೆ ಇದೆ. ಇದನ್ನು ಮುಂದೆ ವಿಲೇಜ್ ಪಂಚಾಯಿತಿ ಮತ್ತು ಡಿಸ್ಟ್ರಿಕ್ಟ್ ಬೋರ್ಡ್‌ಗಳನ್ನು ಹೊಸಕಾನೂನು ಮೇರೆಗೆ ಪುನರ್ರಚನೆ ಮಾಡುವುದರಿಂದ ಈ ಗ್ರಾಮಾಭಿವೃದ್ಧಿ ಇಲಾಖೆಯನ್ನು ತೊಡೆದುಹಾಕಬಹುದು. ಡಿಸ್ಟ್ರಿಕ್ಟ್‌ಬೋರ್ಡ್ ಮತ್ತು ವಿಲೇಜ್ ಪಂಚಾಯಿತಿಗಳ ಮುಖಾಂತರ ಜನತೆಯ ನಿಕಟ ಸಂಬಂಧವಿಟ್ಟುಕೊಂಡು ಸಮಸ್ಯೆಗಳನ್ನು ಪರಿಹಾರಮಾಡಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಮುಂದೆ ಆ ಇಲಾಖೆಯ ಮುಖಾಂತರ ಎಲ್ಲಾ ಹಣವನ್ನು ಖರ್ಚುಮಾಡಬಹುದು ಮತ್ತು ನೇರವಾಗಿ ಸಮಸ್ಯೆಗಳನ್ನು ಬಿಡಿಸುವುದಕ್ಕೆ ಅನುಕೂಲವಾಗುತ್ತದೆ ಎಂಬ ಒಂದು ವಿಷಯವನ್ನು ತಮ್ಮ ಗಮನಕ್ಕೆ ತಂದಿದ್ದೇನೆ.

Mr. SPEAKER.—Why does not the Government give him the book? The first question in that book gives information which he now is seeking—how many lakhs were spent for providing drinking water wells? Perhaps without that basis he is going on. It is the first question in that book. The Member is arguing that nothing was spent.

Sri B. HUTCHE GOWDA.—I said that out of twelve lakhs only five lakhs have been spent.

Mr. SPEAKER.—You said so. But the Member (Sri Gopala Gowda) is not saying so.

ಶ್ರೀ ಎಸ್. ಗೋಪಾಲಗೌಡರು.—ಮತ್ತು ಈ ಸಂದರ್ಭದಲ್ಲಿ ಇನ್ನೊಂದು ಮುಖ್ಯವಾದ ವಿಷಯವೇನೆಂದರೆ, ರೈತರ ಮತ್ತು ಗ್ರಾಮಗಳ ಬೇಡಿಕೆಗಳನ್ನು ನೇರವಾಗಿ ಪೂರೈಸತಕ್ಕ ಒಂದು ಇಲಾಖೆ—ಯಾವ ಹೆಸರಿನಲ್ಲಾದರೂ ಅದನ್ನು ಕರೆಯಿರಿ—ಪ್ರತಿಯೊಂದು ಹಳ್ಳಿಯಲ್ಲೂ ಜನತೆಯ ಹತ್ತಿರದಲ್ಲಿ ಇದ್ದರೆ ಹೆಚ್ಚು ಅನುಕೂಲವಾಗುತ್ತದೆ. ಮಲ್ಟಿಪರ್ಪಸ್ ಕೋಆಪರೇಟೀವ್ ಸೊಸೈಟಿ ಇದೆ, ವ್ಯವಸಾಯದ ಇಲಾಖೆ ಇದೆ, ಗ್ರಾಮಾಭಿವೃದ್ಧಿ ಯೋಜನೆ ಇದೆ; ಇವುಗಳ ಜೊತೆಗೆ, ಪ್ರಚಾರವನ್ನೂ ಮಾಡುತ್ತೇವೆ. ಸರ್ಕಾರದವರಿಗೂ ರೈತರಿಗೂ ಎಷ್ಟೋ ವಿಷಯಗಳು ತಿಳಿಯಬೇಕಾಗಿರುತ್ತವೆ. ಅದಕ್ಕೆ ಒಂದು ಏಜನ್ಸಿ ರೂಪದಲ್ಲಿ ಸರ್ಕಾರವನ್ನು ಪೂರ್ಣ ಸ್ವರೂಪದಲ್ಲಿ ಪ್ರತಿನಿಧಿಸತಕ್ಕ ಒಂದು ಇಲಾಖೆಯನ್ನು ಹಳ್ಳಿ

ಯಲ್ಲಿ ರೂಢಿಸಿಕೊಂಡು ಬರಬೇಕು. ಹೀಗೆ ಸರ್ಕಾರಕ್ಕೂ, ಹಳ್ಳಿಯ ಜನರಿಗೂ, ರೈತರಿಗೂ ಇರತಕ್ಕ ಸಂಬಂಧವನ್ನು ನೇರವಾಗಿ ಇಟ್ಟುಕೊಂಡು ಕೆಲಸ ನಡೆಯುತ್ತಾ ಇರಬೇಕು. ಇಂಥ ಒಂದು ಯೋಜನೆಯನ್ನು ಕಾರ್ಯಗತ ಮಾಡುವುದಾದರೆ, ಅನೇಕ ಬಾಬುಗಳಲ್ಲಿ ಅಲ್ಪಸ್ವಲ್ಪ ಹಣವನ್ನು ಉಳಿಸಿಕೊಂಡು ನೇರವಾಗಿ ಹಳ್ಳಿಯ ರೈತರ ಅಭಿವೃದ್ಧಿಗೆ ಖರ್ಚುಮಾಡುವುದಕ್ಕೆ ಸಾಧ್ಯವಾಗುತ್ತದೆ.

ಗ್ರಾಮಾಭ್ಯುದಯ ನಮ್ಮ ದೇಶದಲ್ಲಿ ಹೆಚ್ಚಾಗಿ ಆಗಿದೆಯೇ ಎಂದು ನಾವು ಯೋಚನೆ ಮಾಡುವುದಾದರೆ ಇನ್ನೂ ಇವೊತ್ತು ನಾವು ಗ್ರಾಮಾಭ್ಯುದಯ ಪ್ರಾರಂಭವೇ ಮಾಡಿಲ್ಲ ಎಂದು ಹೇಳಬೇಕಾಗಿದೆ. ನಿಜ, ನೀವು ಅನೇಕ ಕಡೆ ಬಾವಿಗಳನ್ನು ತೆಗೆಸಿದ್ದೀರಿ. ಅನೇಕ ಕಡೆ ರಸ್ತೆ ಮಾಡಿಸಿದ್ದೀರಿ ಮತ್ತು ಕೆರೆ ಕಟ್ಟೆಗಳಿಗೆ ಹಣವನ್ನು ಖರ್ಚುಮಾಡುತ್ತಾ ಇದ್ದೀರಿ. ಆದರೂ ನಮ್ಮ ಆ ಸಮಸ್ಯೆಯ ತೃಣವನ್ನೂ ನೀವು ಪೂರೈಕೆಮಾಡಿಲ್ಲ. ಅದರ ಬಗ್ಗೆ ತೀವ್ರಗಮನ ಕೊಡಬೇಕಾಗಿದೆ. ಆದ್ದರಿಂದ ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ, ಈ ಯೋಜನೆಗಳ ಒಂದು ಪೂರ್ಣ ಸ್ವರೂಪದ ಸಮಗ್ರ ಯೋಜನೆಯನ್ನು ರಚನೆಮಾಡಿ ಆ ಮೂಲಕ ಹೆಚ್ಚು ಹಣವನ್ನು ಖರ್ಚು ಮಾಡಬೇಕು, ಜನರಿಗೆ ಉಪಯೋಗಮಾಡಿಕೊಡಬೇಕು. ಈಗ ಕೊಡತಕ್ಕ ಹಣಸಾಲದು. ತಾವು ಹೇಳಬಹುದು 'ಬಡ್ಜೆಟ್ ತಮ್ಮ ಮುಂದೆ ಇದೆ, ಎಷ್ಟೆಷ್ಟು ಹಣವನ್ನು ಯಾವ್ಯಾವ ಬಾಬಿನಿಂದ ಖೋತಾಮಾಡಬಹುದು, ಎಲ್ಲದಕ್ಕೂ ಕಡಮೆ ಇದೆ, ಎಷ್ಟು ಬೇಕೋ ಅಷ್ಟೂ ಪೂರೈಕೆ ಆಗುತ್ತಾ ಇಲ್ಲ' ಎಂದು ಹೇಳಬಹುದು. ಮೂಲ ಮತ್ತು ಮೊದಲನೆಯ ಪ್ರಶ್ನೆ ಈಗಿರತಕ್ಕದ್ದು ಯಾವುದು ಎಂದರೆ ಗ್ರಾಮಾಭಿವೃದ್ಧಿ ಮತ್ತು ರೈತರ ಅಭಿವೃದ್ಧಿ. ಅದಕ್ಕೆ ಹೆಚ್ಚು ಗಮನ ಕೊಡಬೇಕು. ಗ್ರಾಮಾಭಿವೃದ್ಧಿಗೆ ಯಾವ ಯಾವ ಕೆಲಸಗಳನ್ನು ಕೈಕೊಳ್ಳಬೇಕೋ ಅವನ್ನು ಕೈಕೊಂಡು ಹಳ್ಳಿಯ ಜನರೊಡನೆ ನೇರವಾದ ಸಂಬಂಧ ಪಡೆಯುವುದರ ಮೂಲಕ ಹೊಸಯೋಜನೆಯನ್ನು ಇಟ್ಟು ಕಾರ್ಯಗತ ಮಾಡಬೇಕು. ಇಲ್ಲದೇ ಇದ್ದರೆ ಇದುವರೆಗೂ ಇರತಕ್ಕ ಯೋಜನೆಯನ್ನೇ ಇಟ್ಟುಕೊಂಡರೆ ಸಫಲವಾಗಲಾರದು. ಆ ರೀತಿ ಮುಂದೆ ಕೈಕೊಳ್ಳತಕ್ಕ ಯೋಜನೆಗಳುಕೂಡ ನಿಷ್ಫಲವಾಗಬಹುದು ಎಂದು ನನ್ನ ಎರಡು ಮಾತುಗಳನ್ನು ಹೇಳಿ ಮುಗಿಸುತ್ತೇನೆ.

ಶ್ರೀ ಕೆ. ಲಕ್ಕಪ್ಪನವರು (ಚೆನ್ನರಾಯಪಟ್ಟಣ).—ಶ್ರೀಮಾನ್ ಗೋಪಾಲಗೌಡರು ಮಾತನಾಡುತ್ತಾ ಗ್ರಾಮಾಭ್ಯುದಯ ಏನೂ ಆಗಿಲ್ಲ, ಇನ್ನೂ ಪ್ರಾರಂಭ ಸಹ ಆಗಿಲ್ಲ ಎಂದು ಹೇಳುತ್ತಾ ಇದ್ದುದನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ರಾಷ್ಟ್ರದ ಅಭಿವೃದ್ಧಿಗೆ ಹಾಕಿಕೊಂಡಿರತಕ್ಕ ಯೋಜನೆಗಳೆಲ್ಲೆಲ್ಲಾ ಬಹಳ ಮುಖ್ಯವಾದ ಯೋಜನೆ ಎಂದರೆ ಈ ಗ್ರಾಮಭ್ಯುದಯ ಯೋಜನೆ. ಇದರ ಮೂಲಕ ಇವೊತ್ತು ಹಳ್ಳಿಗಾಡುಗಳಲ್ಲಿರತಕ್ಕ ಜನರು ಕೆಲವು ಸೌಲಭ್ಯಗಳನ್ನು ಪಡೆದಿದ್ದಾರೆಯೇ ವಿನಾ ಬೇರೆ ಯಾವ ಯೋಜನೆಯಿಂದಲೂ ಪಡೆಯುತ್ತಾ ಇಲ್ಲ ಎಂಬುದನ್ನು ದೃಷ್ಟಾಂತಗಳಿಂದ ಹೇಳಬಹುದಾಗಿದೆ. ಈ ಗ್ರಾಮಾಭಿವೃದ್ಧಿ ಯೋಜನೆ ಬರುವುದಕ್ಕೆ ಮುನ್ನ ನಮ್ಮ ಸಂಸ್ಥಾನದಲ್ಲಿ ಎಷ್ಟು ಬಾವಿಗಳು ಇದ್ದವು, ಎಷ್ಟು ಹಳ್ಳಿಗಳಲ್ಲಿ ಗ್ರಾಮಪಾಕೀಜು ಕೆಲಸ ನಡೆಯುತ್ತಾ ಇತ್ತು, ಗ್ರಾಮಭಿವೃದ್ಧಿ ಸಮಿತಿಗಳು ನೇಮಕವಾದ ಮೇಲೆ ಇವೊತ್ತು ಎಷ್ಟು ಬಾವಿಗಳು ಆಗಿವೆ, ಎಷ್ಟು ರಸ್ತೆಗಳು ಆಗಿವೆ, ಎಷ್ಟು ಅಪ್ರೋಚ್ ರಸ್ತೆಗಳು ಆಗಿವೆ, ಎಷ್ಟು ಇಂಟರ್ ವಿಲೇಜ್ ಕಮ್ಯುನಿಕೇಷನ್ ರಸ್ತೆಗಳು ಆಗಿವೆ. ಎಷ್ಟು ಗ್ರಾಮ ಪಾಕೀಜು ಕೆಲಸಗಳು ಆಗಿವೆ ಎಂಬುದನ್ನು ನಮ್ಮ ಮಿತ್ರರು ಸರಿಯಾಗಿ ತಿಳಿದುಕೊಂಡಿದ್ದ ಪಕ್ಷದಲ್ಲಿ ಖಂಡಿತವಾಗಿಯೂ ಈಮಾತು ಆಡುತ್ತಾ ಇರಲಿಲ್ಲವೆಂದೂ ಹೇಳಬಲ್ಲೆ. ಮೊದಲು ಎಷ್ಟು ಬಾವಿಗಳು ಇದ್ದವೋ ಅದರ ಮೂರು, ನಾಲ್ಕರಷ್ಟು ಬಾವಿಗಳು ಇತ್ತೀಚೆಗೆ ಆಗಿವೆಯೆಂಬುದನ್ನು ಅಂಕಿ ಅಂಶಗಳ ಮೂಲಕ ಹೇಳಬಲ್ಲೆ. ನಾನಿರತಕ್ಕ ಹಾಸನ ಜಿಲ್ಲೆಯ ಒಂದು ಲೆಕ್ಕ ತೆಗೆದು

(ಶ್ರೀ ಕೆ. ಲಕ್ಕಪ್ಪನವರು)

ಕೊಂಡರೆ, ಹಿಂದೆ ಎಷ್ಟು ಬಾವಿಗಳು ಆಗಿದ್ದವೋ ಅದರ ನಾಲ್ಕರಷ್ಟು ಬಾವಿಗಳು ಈ ಯೋಜನೆ ಕಾರ್ಯ ರೂಪಕ್ಕೆ ಬಂದ ಮೇಲೆ ಆಗಿವೆ. ಅದೇ ರೀತಿ ರಸ್ತೆಗಳೂ ಹಿಂದೆ ಯಾವ ಕಾಲದಲ್ಲೂ ಆಗಿರಲಿಲ್ಲ, ಅಷ್ಟು ಕೆಲಸಕಾರ್ಯಗಳು ಆಗಿವೆ. ಇಪೊತ್ತು ಹಾಸನದ ಕೆಲವು ಹಳ್ಳಿಗಳನ್ನು ನೋಡಲಿ. ಯಾವ ಗ್ರಾಮಕ್ಕೆ ಬೇಕಾದರೂ ಸರಾಗವಾಗಿ ಕಾರು ತೆಗೆದುಕೊಂಡು ಹೋಗಬಹುದು. ಜನರು ಮುಂದೆ ಬಂದು ಕೆಲಸಮಾಡಿದ್ದಾರೆ. ಸರ್ಕಾರದವರು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿದರೂ ಆಗದೇ ಇದ್ದ ಕೆಲಸ ಕಾರ್ಯಗಳನ್ನು ಗ್ರಾಮಾಭಿವೃದ್ಧಿ ಮುಖೇನ ಅನೇಕ ಜನರು ಮುಂದೆ ಬಂದು ಮಾಡಿದ್ದಾರೆ. ನಮ್ಮ ಜಿಲ್ಲೆಯ ಒಂದೆರಡು ಉದಾರಣೆಗಳನ್ನು ಹೇಳುವುದಾದರೆ, ಸರ್ಕಾರದವರು 2 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದರೂ ಸಹ ಆಗುತ್ತಾ ಇರಲಿಲ್ಲ, ಅಷ್ಟು ಕೆಲಸವನ್ನು ಜನಗಳು ತಾವೇ ಮುಂದೆ ಬಂದು ಸ್ವಂತ ಕೆಲಸಮಾಡಿ ಕಾರ್ಯ ಸಾಧನೆಮಾಡಿಕೊಂಡಿದ್ದಾರೆ. ಅರಸೀಕೆರೆಯಿಂದ ಹಾರನಹಳ್ಳಿಗೆ 13 ಮೈಲಿ 2 ಫರ್ಲಾಂಗ್ ರಸ್ತೆಮಾಡಿಕೊಂಡಿದ್ದಾರೆ. ಇದಕ್ಕೆ ಎಷ್ಟು ಖರ್ಚಾಗಬಹುದು ಎಂದು ಡಿಪಾರ್ಟಮೆಂಟಿಗೆ ಬರೆದು ಎಸ್ಟಿಮೇಟು ತಯಾರು ಮಾಡಿಸಿದೆ. 1 ಲಕ್ಷ 25 ಸಾವಿರ ರೂಪಾಯಿ ಬೇಕು ಎಂದು ಎಂಜಿನಿಯರಿಂಗ್ ಡಿಪಾರ್ಟಮೆಂಟಿನವರು ಎಸ್ಟಿಮೇಟ್ ಕಳುಹಿಸಿದರು. 1 ಲಕ್ಷ 25 ಸಾವಿರ ರೂಪಾಯಿ ಬೇಕೆಂದು ಸರ್ಕಾರದವರನ್ನು ಕೇಳಿದರೆ ತಕ್ಷಣ ಕೊಡಲಿಲ್ಲ, ರಸ್ತೆ ಆಗಲಿಲ್ಲ. ಜನಗಳನ್ನು ಹುರಿದುಂಬಿಸಿ ಮಾಡಿದುದರ ಫಲವಾಗಿ ಅದೇರೀತಿ 50 ಸಾವಿರ ರೂಪಾಯಿಗಳನ್ನು ಸರ್ಕಾರದವರು ಖರ್ಚು ಮಾಡಬೇಕಾಗಿದ್ದ ಕೆಲಸವನ್ನು ಜನರೇ ನಿಂತು ಮಾಡಿ ಪೂರೈಸಿದರು. ಅರಕಲಗೂಡು—ಮಲ್ಲೀಪಟ್ಟಣದಿಂದ ಕೊಣನೂರಿಗೆ ಒಂದು ರಸ್ತೆ ಮಾಡಿದ್ದಾರೆ. ಅದು ಕಾಡುಪ್ರದೇಶ, ಬೇಚರಾಕುಪ್ರದೇಶ, ದಾರಿಯಲ್ಲಿ ಗಿಡ ಮರಗಳನ್ನು ಕಡಿದು 13 ಮೈಲಿ ರಸ್ತೆ ಜನಗಳೇ ಮಾಡಿದ್ದಾರೆ. ಇದೇ ರೀತಿ ನಮ್ಮ ಜಿಲ್ಲೆಯಂತೆಯೇ ಸಂಸ್ಥಾನಾದ್ಯಂತ ಅನೇಕ ಕಡೆ ಅಂಥ ಉಪಯುಕ್ತವಾದ ಕೆಲಸ ಕಾರ್ಯಗಳು ಬಹಳವಾಗಿ ನಡೆದಿವೆ.

ಈಹೊತ್ತು ಸಂಸ್ಥಾನದಲ್ಲಿ ಜನಗಳಿಗೆ ನೇರವಾಗಿ ಸರಕಾರ ಸಹಕಾರ ನೀಡುತ್ತಿದೆ ಯೆಂಬ ಅನುಭವ ಬಂದಿದೆಯೆಂದು ಹೇಳುವುದಾದರೆ, ಅದು ಮುಖ್ಯವಾಗಿ ಈ ಯೋಜನೆಯ ಮೂಲಕವಾಗಿ ಬಂದಿದೆಯೆಂದು ನಾನು ಘಂಟಾಘೋಷವಾಗಿ ಹೇಳಬಲ್ಲೆ. ಈ ಗ್ರಾಮಾಭ್ಯುದಯ ಯೋಜನೆಯಿಂದಲೇ ಸರ್ಕಾರ ಜನಗಳೊಡನೆ ನಿಕಟ ಸಂಬಂಧವನ್ನು ಕಲ್ಪಿಸಿಕೊಳ್ಳಲು ಅವಕಾಶವಾಗಿದೆ. ಹಿಂದೆ ಯಾರೂ ಕೂಡ ಅವರ ಮನೆಯ ಬಾಗಿಲಿಗೇ ಹೋಗಿ ನಿಮ್ಮ ಗ್ರಾಮವನ್ನು ಈ ರೀತಿ ಅಭಿವೃದ್ಧಿ ಪಡಿಸಬೇಕು, ನಿಮ್ಮ ಗ್ರಾಮ ಪಾಕೀಜನ್ನು ಈ ರೀತಿ ಉತ್ತಮ ಪಡಿಸಬೇಕೆಂದು ಇಷ್ಟೂ ಹೇಳುತ್ತಿರಲಿಲ್ಲ. ಇತ್ತೀಚೆಗೆ ಈ ಬೋರ್ಡಿನವರು ಗ್ರಾಮಾಂತರಗಳಿಗೆ ಹೋಗಿ ಹಳ್ಳಿಯ ಜನರಲ್ಲಿ ಪ್ರಚಾರನಡೆಸಿ ಅವರೊಡನೆ ಸಂಪರ್ಕವನ್ನಿಟ್ಟುಕೊಂಡು ಎಲ್ಲ ಕೆಲಸಗಳನ್ನೂ ಮಾಡಿಸುತ್ತಿದ್ದಾರೆ. ಜೊತೆಗೆ ರೂರಲ್ ಡೆವಲಪ್‌ಮೆಂಟ್ ಬೋರ್ಡಿನವರು, ಡಿಸ್ಟ್ರಿಕ್ಟ್ ಡೆವಲಪ್ ಮೆಂಟ್ ಬೋರ್ಡಿನವರು ಸೇರಿ ಎಲ್ಲಾ ಇಲಾಖೆಯ ಆಫೀಸರುಗಳನ್ನೂ ಸಭೆಗೆ ಬರಮಾಡಿಕೊಂಡು ಅವರವರು ತಮ್ಮ ತಮ್ಮ ಇಲಾಖೆಗೆ ಸಂಬಂಧಪಟ್ಟಂತೆ ಏನೇನು ಕೆಲಸಮಾಡಿದ್ದಾರೆಂದು ಚರ್ಚೆಮಾಡಿ ಅನೇಕ ಸಂಧರ್ಭಗಳಲ್ಲಿ ಸಾಧಾರಣವಾಗಿ ಆಗದಿರುವಂಥ ಕೆಲಸಗಳನ್ನು ಅವರ ಮೇಲೆ ಒತ್ತಾಯಹಾಕಿ ಮಾಡಿಸುತ್ತಿದ್ದಾರೆ. ಉದಾಹರಣೆಗೆ ನಮ್ಮ ಹಾಸನ ಡಿಸ್ಟ್ರಿಕ್ಟಿನಲ್ಲಿ ಆಗಿರತಕ್ಕ ಮೈನರ್‌ಟ್ಯಾಂಕ್ ರೆಸ್ಟೊರೇಷನ್ ಕೆಲಸಗಳೆಲ್ಲಾ ಈ ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕಮಿಟಿಗಳು ಇಲ್ಲದಿದ್ದರೆ ಖಂಡಿತವಾಗಿಯೂ ಆಗುತ್ತಿರಲಿಲ್ಲವೆಂದು ನಾನು ಹೇಳಬಲ್ಲೆ. ನಾವುಗಳು ಖುದ್ದಾಗಿ ಎಂಜಿನಿಯರಿಂಗ್ ಇಲಾಖೆಯವರನ್ನು ಕರೆಸಿ ಅವರಿಂದ ರಿಪೋರ್ಟ್ ತರಿಸಿಕೊಂಡು ಒತ್ತಾಯಹಾಕಿ

ಮಾಡಿಸಿದ್ದೇವೆ. ಹೀಗೆಯೇ ಸರ್ಕಾರದ ಮೇಲೂ ಒತ್ತಾಯಹಾಕಿ ಅವರಿಂದಲೂ ಹೆಚ್ಚು ಕೆಲಸ ಕಾರ್ಯಗಳನ್ನು ಸಾಧನೆಮಾಡುವುದಕ್ಕೆ ಈ ರೂರಲ್ ಡೆವಲಪ್‌ಮೆಂಟ್ ಯೋಜನೆಯ ಪ್ರಕಾರ, ಅನುಕೂಲತೆಗಳಿವೆ. ಈ ಸ್ಕೀಮನ್ನು ನಮ್ಮ ಸಂಸ್ಥಾನದಲ್ಲಿ ಜಾರಿಗೆ ತಂದಮೇಲೆ ಅನೇಕ ಉಪಯುಕ್ತವಾದ ಕೆಲಸ ಕಾರ್ಯಗಳು ನಡೆಯಲು ಸಾಧ್ಯವಾಗಿದೆ ಎಂಬುದರಲ್ಲಿ ಸಂಶಯವಿಲ್ಲ.

ಈಗ ಅಖಿಲ ಭಾರತದ ಪ್ಲಾನಿಂಗ್ ಕಮಿಷನ್ನಿನವರೂ ಸಹ, ಅವರೇನು 5 ವರ್ಷದ ಒಂದು ಯೋಜನೆಯನ್ನು ಮಾಡಿದ್ದಾರೋ ಆ ಯೋಜನೆಯಲ್ಲೂ ಸಹ, ನಮ್ಮದೇಶವನ್ನು ಅಭಿವೃದ್ಧಿಗೆ ತರಬೇಕಾದರೆ ನಮ್ಮಲ್ಲಿರುವಂತೆಯೇ ರೂರಲ್ ಡೆವಲಪ್‌ಮೆಂಟ್ ಸ್ಕೀಮನ್ನೇ ಅನುಸರಿಸಬೇಕೆಂದು ಹೇಳಿದ್ದಾರೆ. ಅದೇ ರೀತಿಯಾಗಿ ಸೂಚನೆಯನ್ನೂ ಕೊಟ್ಟಿದ್ದಾರೆ. ನಮ್ಮ ಸರ್ಕಾರದವರಿಗೂ ಸಹ ಈ ರೂರಲ್‌ಡೆವಲಪ್‌ಮೆಂಟ್ ಸ್ಕೀಮನ್ನು ಕೈಕೊಳ್ಳಬೇಕೆಂಬುದು ಆಶಯವಾಗಿದೆ. ಮುಂದೆ ಡಿಸ್ಟ್ರಿಕ್ಟ್ ಬೋರ್ಡುಗಳು ಪುನರ್ರಚಿತವಾದ ಮೇಲೆ ಈ ಕೆಲಸವನ್ನು ಜಿಲ್ಲಾ ಬೋರ್ಡಿಗೆ ವಹಿಸಿ ಆ ಮೂಲಕ ಕೆಲಸ ಮಾಡಬೇಕೆಂದು ಸರ್ಕಾರದವರು ಯೋಚನೆ ಮಾಡಿದ್ದಾರೆ. ಆದ್ದರಿಂದ ಈ ಹೊತ್ತು ರೈತರಿಗೆ ನೇರವಾಗಿ ಏನಾದರೂ ಉಪಯೋಗವಾಗಬೇಕಾದರೆ ಅದು ಈ ರೂರಲ್‌ಡೆವಲಪ್‌ಮೆಂಟ್ ಸ್ಕೀಮಿನಿಂದ ಮಾತ್ರ ಆಗಬೇಕೇ ಹೊರತು ಇನ್ನಾವುದರಿಂದಲೂ ಆಗುವುದಿಲ್ಲವೆಂದು ಹೇಳಿ, ಸಂಸ್ಥಾನದಲ್ಲಿ ಇದುವರೆಗೆ ಇದರಿಂದ ಅನೇಕ ಉಪಯುಕ್ತ ಕೆಲಸ ಕಾರ್ಯಗಳನ್ನು ಸಾಧಿಸಲು ಸಾಧ್ಯವಾಗಿದೆಯೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

*ಶ್ರೀ ಎಸ್. ಸಿದ್ದಪ್ಪನವರು (ಮಾಗಡಿ).—ಅಧ್ಯಕ್ಷರೇ, ಇದುವರೆಗೂ ಶ್ರೀಮಾನ್ ಹುಚ್ಚೇಗೌಡರು ತಂದಂಥ ಕತ್ತರಿ ನಿರ್ಣಯದ ವಿಚಾರವಾಗಿ ನಮ್ಮ ಸ್ನೇಹಿತರಾದ ಶ್ರೀಮಾನ್ ಗೋಪಾಲಗೌಡರು, ತಮ್ಮ ಕಡೆಯಿಂದ ಬರುವ ಯಾವ ವಾದವನ್ನಾದರೂ ಪುಷ್ಟೀಕರಿಸಬೇಕಾದದ್ದು ತಮ್ಮ ಕರ್ತವ್ಯವೆಂದು ಮನವುಳ್ಳವರಾಗಿರುವುದರಿಂದ, ಈ ವಿಷಯದಲ್ಲಿಯೂ ಈ ರೂರಲ್ ಡೆವಲಪ್‌ಮೆಂಟು ಯೋಜನೆಯ ಉದ್ದೇಶವೇನು ಎಂಬದನ್ನು ಮನಗಾಣದೆ, ಅದರಿಂದ ಹೆಚ್ಚಿನ ಫಲ ದೊರೆತಿರುವುದನ್ನುಗಮನದಲ್ಲಿಟ್ಟುಕೊಳ್ಳದೆ ತಮ್ಮ ಉತ್ತರವನ್ನು ಮುಂದುವರಿಸಿದ್ದಾರೆ. ಆದರೂ ತಾಲ್ಲೂಕುಗಳಲ್ಲಿ ರೂರಲ್‌ಡೆವಲಪ್‌ಮೆಂಟ್ ಯೋಜನೆಯಿಂದ ಆಗಿರತಕ್ಕ ಪ್ರಯೋಜನಗಳನ್ನು ಅವರು ಚೆನ್ನಾಗಿ ತಿಳಿದುಕೊಳ್ಳದೆ ಇಲ್ಲವೆಂದು ಭಾವಿಸುತ್ತೇನೆ. ನನ್ನ ಮಾನ್ಯಸ್ನೇಹಿತರೂ ಮತ್ತು ಹಾಸನಜಿಲ್ಲೆಯಲ್ಲಿ ಡೆವಲಪ್‌ಮೆಂಟ್ ಕಮಿಟಿಯ ಅಧ್ಯಕ್ಷರೂ ಆದ ಶ್ರೀಮಾನ್ ಲಕ್ಕಪ್ಪಗೌಡರು ಇದರ ವಿಷಯವನ್ನಾಗಲೇ ಬಹಳ ವಿವರವಾಗಿ ಹೇಳಿದ್ದಾರೆ. ನಾನು ಅವುಗಳನ್ನೇ ಮತ್ತೆ ಹೇಳಲು ಇಷ್ಟಪಡುವುದಿಲ್ಲ. ಇಷ್ಟು ಹೇಳಿದರೆ ಸಾಕಾಗಿದೆ: ಮೈಸೂರು ಸಂಸ್ಥಾನದಲ್ಲಿ ಈ ರೂರಲ್ ಡೆವಲಪ್‌ಮೆಂಟ್ ಯೋಜನೆ ಜಾರಿಗೆ ಬಂದಮೇಲೆ ಗ್ರಾಮಾಂತರಗಳಿಂದ ಗ್ರಾಮಾಂತರಗಳಿಗೆ ಹೋಗುವ ಎಷ್ಟೋ ರಸ್ತೆಗಳು ಸರ್ಕಾರದ ಹಣ ಒಂದು ಕಾಸು ಖರ್ಚಿಲ್ಲದೆ ಆಗಿವೆ; ಸಾಧಾರಣವಾಗಿ ಈಗಿರತಕ್ಕ ಹೊಸ ಬಸ್ ಸರ್ವಿಸ್‌ಗಳು ಕೂಡ ಆ ರೈತರು ಮಾಡಿದ ರಸ್ತೆಗಳಲ್ಲಿಯೇ ಹೋಗುತ್ತಿವೆಯೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಎರಡನೆಯದಾಗಿ, ಮೈಸೂರು ಸಂಸ್ಥಾನದಲ್ಲಿ ಈ ರೂರಲ್ ಡೆವಲಪ್‌ಮೆಂಟ್ ಸ್ಕೀಮಿನಿಂದ ಅನೇಕ ವರ್ಷಗಳಿಂದಲೂ ಆಗದೆ ಇದ್ದಂಥ ಬಾವಿಯ ಕೆಲಸಗಳು ನಡೆದಿವೆ. ಕಾರಣವೇನೆಂದರೆ, ಪ್ರತಿತಿಂಗಳಲ್ಲೂ ತಾಲ್ಲೂಕು ಡೆವಲಪ್‌ಮೆಂಟ್ ಕಮಿಟಿಯು ಸೇರಿದಾಗ ವೆಟರಿನರಿ, ವ್ಯವಸಾಯ, ಇಂಜಿನಿಯರಿಂಗ್, ರೆವಿನ್ಯೂ, ಫಾರೆಸ್ಟ್ ಮುಂತಾಗಿ ಎಲ್ಲಾ ಇಲಾಖೆಗಳೂ ಕಲೆತು ಎಲ್ಲರೂ ಒಂದು ಕಡೆ ಸೇರಿ ಆಯಾ ಬಾಬಿನವರು ಆಯಾ ತಾಲ್ಲೂಕಿನಲ್ಲಿ ಏನೇನು ಕೆಲಸ ಕಾರ್ಯಗಳನ್ನು ಮಾಡಿದ್ದಾರೆಂಬ ವರದಿಯನ್ನು ತೆಗೆದುಕೊಂಡು, ಅದರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದರಿಂದ ತಾಲ್ಲೂಕಾಮಳೆ ಎಷ್ಟು ಪ್ರಯೋಜನ ದೊರೆತಿದೆ

(ಶ್ರೀ ಎಸ್. ಸಿದ್ದಪ್ಪನವರು)

ಯೆಂಬುದು ಎಲ್ಲರಿಗೂ ಗೊತ್ತಿರತಕ್ಕ ವಿಷಯ. ಅಂಥದರಲ್ಲಿ ಬಾವಿಗಳ ಕೊರತೆಯ ವಿಚಾರವನ್ನು ಶ್ರೀಮಾನ್ ಹುಚ್ಚೇಗೌಡರು ಹೇಳಿದರು. ಅವರ ಡಿಸ್ಟ್ರಿಕ್ಟಿನಲ್ಲಿ ಅವರೇ ಡಿಸ್ಟ್ರಿಕ್ಟ್ ಬೋರ್ಡ್ ಅಧ್ಯಕ್ಷರಾಗಿದ್ದಾರೆ. ಅವರು ಅನೇಕ ಹಳ್ಳಿಗಳಲ್ಲಿ ಸಂಚಾರಮಾಡಿದ್ದಾರೆಂದು ನನಗೆ ಗೊತ್ತಿದೆ. ಅವರ ಅಜುಬಾಜು ತಾಲ್ಲೂಕಾದ ನಮ್ಮ ತಾಲ್ಲೂಕಿನಲ್ಲೂ ರೈತರ ಉದ್ಧಾರಕ್ಕಾಗಿ ಎಷ್ಟೊಂದು ಬಾವಿಗಳನ್ನು ಕೊಟ್ಟಿದೆಯೆಂಬುದು ಅವರಿಗೆ ತಿಳಿಯದೆ ಇಲ್ಲ. ನೂರಾರು ವರ್ಷಗಳಿಂದ ರೈತರಿಗೆ ದೊರೆಯದಿದ್ದ ಸೌಲಭ್ಯ ಈಗ ದೊರೆತಂತಾಗಿದೆ ಯೆಂದರೆ ಅತಿಶಯೋಕ್ತಿಯಲ್ಲ. ಅದರಲ್ಲೂ ನಮ್ಮ ಹಿಂದುಳಿದ ಸಂಗಡದವರಿಗೆ ಸರ್ಕಾರದವರು ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ದೊರಕಿಸಿ ಕೊಟ್ಟಿರುವ ಸಹಾಯ ಹಿಂದೆ ಎಂದೂ ದೊರೆತಿಲ್ಲ. ಪ್ರತಿಯೊಂದು ಕಡೆಯಲ್ಲೂ 50-50 ಮನೆಗಳನು ಕಟ್ಟಿಸುವುದಕ್ಕೆ ಸರಿಯಾಗಿ ಯೋಜನೆಯನ್ನು ಹಾಕಿ ಸರ್ಕಾರದವರು ಕಟ್ಟಿಸಿ ಕೊಟ್ಟಿರುವ ವಿಷಯವನ್ನು ತಿಳಿಸುವುದಕ್ಕೆ ಅಂಕಿ ಅಂಶಗಳನ್ನು ಕೂಡ ಮಾನ್ಯ ಸದಸ್ಯರಿಗೆ ತೋರಿಸಿ ಕೊಡಬಲ್ಲೆವು. ಇಂಥ ಒಂದು ಸೌಲಭ್ಯವನ್ನು ನಮ್ಮ ರೈತಬಾಂಧವರು ಸರ್ವೇಸಾಧಾರಣವಾಗಿ ನಿರೀಕ್ಷಣೆಮಾಡುತ್ತಿರುವಾಗ, ಈ ಸ್ಕೀಮಿನಿಂದ ಏನೂ ಪ್ರಯೋಜನ ಸಿಕ್ಕಲಿಲ್ಲವೆಂದು ಹೇಳಿದರೆ, ಅದು ಕೇವಲ ಸಾಂಪ್ರದಾಯಕಾಗಿ ಹೇಳಿದ ಮಾತುಗಳೇ ಸರಿ.

ಆಮೇಲೆ ಡೆವಲಪ್‌ಮೆಂಟ್ ಇಲಾಖೆಯ ವ್ಯಾನ್‌ಗಳು ಜಿಲ್ಲಾಧ್ಯಕ್ಷರ ವಶದಲ್ಲಿವೆ, ಅವು ಅನುಪಯೋಗಕರವಾದುವು ಎಂದು ಹೇಳಿದರು. ಅದನ್ನು ನಾನು ಒಪ್ಪಲಾರೆ. ಅವುಗಳಿಂದ ಬಹಳ ಉಪಯೋಗವಾಗಿದೆ. ಲಾವಣಿಕಾರರಿಂದ ಲಾವಣಿ ಹಾಡಿಸಿ, ಉಪಯುಕ್ತವಾದ ಚಿತ್ರಗಳನ್ನು, ರೈತರಿಗೆ ಪ್ರದರ್ಶಿಸಿ ಎಲ್ಲಾ ಹಳ್ಳಿಗಳಲ್ಲೂ ತಾಲ್ಲೂಕು ಡೆವಲಪ್‌ಮೆಂಟ್ ಕಮಿಟಿಯವರು ಗ್ರಾಮಾಂತರಗಳಲ್ಲಿ ಸೇರಿ ಅವರು ಚರ್ಚೆಮಾಡುವ ವಿಷಯಗಳನ್ನು ಜನರಿಗೆ ತಿಳಿಯಪಡಿಸಿ, ಹೀಗೆ ಮಾಡಿರುವುದನ್ನೆಲ್ಲ ರೈತ ಜನಾಂಗದವರು ನೋಡಿದ್ದಾರೆ. ಅದರ ಪ್ರಯೋಜನವನ್ನು ಬಿಡಿಸಿ ಹೇಳಬೇಕಾಗಿಲ್ಲ. ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರುಗಳಲ್ಲಿ ಮೀಟಿಂಗ್ ನಡೆಯುವ ಕಾಲದಲ್ಲಿ ಲಾವಣಿಕಾರರು ಅದರ ಅನುಕೂಲವನ್ನು ಜನರಿಗೆ ತಿಳಿಯಪಡಿಸಿರುವುದಲ್ಲದೆ ದೇಶಾಭ್ಯುದಯ ಮಾಡುವ ವ್ಯವಸ್ಥೆಯನ್ನು ಕೂಡ ತಿಳಿಸಿದ್ದಾರೆ. ಆದ್ದರಿಂದ ಸರ್ಕಾರಿ ಅಧಿಕಾರಿಗಳು ಈ ವ್ಯಾನ್‌ಗಳನ್ನು ಅನುಪಯೋಗ ಮಾಡಿದ್ದಾರೆಂದು ಹೇಳುವುದು ಸರಿಯಲ್ಲ.

ಆದ್ದರಿಂದ ಮೈಸೂರು ಸಂಸ್ಥಾನದಲ್ಲಿ ರೂರಲ್‌ಡೆವಲಪ್‌ಮೆಂಟ್ ಸ್ಕೀಮಿನಿಂದ ಹೆಚ್ಚಿನ ಪ್ರಯೋಜನ ಲಭಿಸಿದೆಯೆನ್ನುವುದರಲ್ಲಿ ಸಂದೇಹವಿಲ್ಲ. ಅದಕ್ಕೆ ಹೆಚ್ಚಾಗಿ ಗ್ರಾಂಟನ್ನು ಕೊಡುವುದರ ಮೂಲಕ ದೇಶದ ಉನ್ನತಿಗೆ ನಾವು ತಳಹದಿ ಹಾಕುತ್ತಿದ್ದೇನೆಂದರೆ ತಪ್ಪಾಗಲಾರದು. ಇನ್ನು ಮೇಲೆ ಹೊಸದಾಗಿ ರಚಿತವಾದ ಬೋರ್ಡುಗಳು ಈ ಡೆವಲಪ್‌ಮೆಂಟ್ ಕಮಿಟಿಗಳ ಕರ್ತವ್ಯಗಳನ್ನು ಅಳವಡಿಸಿಕೊಂಡು ವ್ಯವಸ್ಥಿತವಾಗುವ ಸಂದರ್ಭ ಒದಗಿದೆ. ಅಲ್ಲಿಯವರೆಗೂ ಈ ರೂರಲ್ ಡೆವಲಪ್‌ಮೆಂಟ್ ಬೋರ್ಡುಗಳು ಸರಿಯಾಗಿ ನಡೆಯುವುದಕ್ಕೆ ದ್ರವ್ಯ ಸಹಾಯವನ್ನು ಹೆಚ್ಚಾಗಿ ಕೊಡಬೇಕೆಂದು ಹೇಳುತ್ತಾ, ಇದರಿಂದ ಮಹಾಜನರಿಗೆ ಹೆಚ್ಚಿನ ಪ್ರಯೋಜನ ಲಭಿಸುತ್ತಿದೆಯೆಂದೂ, ಯಾವತಪ್ಪೂ ನಡೆದಿಲ್ಲವೆಂದೂ ಈ ಸಭೆಯಲ್ಲಿ ತಿಳಿಸಿ, ನನಗೆ ಈ ಸಂದರ್ಭದಲ್ಲಿ ಈ ನಾಲ್ಕಾರು ವಿಷಯಗಳನ್ನು ತಿಳಿಸಲು ಅವಕಾಶವನ್ನು ಕೊಟ್ಟ ಅಧ್ಯಕ್ಷರಿಗೂ, ಮಾನ್ಯ ಸದಸ್ಯರಿಗೂ ವಂದನೆಗಳನ್ನರ್ಪಿಸುತ್ತೇನೆ.

ಶ್ರೀ ಮುಲ್ಕಾ ಗೋವಿಂದರೆಡ್ಡಿಯವರು (ಚಿತ್ರದುರ್ಗ).—ನನ್ನದೊಂದು ಸಲಹೆಯಿದೆ. ಅದೇನೆಂದರೆ, ಡೆವಲಪ್‌ಮೆಂಟ್ ಸಮಿತಿಗಳ ಚೇರ್ಮನ್ ಅಲ್ಲದೇ ಇರುವವರು ಈ ವಿಷಯದಲ್ಲಿ ಮಾತನಾಡಿದರೆ ಅನುಕೂಲವೆಂದು ನನ್ನ ಅಭಿಪ್ರಾಯ.

ಶ್ರೀ ಕೆ. ವಿ. ಶಂಕರಗೌಡರು.—ಡೆವೆಲಪ್‌ಮೆಂಟ್ ಸಮಿತಿಯ ಚೇರ್ಮನ್ ಆಗದೇ ಯಿರು

ವವರು ಮಾತನಾಡಿದರೆ ಒಳ್ಳೆಯದೆಂದು ಹೇಳಿದರು. ಆದರೆ ಮಾನ್ಯ ಸದಸ್ಯರೊಬ್ಬರು ಡೆವಲಪ್‌ಮೆಂಟ್‌ ಕಮಿಟಿಯ ಅಧ್ಯಕ್ಷರೊಬ್ಬರು ತಮ್ಮ ಸ್ವಂತ ಉಪಯೋಗಕ್ಕೆ ವ್ಯಾನ್ ಇಟ್ಟುಕೊಂಡಿದ್ದರು, ಎಂದು ಹೇಳಿದರು. ಅದಕ್ಕೆ ಉತ್ತರ ಕೊಡಬೇಕಾದರೆ ಚೇರ್ಮನ್ ಆಗಿರುವವರು ಮಾತನಾಡಲು ಅವಕಾಶ ಕೊಟ್ಟರೆ ಒಳ್ಳೆಯದು.

Mr. SPEAKER.—That is why I gave chances first to the Presidents of District Boards and then to the Chairmen of the District and Taluk Development Committees to speek.

ಶ್ರೀ ಸಿ. ಟಿ. ಹನುಮಂತಯ್ಯನವರು (ಪಾವಗಡ-ಅನುಸೂಚಿತ ಜಾತಿಗಳು).—ಸ್ವಾಮಿ, ಮೈಸೂರು ಸಂಸ್ಥಾನದಲ್ಲಿ ಗ್ರಾಮಾಭಿವೃದ್ಧಿ ಸಮಿತಿಗಳನ್ನು ಜಾರಿಗೆ ತಂದ ಕೂಡಲೇ ಸಂಸ್ಥಾನದಲ್ಲಿ ಅವರು ಮಾಡಿರತಕ್ಕ ಕೆಲಸಗಳು ದೇಶದಲ್ಲಿ ಎಲ್ಲರ ಮೆಚ್ಚಿಗೆಯನ್ನೂ ಪಡೆದಿವೆ. ಹಿಂದೆ ಯಾವ ಸರ್ಕಾರದವರೂ ಮಾಡದೇ ಇದ್ದಂಥಾ ಒಂದು ಏರ್ಪಾಡನ್ನು ನಮ್ಮ ಸರ್ಕಾರದವರು ಕೈಕೊಂಡು ಎಷ್ಟೆಷ್ಟೋ ಕೆಲಸಮಾಡಿದ್ದಾರೆ. ಅವರು ಎಷ್ಟು ಕೆಲಸಗಳನ್ನು ಮಾಡಿದ್ದಾರೆಂಬುದನ್ನು ಹೇಳುವುದಕ್ಕೇ ಸಾಧ್ಯವಿಲ್ಲ. ದೇಶದಲ್ಲಿ, ಅದರಲ್ಲಿಯೂ ಗ್ರಾಮಾಂತರಗಳಲ್ಲಿ ಕುಡಿಯುವ ನೀರಿನ ಬಾವಿಗಳಿರಲಿಲ್ಲ; ಕುಡಿಯಲು ನೀರಿರಲಿಲ್ಲ. ಹಿಂದಿನ ಕಾಲದಲ್ಲಿ ಬಾವಿಗಳು ಮಂಜೂರಾದರೂ ಆ ಕಾಗದಗಳು ಎಲ್ಲಿ ಹೋಗುತ್ತಿದ್ದವೋ ಗೊತ್ತಾಗುತ್ತಿರಲಿಲ್ಲ. ಗ್ರಾಮಾಭಿವೃದ್ಧಿ ಸಮಿತಿಗಳು ಬಂದ ಮೇಲೆ ಎಷ್ಟೋ ಕುಡಿಯುವ ನೀರಿನ ಬಾವಿಗಳನ್ನು ಮಾಡಿಸಿದರು. ಪ್ರತಿ ಗ್ರಾಮದಲ್ಲಿಯೂ ಹೋಗಿ ರೈತರ ಯೋಗಕ್ಷೇಮವನ್ನು ತಿಳಿದುಕೊಳ್ಳುವುದಕ್ಕೆ ಸಮಿತಿಯವರೂ ಅಧಿಕಾರಿಗಳೂ ಎಷ್ಟು ಪ್ರಯತ್ನಮಾಡಿರುತ್ತಾರೆಂಬುದನ್ನು ಹೇಳುವುದಕ್ಕಾಗುವುದಿಲ್ಲ, ಇಷ್ಟು ಕೆಲಸಮಾಡಿದರೂ ಗಣನೆಗೆ ತೆಗೆದುಕೊಳ್ಳದಿರುವುದು ನ್ಯಾಯವಲ್ಲ. ಇವರು ಮಾಡಿರುವ ಕೆಲಸದಲ್ಲಿ ಸ್ವಲ್ಪ ಲೋಪವಿರಬಹುದು. ನಡೆಯುವವನು ಎಡವದೇ ಇರುವುದಿಲ್ಲ. ಮುಗ್ಗರಿಸಬಹುದು. ಹಾಗೆ ಎಷ್ಟೆಷ್ಟು ಗ್ರಾಮಗಳಲ್ಲಿ ಎಷ್ಟೆಷ್ಟು ಕೆಲಸಮಾಡಿದ್ದಾರೆಂಬುದು ಸಮಿತಿಗಳಲ್ಲಿ ಕೆಲಸಮಾಡಿರುವವರಿಗೆ ಗೊತ್ತು. ನಾನು ಕೂಡ ಚೇರ್ಮನ್ ಮತ್ತು ಅಧಿಕಾರಿಗಳ ಹಿಂದೆ ಹೋಗಿ ನೋಡಿದ್ದೇನೆ. ಎಷ್ಟೋ ಕೆರೆಗಳ ಏರಿಗಳು ಮತ್ತು ರಸ್ತೆಗಳನ್ನು ಸರಿಮಾಡಿಸಿದ್ದಾರೆ. ಎಷ್ಟೋ ಊರುಗಳಲ್ಲಿ ರಸ್ತೆಗಳಲ್ಲಿ ಗಿಡಗಳು ಬೆಳೆದು ಕೊಂಡು ತಿರುಗಾಡುವುದಕ್ಕೇ ಆಗುತ್ತಿರಲಿಲ್ಲ, ಅದನ್ನೆಲ್ಲಾ ಸರಿಮಾಡಿಸಿದ್ದಾರೆ. ಹಿಂದೆ ಸೋಮವಾರ ಬಿಟ್ಟಿ ಎಂದು ನಡೆಸುತ್ತಿದ್ದರು, ಹಾಗೆ ನಡೆಸಿ ಜನರಲ್ಲಿ ಸಹಕಾರ ಮನೋಭಾವವನ್ನು ಬೆಳೆಸಿ ದೇಶದ ಪ್ರಜೆಗಳಿಗೆ ಎಷ್ಟೋ ಅನುಕೂಲಗಳನ್ನು ಮಾಡಿದ್ದಾರೆ. ಮಲ್ಟಿ ಪರ್‌ಪಸ್ ಕೋ-ಆಪರೇಟಿವ್ ಸೊಸೈಟಿಗಳೆಂದು ಏರ್ಪಾಡುಮಾಡಿ ಇದನ್ನು ಗ್ರಾಮಾಭಿವೃದ್ಧಿ ಕಾರ್ಯದಲ್ಲಿ ಸೇರಿಸಿ ಇದರಿಂದ ರೈತರಿಗೆ ಬೇಕಾದ ಗುಳಗಳು, ನೇಗಿಲುಗಳು ಮುಂತಾದ ವ್ಯವಸಾಯಕ್ಕೆ ಬೇಕಾದ ಸಾಮಾನುಗಳನ್ನೊದಗಿಸಿರುವುದನ್ನು ನಾವು ನಮ್ಮ ಕಣ್ಣಿಂದಲೇ ಕಂಡಿಲ್ಲವೆ? ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿದ್ದರೂ ಕೂಡ ಈ ಸಮಿತಿಗಳಿಲ್ಲದಿದ್ದರೆ ಗ್ರಾಮಾಭಿವೃದ್ಧಿ ಕೆಲಸ ಸರಿಯಾಗಿ ನಡೆಯುತ್ತಿರಲಿಲ್ಲ. ಇಂಥದರಲ್ಲಿ ನಮ್ಮ ಸರ್ಕಾರದವರು ರೈತರಿಂದಲೇ ಕೆಲಸವಾಗಬೇಕು, ಅವರ ಸೋಮಾರಿತನ ಹೋಗಲಾಡಿಸಬೇಕು ಎಂಬ ಉದ್ದೇಶದಿಂದ ಕೆಲಸ ಮಾಡಿಸಿದ್ದಾರೆ. ನಮ್ಮ ಸಂಸ್ಥಾನದ 17 ಸಾವಿರ ಹಳ್ಳಿಯವರೂ ಕೂಡ ತಮ್ಮ ಹಳ್ಳಿಗಳ ಅಭಿವೃದ್ಧಿಗಾಗಿ ಪ್ರಯತ್ನಮಾಡುವಂತೆ ಮಾಡಿದ್ದಾರೆ. ಬಾವಿಗಳಿಗಾಗಿ ಜನ ಮುಂದೆ ಬರುತ್ತಿರಲಿಲ್ಲ, ಸ್ಕೂಲು ಕಟ್ಟಡಗಳೇ ಇರಲಿಲ್ಲ. ಈಗ ಎಷ್ಟೋ ಕಡೆ ಬಾವಿಗಳಾಗಿವೆ, ರಸ್ತೆಗಳಾಗಿವೆ, ಸ್ಕೂಲುಗಳನ್ನು ಮಾಡಿಸಿದ್ದಾರೆ. ಹಳ್ಳಿಯ ಜನರಿಗೆ ಗೊಬ್ಬರವನ್ನು ಮಾಡುವ ವಿಧಾನ ಕೂಡ ಗೊತ್ತಿರಲಿಲ್ಲ. ಹಿಂದೆ ಯಾವ ರೀತಿ ಗೊಬ್ಬರ ದುರುಪಯೋಗವಾಗುತ್ತಿತ್ತು, ಯಾವ ರೀತಿ ಉಪಯೋಗಿಸಿದರೆ ಸರಿಯಾಗುತ್ತದೆ ಎಂಬುದನ್ನು ಖುದ್ದು ಹಳ್ಳಿ ಹಳ್ಳಿಗೆ ಹೋಗಿ ತಿಳಿಸಿದ್ದಾರೆ. ಗ್ರಾಮಾಭಿವೃದ್ಧಿ ಇಲಾಖೆಯವರು

(ಶ್ರೀ ಸಿ. ಟಿ. ಹನುಮಂತಯ್ಯನವರು)
ಹಳ್ಳಿಗಳಿಗೆ ಹೋಗಿ ಖುದ್ದಾಗಿ ನಿಂತು ಗೊಬ್ಬರದ ಗುಂಡಿಗಳನ್ನು ತೆಗೆಸಿ ಹೇಗೆಮಾಡಬೇಕೆಂಬುದನ್ನು ತೋರಿಸಿ ಕೊಟ್ಟಿದ್ದಾರೆ. ಬಾವಿಗಳ ಸುತ್ತಲೂ ಗಲೀಜಿದ್ದರೆ ಅದನ್ನೆಲ್ಲಾ ತೆಗೆಸಿದ್ದಾರೆ. ಗ್ರಾಮಾಭಿವೃದ್ಧಿ ಯೋಜನೆ ಬಂದ ಮೇಲೆ ಎಷ್ಟೋ ಹಳ್ಳಿಗಳನ್ನು ನಿರ್ಮಲವಾಗಿ ಮಾಡಿದ್ದಾರೆ; ಇನ್ನೂ ಹೆಚ್ಚು ಕೆಲಸಗಳನ್ನು ಮಾಡಿದ್ದಾರೆ. ದೇಶ ಹೇಗಿರಬೇಕು, ದೇಶದ ಜನಹೇಗಿರಬೇಕು, ಅವರು ಹೇಗೆ ವಿದ್ಯಾವಂತರಾಗಬೇಕು, ಮುಂದೆಬರಬೇಕು, ದೇಶ ಮುಂದೆ ಬರಬೇಕು, ಹೀಗೆ ಮುಂದೆ ಬರಬೇಕಾದರೆ ಏನು ಮಾಡಬೇಕು ಎಂಬುದನ್ನೆಲ್ಲಾ ಯೋಚನೆಮಾಡಿ ಯೋಜನೆ ಹಾಕಿಕೊಂಡು ಕೆಲಸಮಾಡಿದರು. ಇಂಥಾ ಇಲಾಖೆ ನಮ್ಮದೇಶದಲ್ಲಿ ಇನ್ನೂ ಇರಬೇಕು, ಇನ್ನೂ ಕೆಲವಾರು ದಿವಸಗಳಿದ್ದಿದ್ದರೆ ಚೆನ್ನಾಗಿತ್ತು. ಮುಂದೆ ತೆಗೆಯಬೇಕೆಂದು ಮಾಡಿದ್ದಾರೆ. ಇದ್ದರೆ ಇದರಿಂದ ಬಹಳ ಪ್ರಯೋಜನವಾಗುತ್ತದೆ. ಹಿಂದೆ ಎಲ್ಲಿಯೂ ಹರಿಜನರಿಗೆ ಯಾವ ಸಹಾಯವನ್ನೂ ಮಾಡಿರಲಿಲ್ಲ. ಈ ಸರ್ಕಾರದವರು ಅವರಿಗೆ ಮನೆಗಳನ್ನು ಕಟ್ಟಿಕೊಳ್ಳಲು 300 ರೂಪಾಯಿಗಳಂತೆ ಕೊಟ್ಟಿದ್ದಾರೆ. ಹಿಂದೆ ಎಷ್ಟೋಊರುಗಳನ್ನು ಸರಿ ಮಾಡುತ್ತಿದ್ದರೂ ಹರಿಜನರ ಕಡೆ ಗಮನ ಕೊಡುತ್ತಿರಲಿಲ್ಲ. ಹಿಂದಿನ ಸರ್ಕಾರಗಳು ಹರಿಜನರ ಮನೆಗಳಿಗೆ ಹಣಕೊಟ್ಟಿರಲಿಲ್ಲ. ಟೌನುಗಳೊಳಗೆ ನೋಡುತ್ತಿದ್ದರೇ ಹೊರತು ಹರಿಜನರ ಕೇರಿಗಳ ಕಡೆ ಗಮನ ಕೊಡುತ್ತಿರಲಿಲ್ಲ. ಈಗ ಗ್ರಾಮಾಭಿವೃದ್ಧಿ ಯೋಜನೆ ಜಾರಿಗೆ ಬಂದ ಮೇಲೆ ಹರಿಜನರಿಗೆ ಬಡಾವಣೆಗಳನ್ನು ಮಾಡಿಸಿದರು. ಎಷ್ಟೋರಸ್ತೆಗಳು, ನೀರಿನ ಬಾವಿಗಳು ಇವೆಲ್ಲವೂ ಆಗಿವೆ. ಇದು ಚಿರಸ್ಮರಣೀಯವಾದ ವಿಷಯವಲ್ಲವೆ? ಒಟ್ಟಿನಲ್ಲಿ ಜನರಿಗೆ ಎಷ್ಟೋ ಉಪಕಾರಮಾಡಿದ್ದಾರೆ. ಇಂಥ ಉಪಕಾರಮಾಡಿರುವವರನ್ನು ಬಹಳ ದಿವಸ ನೆನೆದುಕೊಳ್ಳಬೇಕು. ಈ ಯೋಜನೆ ಎಷ್ಟೋ ತೃಪ್ತಿಕರವಾಗಿತ್ತು, ಇನ್ನೂ ಇದ್ದರೆ ಇನ್ನೂ ಹೆಚ್ಚು ಅನುಕೂಲಮಾಡುತ್ತಾರೆಂದು ನನ್ನ ಭಾವನೆ.

ಶ್ರೀ ಮುಲ್ಕಾ ಗೋವಿಂದರೆಡ್ಡಿಯವರು.—ಸ್ವಾಮಿ, ಹಳ್ಳಿಗಳ ಉದ್ಧಾರಕ್ಕಾಗಿ all round development ಎಂದರೆ ಸರ್ವತೋಮುಖವಾದ ಅಭಿವೃದ್ಧಿ ಕಾರ್ಯಗಳು ಆಗಬೇಕೆಂದು ಮೊದಲಿನಿಂದಲೂ ಎಲ್ಲರೂ ಹೇಳುತ್ತಿದ್ದಾರೆ. ಹೇಗಾಗಬೇಕೆಂದು ನಾನೂ ಒಪ್ಪುತ್ತೇನೆ. ಆದರೆ ಪ್ರಜಾಪ್ರಭುತ್ವ ನೀತಿಗೆ ವಿರುದ್ಧವಾಗಿ ಈ ಸಮಿತಿಗಳನ್ನು ನಾವು ಕರಣದ ಮೂಲಕ ರಚಿಸಿದ್ದು ತಪ್ಪು ಎಂದು ನಾವು ಹಿಂದಿನಿಂದಲೂ ಹೇಳುತ್ತಿದ್ದೇವೆ. ಈ ರೀತಿ ಮಾಡುವುದರಿಂದ ಜನತೆಯಲ್ಲಿ ಹುರುಪು ಹುಮ್ಮಸ್ಸು ಹುಟ್ಟುತ್ತಿಲ್ಲ. ಇನ್ನು ಮುಂದೆಯೂ ಕೂಡ ಈ ಪದ್ಧತಿಯನ್ನಿಟ್ಟು ಕೊಂಡಿರುವುದು ಚೆನ್ನಾಗಿಲ್ಲ. ಈ ಆಕ್ಟು ಜಾರಿಗೆ ಬಂದಕೂಡಲೇ ತೆಗೆದು ಬಿಟ್ಟಿದ್ದರೆ ಚೆನ್ನಾಗಿತ್ತು. ಇಷ್ಟು ಹೇಳಿ, ಇದನ್ನು ಇಲ್ಲಿಗೇ ಬಿಡುತ್ತೇನೆ.

ಹಳ್ಳಿಗಳು ಉದ್ಧಾರವಾಗಬೇಕಾದುದು ನ್ಯಾಯ. ಈ ಆಧುನಿಕ ಪರಿಸ್ಥಿತಿಗೆ ತಕ್ಕಂತೆ ಹಳ್ಳಿಯವರಿಗೆ ಅನುಕೂಲ ಕಲ್ಪಿಸಿಕೊಡಬೇಕೆಂದರೆ ಸರ್ಕಾರದ ಈಗಿನ ಸಾಧನ ಸಂಪತ್ತಿನಿಂದ ಸಾಧ್ಯವೇ ಇಲ್ಲವಾಗಿದೆ. ಹಳ್ಳಿಗಳ ಸ್ಥಿತಿಯಲ್ಲಿ ಕ್ರಾಂತಿ ಕಾರಕ ಬದಲಾವಣೆಗಳನ್ನು ಮಾಡಬೇಕಾಗಿದೆ. ನಾನು ಆಗಲೇ ಹೇಳಿದಂತೆ ಒಂದು ಹಳ್ಳಿಯನ್ನು ತೆಗೆದುಕೊಂಡರೆ ಅದರಲ್ಲಿ ಸರ್ವತೋಮುಖವಾದ ಅಭಿವೃದ್ಧಿ ಕಾರ್ಯಗಳನ್ನು ನಡೆಸಬೇಕು, ಈ ಕಾಲಕ್ಕೆ ಆವಶ್ಯಕವಾದ ಸಲಕರಣೆಗಳನ್ನೊದಗಿಸಬೇಕು. ಸ್ಯಾನಿಟೇಷನ್, ಎಲೆಕ್ಟ್ರಿಸಿಟಿ, ಇತ್ಯಾದಿ ಅನುಕೂಲತೆಗಳನ್ನೊದಗಿಸಬೇಕು, ರೇಡಿಯೋಗಳನ್ನೊದಗಿಸಬೇಕು. ಈ ಹಣದ ಅಭಾವದಲ್ಲಿ ಅವ್ಯವಸ್ಥೆಯಲ್ಲಿ ಸರ್ಕಾರ ಇದೆಲ್ಲವನ್ನೂ ಮಾಡಬೇಕೆಂದರೆ ಅದರಿಂದ ಸಾಧ್ಯವಿಲ್ಲ.

ಶ್ರೀ ಎಚ್. ಸಿದ್ದವೀರಪ್ಪನವರು.—ಅಭಾವ ಎಂದು ಹೇಳಬಹುದು; ಅವ್ಯವಸ್ಥೆ ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಮುಲ್ಕಾ ಗೋವಿಂದರೆಡ್ಡಿಯವರು.—ಒಂದು ಹೊಸ ರೀತಿಯ ಯೋಜನೆಯನ್ನು ಹಾಕತಕ್ಕದ್ದು ನಮ್ಮೆಲ್ಲರ ಕರ್ತವ್ಯವಾಗಿದೆ. ಆದು

ಯಾವರೀತಿಯಿರಬೇಕೆಂದರೆ : urbanisation of rural parts ಆಗಬೇಕು. ಐದು ಸಾವಿರ ಜನ ಸಂಖ್ಯೆಯಿರುವ ಪ್ರದೇಶ–ಅದನ್ನು ಪಟ್ಟಣ ಅಥವಾ ದೊಡ್ಡ ಹಳ್ಳಿ ಎಂದು ಹೇಳಬಹುದು–ಎಲ್ಲಕ್ಕೂ ಒಂದೇ ರೀತಿಯಾಗಿ ಅನುಕೂಲತೆಗಳನ್ನೆಲ್ಲಾ ಒದಗಿಸಬೇಕು. ಈ ರೀತಿ ಮಾಡಿದರೆ ನಮ್ಮ ಗುರಿಯನ್ನು ಸಾಧಿಸಬಹುದು. ಈಗ ಒಂದು ಹಳ್ಳಿಯಲ್ಲಿ ಒಂದು ಆಸ್ಪತ್ರೆಯನ್ನು ಸ್ಥಾಪನೆಮಾಡಿದರೆ ಅಲ್ಲಿಗೆ ಡಾಕ್ಟರುಗಳೇ ಹೋಗುವುದಿಲ್ಲ. ಏಕೆ ಹೋಗುವುದಿಲ್ಲ? ಅಲ್ಲಿ ಅವರ ಮಕ್ಕಳಿಗೆ ವಿದ್ಯಾಭ್ಯಾಸ ಸೌಕರ್ಯವಿರುವುದಿಲ್ಲ. ಅವರಿಗೆ ಜೀವನವನ್ನು ಪಟ್ಟಣಗಳಲ್ಲಿ ನಡೆಸಿಕೊಂಡು ಹೋಗಿ ಅಭ್ಯಾಸವಾಗಿ ಹಳ್ಳಿಗಳಲ್ಲಿ ನಡೆಸಬೇಕೆಂದರೆ ಸಾಧ್ಯವಿಲ್ಲ. ಈಗಮಾಡುತ್ತಿರುವ ರೀತಿಯಲ್ಲಿಯೇ ಹಳ್ಳಿಗಳನ್ನು ಅಭಿವೃದ್ಧಿ ಪಡಿಸುವುದೆಂದರೆ ಅದು ಸಾಧ್ಯವಿಲ್ಲದ ಮಾತು. ಒಂದೇ ಸಾರಿ ಹಳ್ಳಿಗಳನ್ನೆಲ್ಲಾ ವಜಾಮಾಡಿ ಹೊಸದಾಗಿಪಟ್ಟಣಗಳನ್ನು ಕಟ್ಟಬೇಕೆಂದರೆ, ಸಾಧ್ಯವಿಲ್ಲ. ಇದಕ್ಕೆ ಹೊಸ ರೀತಿಯಲ್ಲಿ ಯೋಜನೆಯನ್ನು ಹಾಕಿಕೊಂಡರೆ ಹೊಸ ಹಳ್ಳಿಗಳನ್ನು ಏರ್ಪಡಿಸಲು ಸಾಧ್ಯವಾಗುತ್ತದೆ. ವ್ಯವಸಾಯವನ್ನೂ ಒಂದು ಕೈಗಾರಿಕೆಯನ್ನಾಗಿಮಾಡಬೇಕು, ಮೆಕ್ಯಾನೈಸ್ ಮಾಡಬೇಕು, ಕೈಗಾರಿಕೆಗಳನ್ನು ವಿಸ್ತರಿಸಬೇಕು, ಇಲ್ಲದಿದ್ದರೆ ಹಳ್ಳಿಗಳು ಉತ್ತಮಗೊಳ್ಳಬೇಕೆಂದರೆ ಸಾಧ್ಯವಿಲ್ಲ. ಇದೆಲ್ಲಕ್ಕೂ ಹತ್ತು ಅಥವಾ ಇಪ್ಪತ್ತು ವರ್ಷಗಳ ಯೋಜನೆಯನ್ನು ಮಾಡಿಕೊಂಡು ಹೋದರೆ ಸಾಧ್ಯ. ಈಗ ಮಾಡುತ್ತಿರುವಂತೆ ಯೋಜನೆ ಮಾಡಿಕೊಂಡು, ಹಳ್ಳಿಯಲ್ಲಿ ಗೊಬ್ಬರದ ಗುಂಡಿಗಳನ್ನು ಮಾಡಿಸಿದರೆ ಅಥವಾ ಬಾವಿಗಳನ್ನು ತೋಡಿಸಿದರೆ ಹಳ್ಳಿಗಳ ಉದ್ಧಾರ ಸಾಧ್ಯವಾಗುವುದಿಲ್ಲ. ಈಗ ಸರ್ಕಾರ ಮಾಡಿರುವುದರಿಂದ ಹಳ್ಳಿಗಳು ಅಭಿವೃದ್ಧಿಯಾಗಿವೆ, ಮುಂದೆ ಬಂದಿವೆ ಎಂದು ಹೇಳಲು ಸಾಧ್ಯವಿಲ್ಲ. ಆದುದರಿಂದ ಒಂದು ಹೊಸ ಯೋಜನೆಯನ್ನು ಹಾಕಿ, ಪಟ್ಟಣ ಹಳ್ಳಿ ಎಂಬ ಭೇದವಿಲ್ಲದಂತೆ ಕೆಲಸಮಾಡಿದರೆ ಗ್ರಾಮಾಭಿವೃದ್ಧಿ ಸಾಧ್ಯವಾಗುತ್ತದೆಯೇ ಹೊರತು, ಈಗ ಅನುಸರಿಸುತ್ತಿರುವ ಮಾರ್ಗದಿಂದ ಸಾಧ್ಯವಿಲ್ಲ.

4-30 P.M.

ಶ್ರೀ ಕೆ. ಪಟ್ಟಾಭಿರಾಮಯ್ಯ ಅವರು (ಕೋಲಾರ).—ಮಾನ್ಯ ಅಧ್ಯಕ್ಷರೇ ; ಇದುವರೆಗೂ ಈ ಗ್ರಾಮಾಭ್ಯುದಯದ ವಿಚಾರವಾಗಿ ಮಾನ್ಯ ಸದಸ್ಯರನೇಕರು ದೀರ್ಘವಾದ ಚರ್ಚೆಗಳನ್ನು ಮಾಡಿದ್ದಾರೆ. ಈ ಚರ್ಚೆಗಳಿಂದ ನನ್ನ ಮನಸ್ಸಿನಮೇಲೆ ಉಂಟಾದ ಎರಡು ಪರಿಣಾಮಗಳ ಬಗ್ಗೆ ಕೆಲವು ವಿಷಯಗಳನ್ನು ಈ ಮಾನ್ಯ ಸಭೆಯಮುಂದೆ ಇಡಬೇಕೆಂದು ನನಗನ್ನಿಸುತ್ತಿರುವುದರಿಂದ, ಅವುಗಳನ್ನು ಈಗ ಸಭೆಯ ಮುಂದಿಡಲು ನಾನು ನಿಂತಿದ್ದೇನೆ.

ಈ ಡೆವಲಪ್‌ಮೆಂಟ್ ಸಮಿತಿಗಳು ಕಳೆದ ಒಂದೆರಡು ವರ್ಷಗಳಿಂದ ಯಾವ ರೀತಿಯಲ್ಲಿ ಕೆಲಸ ಮಾಡಿಕೊಂಡು ಬಂದಿರುತ್ತವೆಂಬ ಬಗ್ಗೆ ಹಲವು ಮಾನ್ಯ ಸದಸ್ಯರು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಹಾಗೆ ಆ ಸಮಿತಿಯವರು ಈ ಗ್ರಾಮಾಭ್ಯುದಯದ ಸಂಬಂಧವಾಗಿ ಮಾಡಿರತಕ್ಕ ಕೆಲಸಗಳ ಬಗ್ಗೆ ಮಾತನಾಡುವಾಗ ತೆಗಳಿಕೆಯ ಮಾತನ್ನಾಗಲಿ ಅಥವಾ ಒಂದು ಹೊಗಳಿಕೆಯ ಮಾತನ್ನಾಗಲಿ ಆಡಲಾಗಿದೆ. ಈ ಗ್ರಾಮಾಭಿವೃದ್ಧಿ ಕಾರ್ಯ ಎಂಬ ಪದಕ್ಕೆ ಏನು ಅರ್ಥ ಕಲ್ಪನೆ ಆಗಬೇಕೋ ಅದಕ್ಕೆ ಒಂದು ವಿಧಿ ಇಲ್ಲಿ ಕಾಣಿಸುತ್ತಿದೆ. ಈ ಅರ್ಥ ಕಲ್ಪನೆ ಮೂಲ ತತ್ವಕ್ಕೆ ತೀರಾವಿರೋಧವಾಗಿರುವುದರಿಂದ, ಈ ಬಗ್ಗೆ ನನ್ನ ಮನಸ್ಸಿನ ಮೇಲುಂಟಾದ ಪರಿಣಾಮವೇನೆಂಬುದನ್ನು ಈ ಸಭೆಯಲ್ಲಿರತಕ್ಕ ತಮ್ಮೆಲ್ಲರಮುಂದೆ ಇಡಲು ನಾನೀಗ ನಿಂತಿದ್ದೇನೆ.

ಮೊಟ್ಟಮೊದಲನೆಯದಾಗಿ ಒಂದು ಅಂಶವನ್ನು ನಾನು ತಮಗೆಲ್ಲಾ ಸ್ಪಷ್ಟಪಡಿಸಬೇಕಾಗಿದೆ. ಗ್ರಾಮಾಭ್ಯುದಯ ಎನ್ನುವ ಪದಕ್ಕೆ ಏನು ಅರ್ಥಕಲ್ಪನೆ ಮಾಡಿಕೊಳ್ಳಬೇಕು ಎಂಬುದನ್ನು ತಿಳಿದುಕೊಳ್ಳತಕ್ಕದ್ದು ಬಹಳ ಮುಖ್ಯವಾದದ್ದು. ಪ್ರಾಯಶಃ ನಮ್ಮ ದೇಶದ ಸ್ಥಿತಿಗತಿಯನ್ನು ನೋಡಿದರೆ, ಈ ಗ್ರಾಮಾಭ್ಯುದಯ ಎನ್ನುವುದನ್ನು ಅದರ ಹಿನ್ನೆಲೆಯಿಂದ ನೋಡತಕ್ಕದ್ದು ಯೋಗ್ಯವಾಗಿದೆ. ತಾವೀಗ ಪ್ರಾಯಶಃ ಈ ಗ್ರಾಮಾಭ್ಯುದಯದ ನೆರಳಿನಲ್ಲಿ ರೈತನಿಗೆ

(ಶ್ರೀ ಕೆ. ಪಟ್ಟಾಭಿರಾಮ್ಯರವರು)

ಗ್ರಾಮವಾಸಿಗೆ ಅನೇಕ ಸೌಲಭ್ಯಗಳನ್ನು ಒದಗಿಸಿರಬಹುದು. ಆದರೆ ಹೀಗೆ ಒಂದೆರಡು ಪರಿಹಾರಗಳನ್ನು ಒದಗಿಸಿದರೆ ಸಾಲದು, ಇದು ಪೂರ್ಣ ಗ್ರಾಮಾಭ್ಯುದಯವಲ್ಲ ಎಂಬುದರ ಬಗ್ಗೆ ಒಂದೆರಡು ಮಾತುಗಳನ್ನು ತಮ್ಮ ಮುಂದೆ ನಾನೀಗ ನಿವೇದನ ಮಾಡಿಕೊಳ್ಳಬೇಕೆಂದಿದ್ದೇನೆ. ಪರಕೀಯರಾದ ಪಾಶ್ಚಿಮಾತ್ಯರ ಆಡಳಿತಕ್ಕೊಳಗಾಗಿ ಪರಾಧೀನತೆಯಲ್ಲಿ 100-200 ವರ್ಷಗಳವರೆಗೆ ಇದ್ದಂಥ ಈ ದೇಶಕ್ಕೆ ಅವರು ಎಂಥ ನಾಗರೀಕತೆಯನ್ನು ತಂದು ಬಿತ್ತಿದರು, ಜನರಲ್ಲಿ ಎಂಥಾ ಮನೋಭಾವವನ್ನುಂಟು ಮಾಡಿದರು, ಆರ್ಷೇಯವನ್ನು ಎಷ್ಟರಮಟ್ಟಿಗೆ ನಾಶಪಡಿಸಿದರು, ಅದರಿಂದ ಜನರ ದೃಷ್ಟಿ ಯಾವ ಯಾವ ರೀತಿ ಎತ್ತೆತ್ತ ಹೋಯಿತು ಎಂಬುದನ್ನು ಸ್ವಲ್ಪ ಗಮನಿಸಿ ನೋಡಿದರೆ, ಅದರ ಫಲವಾಗಿ ನಮ್ಮ ಹಳ್ಳಿಗಳೆಲ್ಲಾ ಹಾಳಾದವು. ಹಳ್ಳಿಯ ನಾಗರೀಕತೆಯೂ ಹಾಳಾಯಿತು. ಆದರೆ ಅನೇಕ ಪ್ರಾಜ್ಞರಿರತಕ್ಕಂಥ ಈ ಸಭೆಯಲ್ಲಿ ನಾನು ಈ ರೀತಿ ಲಂಬಿಸಿ ಹೇಳತಕ್ಕದ್ದು ಅಕ್ಷಮ್ಯ ಅಪರಾಧವಾಗಬಹುದು; ಅಥವಾ ಕೆಲವರು ಇದಕ್ಕೆ ಅಪಾರ್ಥ ಕಲ್ಪಿಸಿಕೊಳ್ಳಬಹುದು. ಆದರೆ ಹೀಗೆ ಆ ಗ್ರಾಮಾಭ್ಯುದಯವೆಂಬ ಪದದ ಅರ್ಥ ಕಲ್ಪನೆಯನ್ನು ಸರಿಯಾಗಿ ಮಾಡಿಕೊಳ್ಳದೆ ಹೋದರೆ ಈ ಹೊಸಮಾದರಿಯ ನಾಗರಿಕತೆಯಿಂದ ನಮ್ಮ ಹಳ್ಳಿಗಳೆಲ್ಲಾ ಕೆಡುತ್ತವೆ. ಆದರೆ ಈಗ ಅವುಗಳ ಉದ್ಧಾರವಾಗಬೇಕು, ಗ್ರಾಮಗಳ ಜೀರ್ಣೋದ್ಧಾರವಾಗಬೇಕು, ಗ್ರಾಮಾಭ್ಯುದಯ ಒಂದು ಉನ್ನತ ಮಟ್ಟಕ್ಕೆ ಏರಬೇಕು, ಎಂದು ಹೇಳುವ ನಾವು ಈಗ ಅದಕ್ಕಾಗಿ ಏನು ಮಾಡಬೇಕೆಂಬುದನ್ನು ಸ್ವಲ್ಪ ಆಲೋಚನೆ ಮಾಡೋಣ. ಕೆಲವು ಮಾನ್ಯ ಸ್ನೇಹಿತರು ಎಂದರೆ ಶ್ರೀಮಾನ್ ಸಿ.ಟಿ. ಹನುಮಂತಯ್ಯನವರು, ಶ್ರೀಮಾನ್ ಕೆ. ಲಕ್ಕಪ್ಪನವರು, ಶ್ರೀಮಾನ್ ಸೋಲೂರುಸಿದ್ದಪ್ಪನವರು—ಹೆಸರು ಸೋಲೂರಾದರೂ ಬಹಳ ಚೆನ್ನಾಗಿ ಸಭೆಯಲ್ಲಿ ಮಾತನಾಡಿ ಗೆದ್ದಿದ್ದಾರೆ—ಈ ಮಾನ್ಯ ಸ್ನೇಹಿತರೆಲ್ಲರೂ ಹೇಳಿರತಕ್ಕ ಈ ಡೆವಲಪ್‌ಮೆಂಟ್ ಸಮಿತಿಯವರು ಸ್ತುತ್ಯಕಾರ್ಯಗಳನ್ನು ಮಾಡಿರತಕ್ಕ ಬಗ್ಗೆ ನಮ್ಮ ಮೆಚ್ಚುಗೆಯನ್ನು ಕೊಡೋಣ. 'ಗ್ರಾಮಾಭ್ಯುದಯ' ಎಂದರೆ ಏನು ಅರ್ಥ? ಕೆಲವು ಗ್ರಾಮಗಳಿಗೆ ಬಾವಿಗಳು, ಕೆಲವು ಗ್ರಾಮಗಳಿಗೆ ಕೆಲವು ರಸ್ತೆಗಳು, ಇತ್ಯಾದಿ ಇನ್ನೂ ಕೆಲವು ಅನುಕೂಲಗಳನ್ನು ಕಲ್ಪಿಸಿ ಕೊಟ್ಟು ಬಿಟ್ಟರೆ ಅಲ್ಲಿಗೆ ಅದೇ ಗ್ರಾಮಾಭಿವೃದ್ಧಿ ಎಂದು ತಿಳಿದುಕೊಂಡಂತೆ ಎದ್ದು ಕಾಣುತ್ತಿದೆ. ಯಾರ ಮೇಲೂ ಟೀಕೆ ಮಾಡಬೇಕೆಂದು ಹೇಳುತ್ತಿಲ್ಲ. ಆದರೆ ಈ ಗ್ರಾಮಾಭ್ಯುದಯದ ಮೂಲತತ್ವದ ಅರ್ಥಕಲ್ಪನೆ ತಮ್ಮೆಲ್ಲರ ಗಮನಕ್ಕೆ ಬರಲಿ ಎಂದು ಸವಿನಯದಿಂದ ನಾನೀ ವಿಚಾರಗಳನ್ನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಈಗ ಈ ಗ್ರಾಮಾಭ್ಯುದಯ ಏನ್ನುವುದನ್ನು ಚೆನ್ನಾಗಿ ಅರ್ಥಮಾಡಿಕೊಳ್ಳುವುದಾದರೆ, ಶ್ರೀಮಾನ್ ಸಿದ್ದಪ್ಪನವರ ಭಾಷೆಯಲ್ಲೇ ಹೇಳುವುದಾದರೆ—'ರೈತನ ಉದ್ಧಾರವೇ ಗ್ರಾಮಾಭ್ಯುದಯ' ಏಂದು ಅವರು ತಿಳಿದುಕೊಂಡಿರುವ ಹಾಗೆ ನನಗೆ ಅರ್ಥವಾಗುತ್ತದೆ. ಇದು ನಿಜವಾದ ಗ್ರಾಮಾಭ್ಯುದಯ ಅಲ್ಲವೆಂದು ಅವರಲ್ಲಿ ಬಿನ್ನವಿಸುತ್ತೇನೆ. ಕೆಲವು ಸೌಕರ್ಯಗಳನ್ನು ಕೊಟ್ಟರೆ ಗ್ರಾಮಾಭ್ಯುದಯವೆಂದು ತಿಳಿದು ತೃಪ್ತರಾಗುವಂತಿಲ್ಲ. ಹಾಗೆ ರೈತನಿಗೆ ಕೆಲವು ಸಹಾಯಗಳನ್ನೊದಗಿಸಿಕೊಟ್ಟ ಮಾತ್ರಕ್ಕೇ ನಾವು ಕೃತಕೃತ್ಯರಾದೆವೆಂದು ಭಾವಿಸುವುದಕ್ಕಾಗುವುದಿಲ್ಲ. ಆದರೆ ಅವರು ಕೆಲಸಗಳನ್ನು ಚೆನ್ನಾಗಿಮಾಡಿದ್ದಾರೆಂದು ತಿಳಿಸಿದ್ದನ್ನು ಒಪ್ಪಿಕೊಳ್ಳೋಣ. ಅದು ನಿಜ. ಆದರೂ ಅದು ಗ್ರಾಮಾಭ್ಯುದಯವೆನಿಸಿಕೊಳ್ಳುವುದಿಲ್ಲ. ಈ ಗ್ರಾಮಾಭ್ಯುದಯದ ವಿಚಾರದಲ್ಲಿ ಒಂದು ಮಾತನ್ನು ಸ್ಪಷ್ಟವಾಗಿ ಹೇಳಬೇಕೆಂದರೆ, ಈಗಾಗಲೇ ಮಾತನಾಡಿದ ಶ್ರೀಮಾನ್ ಎಸ್. ಗೋಪಾಲಗೌಡರು ಹೇಳಿರತಕ್ಕದ್ದನ್ನು ನಾನು ಮುಕ್ತಕಂಠದಿಂದ ಸ್ವಾಗತಿಸುತ್ತೇನೆ. ಆದರೆ ನನ್ನ ಮಾನ್ಯ ಮಿತ್ರರಾದ ಶ್ರೀಮಾನ್ ಗೋವಿಂದರೆಡ್ಡಿಯವರು ಹೇಳಿರತಕ್ಕ ವಿಚಾರದಲ್ಲಿ, ಅದೇ ರೀತಿಯಾಗಿ ಹೇಳ್ಳುವುದಕ್ಕಾಗುವುದಿಲ್ಲ. ಅವರು ಹೇಳಿರತಕ್ಕ

ದ್ದಕ್ಕೂ ನನಗೂ ಬಹಳ ದೂರವಿದೆ. ಅವರು ಒಂದು ಇಂಗ್ಲಿಷ್ ಪದವನ್ನು ಉಪಯೋಗಿಸಿದ್ದಾರೆ. ಅದು ಯಾವುದೆಂದರೆ Urbanisation of rural areas' ಎಂದು ಹೇಳಿದರು. ಆದರೆ ಅದು ಖಂಡಿತ ಆಗಬಾರದೆಂದು ನನ್ನ ವಾದ.

Sri H. SIDDAVEERAPPA.—It is contradictory in terms.

ಶ್ರೀ ಕೆ. ಪಟ್ಟಾಭಿರಾಮ್‌ರವರು.—Yes, it is so. ನಿಜ. ಈಗ ನಾನು ತಮ್ಮೆಲ್ಲರಲ್ಲಿಯೂ ಅರಿಕೆ ಮಾಡಿಕೊಳ್ಳುವುದೇನೆಂದರೆ-ಸ್ಥೂಲವಾಗಿ ಮೂಲತತ್ವಗಳನ್ನು ಆದರ್ಶವಾಗಿಟ್ಟುಕೊಂಡು ನಡೆಯತಕ್ಕಂಥ ಒಂದು ಆದರ್ಶನೀತಿ ಬೇಕು. ಈ ಗ್ರಾಮಾಭ್ಯುದಯದ ಬಗ್ಗೆ ಮಾತನಾಡಿದ ಕೆಲವು ಮಾನ್ಯ ಸದಸ್ಯರುಗಳು ಪ್ಲಾನಿಂಗ್ ಸಮಿತಿಯವರ ಕೆಲವು ವಿಚಾರಗಳನ್ನು ಹೇಳಿದರು. ಆದರೆ ಅಲ್ಲಿಯವರೆಗೂ ನನಗೆ ಈ ವಿಚಾರದಲ್ಲಿ ಮಾತನಾಡಬೇಕೆಂಬ ಕೂತೂಹಲವೇ ಇರಲ್ಲಿಲ್ಲ. ಆದರೆ ಕೆಲವರು ಈ ಪ್ಲಾನಿಂಗ್ ಸಮಿತಿಯ ಯೋಜನೆಯ ಮೇಲೆ ಮಾತನಾಡಿದನಂತರ ನನಗೆ ಮನಸ್ಸು ಕೆರಳಿದಂತಾಗಿ, ಎರಡು ಮಾತುಗಳನ್ನಾಡಲೇ ಬೇಕೆಂದು ಮನಸ್ಸು ಮಾಡಿದೆನು. ಈ ಗ್ರಾಮಾಭ್ಯುದಯವೆಂಬುದನ್ನು ನಾವು ಗ್ರಾಮಾಭ್ಯುದಯದ ದೃಷ್ಟಿಯಿಂದ ನೋಡಬೇಕೇ ಶಿವಾಯಿ, ಆ ಪ್ಲಾನಿಂಗ್ ಕಮಿಷನ್ನಿನವರು ದೇಶದ ಮುಂದೆ ಈಗೇನು ಒಂದು ಯೋಜನೆಯನ್ನಿಟ್ಟಿದ್ದಾರೋ ಅದರಿಂದ ಈ ಗ್ರಾಮಾಭ್ಯುದಯ ಪೂರ್ಣವಾಗಿ ಆಗುವುದಿಲ್ಲವೆಂದು ನಾನು ಸಾರಿ ಸಾರಿ ಹೇಳುತ್ತೇನೆ. ಈ ಗ್ರಾಮಾಭ್ಯುದಯವೆಂದರೇನು ಎಂಬುದಕ್ಕೆ ಉದಾಹರಣೆಯಾಗಿ ಮಹಾತ್ಮಾಗಾಂಧಿಯವರು ಹೇಳಿರತಕ್ಕದ್ದನ್ನೇ ಈಗ ತಮಗೆ ಪುನಃ ಹೇಳುತ್ತೇನೆ. ಗ್ರಾಮಾಭ್ಯುದಯ ಎಂದರೆ ಗ್ರಾಮದ ಜೀವನವನ್ನೇ ಅಥವಾ ಗ್ರಾಮಜೀವನವನ್ನೇ ಮಾರ್ಪಾಡು ಮಾಡತಕ್ಕದ್ದು, ಗ್ರಾಮಜೀವನದಲ್ಲಿ ಒಂದು ಸ್ಫೂರ್ತಿ, ಒಂದು ನವಜೀವನವನ್ನೇ ತುಂಬಬೇಕು; ಇಂಥಾ ವಿಕಾಸಗಳಿಂದ ಕೂಡಿದ್ದರೇ ಅದು ನಿಜವಾದ ಗ್ರಾಮಾಭ್ಯುದಯ. ಹಾಗಿಲ್ಲದೆ ರೈತನಿಗೆ ಒಂದು ಬಾವಿ ತೆಗೆಸಿಕೊಟ್ಟೆ, ಒಂದು ರಸ್ತೆ ಮಾಡಿಸಿಕೊಟ್ಟೆ ಎಂದರೆ ಗ್ರಾಮಾಭ್ಯುದಯ ಮಾಡಿದಂತೆ ಆಗಲಿಲ್ಲ. ಈ ಮಾತುಗಳೆಲ್ಲಾ ನಾನು ಒಂದು ಅಗೌರವಕ್ಕಾಗಿ ಹೇಳತಕ್ಕವುಗಳಲ್ಲ, ಒಂದು ಪೂರ್ಣ ತತ್ವದೃಷ್ಟಿಯಿಂದ ಹೇಳುತ್ತಿದ್ದೇನೆ. ಮಹಾತ್ಮಗಾಂಧಿಯವರು ಹೇಳಿಕೊಟ್ಟ ರೀತಿಯಲ್ಲಿ ನಾವು ಇದನ್ನು ಪರಿಶೀಲಿಸೋಣ. ಹಾಗಲ್ಲದೆ ಶ್ರೀಮಾನ್ ಗೋವಿಂದರೆಡ್ಡಿಯವರು ಹೇಳಿದಹಾಗೆ ಇದನ್ನು ಒಪ್ಪಲು ಸಾಧ್ಯವಿಲ್ಲ. ಅವರು ಹೇಳಿದ Urbanisation of rural areas ಎಂಬ ತತ್ವಕ್ಕೆ ನಾನು ತೀರ ವಿರುದ್ಧ. ಪ್ರಾಯಶಃ ಈ ಸಭೆಯಲ್ಲಿರತಕ್ಕ ಅನೇಕ ಮಾನ್ಯ ಸದಸ್ಯರೂ ಈ ತತ್ವಕ್ಕೆ ವಿರೋಧವಾಗಿದ್ದಾರೆಂದು ನಾನು ಭಾವಿಸುತ್ತೇನೆ. ಸಾಮಾನ್ಯವಾಗಿ ಮಹಾಜನರು ಈ ಹಳ್ಳಿ ಮತ್ತು ಊರಿನವರನ್ನು ಹೇಗೆ ಅರ್ಥಮಾಡಿಕೊಂಡಿದ್ದಾರೆಂದರೆ, ಹಳ್ಳಿಜನರನ್ನು ಇವ ಹಳ್ಳಿಯವ ಎಂದೂ, ಟೌನ್ ಜನರನ್ನು ಇವ ಟೌನಿನವ ಎಂದೂ ಕರೆಯುವುದು ವಾಡಿಕೆಯಾಗಿ ಬಂದುಹೋಗಿದೆ. ಈ ರೀತಿ ಹಳ್ಳಿಯವರಿಗೂ, ಟೌನಿನವರಿಗೂ ಒಂದು ವ್ಯತ್ಯಾಸ ತೋರಿಸಿರುತ್ತಾರೆ. ಆದರೆ ಈ ದಿವಸ ಹಳ್ಳಿಯವಎಂದರೆ ಕಲ್ಪನೆ ಏನು? ಸತ್ಯವಂತನಿರತಕ್ಕದ್ದೇ ಹಳ್ಳಿ; ಸತ್ಯಮಾರ್ಗದಲ್ಲಿ ನಡೆದು, ಕಷ್ಟಪಟ್ಟು, ತನ್ನ ಬೆವರನ್ನುಸುರಿಸಿ, ಹಗಲಿರಳೂ ದುಡಿದು ಸಶ್ರಮ ಜೀವನವನ್ನು ಕಲ್ಪಿಸಿಕೊಂಡು ಹೋಗತಕ್ಕವರಿರುವುದು ಹಳ್ಳಿಯಲ್ಲಿ; ಆ ಹಳ್ಳಿಯಲ್ಲಿರತಕ್ಕವನೇ ಪರಾಧೀನತೆಯಿಲ್ಲದೆ ಇರತಕ್ಕವನು; ಪ್ರಪಂಚದಲ್ಲಿರತಕ್ಕ ಭೂಮಿಯಿಂದ ಎಲ್ಲವನ್ನೂ ಸೃಷ್ಟಿಸಿ, ಬೆಳೆಮಾಡಿ, ಪ್ರಪಂಚವನ್ನು ಸಾಕತಕ್ಕಂಥ ಇತ್ಯಾದಿ ಸುಗುಣಗಳನ್ನುಳ್ಳವನೇ ಆ ಹಳ್ಳಿಯವನು, ಸಶ್ರಮ ತತ್ವವನ್ನು ಪೋಷಿಸಿದವನು. ಆದುದರಿಂದ ಈ ಎಲ್ಲ ಅರ್ಥಗಳನ್ನೂ ಆ ಹಳ್ಳಿ ಎಂಬ ಒಂದು ಶಬ್ದದಲ್ಲಿ ಅಡಕಮಾಡಿ, ಆ ಪದವನ್ನು ಚಿತ್ರಿಸಿದ್ದಾರೆಂದು ಮಹಾತ್ಮಗಾಂಧಿಯವರೇ ಹೇಳಿದ್ದಾರೆ. ಹಳ್ಳಿ ಎಂದರೆ ಸ್ವಾಭಾವಿಕಜೀವನ ಕ್ಷೇತ್ರ, ಕೃತಕ ಜೀವನ ಕ್ಷೇತ್ರವಲ್ಲ.

ಶ್ರೀ ಮುಲ್ಕಾ ಗೋವಿಂದರೆಡ್ಡಿಯವರು.—ತಾವು ಆ 'ಹಳ್ಳಿ' ಎಂಬ ಒಂದು ಪದಕ್ಕೆ ಏನೇನು ಸುಗುಣಗಳಿರಬೇಕೆಂದು ಹೇಳಿದ್ದೀರೋ, ಅವುಗಳೆಲ್ಲವೂ ಇರಬೇಕೆಂಬುದೇ ನನ್ನ ಉದ್ದೇಶವೂ ಕೂಡ.

ಶ್ರೀ ಕೆ. ಪಟ್ಟಾಭಿರಾಮರ್ರವರು.—ಆದರೆ ಶ್ರೀಮರ್ಾ ಗೋವಿಂದರೆಡ್ಡಿಯಂಥವರನ್ನು ನನ್ನ ವಾದಕ್ಕೆ ತಿರುಗಿಸಿಕೊಳ್ಳುವಷ್ಟು ಶಕ್ತಿಯನ್ನು ದೇವರು ನನಗೆ ಕೊಟ್ಟಿದ್ದರೆ ನಾನು ಆಬಗ್ಗೆ ಖಂಡಿತ ಸಂತೋಷಪಡುತ್ತೇನೆ. ಈ Urbanisation ಈ ಆಧುನಿಕತೆಯ ತತ್ವದ ಪ್ರಕಾರ ಈಗ ನಿರ್ಮಾಣವಾಗಿರುವ ಪಟ್ಟಣಗಳಲ್ಲಿರತಕ್ಕವರ ಸಂಸ್ಕೃತಿಯನ್ನೇ ಹಳ್ಳಿಗೂ ಕೂಡ ನಾವು ಅನ್ವಯಿಸುವುದಾದರೆ, ಈ ದಿವಸ ಒಂದು ಮಿಲ್ಲನ್ನು ತೆಗೆದುಕೊಂಡು ಹೋಗಿ ಆ ಹಳ್ಳಿ ಜನರ ಮಧ್ಯೆ ಇಟ್ಟಿದ್ದೇ ಆದರೆ, ಈ ದಿವಸ ಅವರು ಕಷ್ಟಪಟ್ಟು ಕೈಯಲ್ಲಿ ಭತ್ತವನ್ನೋ, ಅಕ್ಕಿಯನ್ನೋ ಕುಟ್ಟಿ, ಅದನ್ನು ಊಟಮಾಡಿಕೊಂಡು ಆರೋಗ್ಯವಾಗಿರತಕ್ಕವರೆಲ್ಲರನ್ನೂ ಈ ಫ್ಲೋರ್ ಮಿಲ್ಲಿನ ಆಧಾರದಮೇಲೆ ನಿಲ್ಲಿಸಿದರೆ ಏನು ಪರಿಣಾಮ? ಗ್ರಾಮಾಭ್ಯುದಯವೇ? Urbanisation ಆಗುವುದು ಖಂಡಿತ ಬೇಕಾಗಿಲ್ಲ ಎಂಬುದೇ ನನ್ನ ಉದ್ದೇಶ ಮತ್ತು ಅಭಿಪ್ರಾಯ. ಆದರೆ ಈ ಗಾಮಾಭಿವೃದ್ಧಿಯ ವಿಚಾರವಾಗಿ ಕೆಲವು ಅಂಶಗಳನ್ನು ಪ್ರಸ್ತಾಪಮಾಡಬೇಕೆಂದಿದ್ದೆ. ಹೀಗೆ ಟೀಕೆಮಾಡುವ ಈ ವೇಳೆಯಲ್ಲಿ ಶ್ರೀಮರ್ಾ ಮರಿಯಪ್ಪನವರಿದ್ದಿದ್ದರೆ ಚೆನ್ನಾಗಿತ್ತು. ಈಗಿರತಕ್ಕ ಶ್ರೀಮರ್ಾ ಚೆನ್ನಯ್ಯನವರು ಅವುಗಳಿಗೆಲ್ಲಾ ಜವಾಬ್ದಾರರಲ್ಲ. ಈ ಗ್ರಾಮಾಭಿವೃದ್ಧಿಯು ಚೆನ್ನಾಗಿ ಮುಂದುವರಿಯುವಂತಾಗಬೇಕಾದರೆ ಈ ಗ್ರಾಮಾಭ್ಯುದಯದ ನಿಜವಾದ ಮೂಲ ತತ್ವಗಳೇನೆಂಬುದನ್ನು ಸರ್ವರೂ ಅರಿತುಕೊಂಡು, ಅದನ್ನು ಮೊಟ್ಟಮೊದಲನೆಯದಾಗಿ ನಮ್ಮ ಆದರ್ಶವಾಗಿಟ್ಟುಕೊಂಡು ಹೋಗತಕ್ಕದ್ದು ಸೂಕ್ತವಾದದ್ದೆಂದು ನಾನು ಸ್ಪಷ್ಟವಾಗಿ ತಿಳಿದುಕೊಂಡಿದ್ದೇನೆ. ಈ ದೃಷ್ಟಿಯಿಂದ ನಾನು ತಮ್ಮೆಲ್ಲರಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ, ಈ ಸಂಬಂಧದಲ್ಲಿ ಯಾರೂ ಯಾವ ಭಿನ್ನ ಬೇಧವನ್ನೂ ಮಾಡಬೇಕಾಗಿಲ್ಲ, ತತ್ವ ಬೇಧವನ್ನು ಮಾಡಬೇಕಾಗಿಲ್ಲ. ಮುಂದಕ್ಕೆ ಬೇಕಾದರೆ ಬೇಧಾಬೇಧಗಳ ವಾದಕ್ಕೆ ಹೋಗುವ.

ಶ್ರೀ ಡಿ. ದೇವರಾಜ ಅರಸ್‌ರವರು (ಹುಣಸೂರು).—ಹಾಗಾದರೆ ತಾವೀಗ ದೇಶದಲ್ಲಿ ಯಂತ್ರಗಳ ಉಪಯೋಗವೇ ಕೂಡದೆಂದು ವಾದಿಸುತ್ತೀರೋ?

ಶ್ರೀ ಕೆ. ಪಟ್ಟಾಭಿರಾಮರ್ರವರು.—ಹೌದು. ಅದೇ ನನ್ನ ಸ್ಪಷ್ಟವಾದ ಅಭಿಪ್ರಾಯ. ಅದನ್ನಾಗಲೇ ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಯಾವ ಯಂತ್ರಗಳು ಬೇಕು? ಯಾವುದು ಬೇಡ? ಈ ಪ್ರಶ್ನೆ ಇದೆ. ಆದರೆ ನಾನು ಇನ್ನೂ ಅನೇಕ ವಿಚಾರಗಳನ್ನು ತಿಳಿಸಬೇಕಾಗುತ್ತದೆ. ಕಾಲಾವಕಾಶವಿಲ್ಲ. ಈಗ ಮುಖ್ಯವಾಗಿ ತತ್ವ ಬೇಧವನ್ನು ತಿಳಿಸಿದರೆ ಸದ್ಯಕ್ಕೆ ಸಾಕೆಂದು ನನಗೆನ್ನಿಸುತ್ತಿದೆ. ಈ ದಿವಸ ನಮಗೆ ಮುಖ್ಯವಾಗಿ ಬೇಕಾದದ್ದು ಅಂಥ ಹಳ್ಳಿಗಳೇ. ಆದರೆ ಈಗ ಆಹಳ್ಳಿಗಳಲ್ಲಿ ಇರತಕ್ಕ ದುರ್ಗಂಧ ಹೋಗಬಾರದೆಂದು ನಾನಿದನ್ನು ಹೇಳುತ್ತಿಲ್ಲ. ಹಾಗೆ ಕೆಟ್ಟುಹೋಗಿ ದುರ್ಗಂಧ ವಾಗಿರತಕ್ಕವುಗಳನ್ನೆಲ್ಲಾ ಮಾರ್ಪಡಿಸಬೇಕು, ಅಲ್ಲಿ ಅವುಗಳು ಸುಗಂಧ ಪರಿಮಳ ಬೀರುವಂತೆ ಮಾಡಬೇಕು. ನಮ್ಮ ದೇಶದ ನಾಗರಿಕತೆ ನಮ್ಮ ಹಳ್ಳಿಯವರಿಂದಲೇ ಉಂಟಾಗಬೇಕು. ಈ ದಿವಸ ನಮ್ಮ ದೇಶದ ನಿಜವಾದ ನಾಗರಿಕತೆ, ನಮ್ಮ ನೈಜವಾದ ಸಂಸ್ಕೃತಿ, ನಮ್ಮ ದೇಶದ ಧರ್ಮಬುದ್ಧಿ, ಅನೂಚಾನವಾಗಿ ಪ್ರಾಚೀನಕಾಲದಿಂದಲೂ ನಡೆದುಕೊಂಡು ಬಂದಿರತಕ್ಕಂಥಾ ನೈಜವಾದ ನಾಗರಿಕತೆ, ಇತ್ಯಾದಿಗಳೆಲ್ಲಾ ಈ ದಿವಸ ಇರಬೇಕಾಗಿದ್ದರೆ ಅವು ಕೇವಲ ಹಳ್ಳಿಗಳಲ್ಲಿ ಮಾತ್ರವೇ ಹೊರತು ಖಂಡಿತವಾಗಿ ನಿಮ್ಮ ಬೆಂಗಳೂರು, ಮೈಸೂರು ಪಟ್ಟಣಗಳಲ್ಲಿಲ್ಲ. ಈ ಸುಗುಣಗಳೆಲ್ಲಾ ಸ್ವಲ್ಪಮಟ್ಟಿಗಾದರೂ ಉಳಿದಿರುವುದು ಈ ದಿವಸ ಆ ಹಳ್ಳಿಗಳಲ್ಲೇ ಹೊರತು ನಿಮ್ಮ ಸಿಟಿಗಳಲ್ಲಲ್ಲ. ಆದರೂ ಈಗ ಹಳ್ಳಿಗಳಲ್ಲಿರತಕ್ಕ ಆ ದುರ್ಗಂಧವೆಲ್ಲವೂ ತೊಲಗಬೇಕು. ಗಾಂಧೀ ತತ್ವದ ಉಪಾಸಕರೆಂಬ ಬಗ್ಗೆ ತಾವೆಲ್ಲರೂ ಆ ಒಂದು ಕುರುಹನ್ನು

ತಮ್ಮ ತಲೆಯಮೇಲೆ ಇಟ್ಟುಕೊಂಡಿದ್ದೀರಿ. ಆದ್ದರಿಂದ ಆ ಮಹಾತ್ಮನ ಹೆಸರನ್ನೇ ಹೇಳಿದರೆ ಆಗ ಇದು ತಮ್ಮ ಕಿವಿಗೆ ಬೀಳಬಹುದೆಂದು ನನ್ನ ಆಸೆ.

ಸರ್ಕಾರದವರು ಈ ಗ್ರಾಮಾಭ್ಯುದಯದ ವಿಚಾರದಲ್ಲಿ ಏನು ಮಾಡಬೇಕೆಂಬ ಬಗ್ಗೆ ಒಂದೆರಡು ವಿಷಯಗಳನ್ನು, ಈಗಾಗಲೇ ಶ್ರೀಮಾನ್ ಗೋಪಾಲಗೌಡರು ಹೇಳಿರುವ ಹಾಗೆ, ಎರಡು ಬಹುಮುಖ್ಯ ಅಂಶಗಳನ್ನು, ನಾನು ಈಗ ತಮ್ಮೆಲ್ಲರ ಗಮನಕ್ಕೆ ತರಲಿಚ್ಛಿಸುತ್ತೇನೆ.

ಶ್ರೀ ಕೆ. ಪಟ್ಟಾಭಿರಾಮನ್‌ರವರು.—ಗ್ರಾಮಾಂತರಗಳಲ್ಲಿ ಕ್ರಾಂತಿಕಾರಕವಾದ ಮನೋಭಾವ ಬರುವ ರೀತಿಯಲ್ಲಿ, ಜನರಿಗೆ ಧೈರ್ಯ ಬರುವ ರೀತಿಯಲ್ಲಿ, ಒಂದು ಹೆಚ್ಚಿನ ಬದಲಾವಣೆಯಾಗಬೇಕು. ಮಹಾತ್ಮಗಾಂಧಿಯವರು ಹೇಳಿರುವ ಹಾಗೆ ಮೂರು ತತ್ವಗಳನ್ನು ಅನುಸರಿಸಬೇಕಾದದ್ದು ಆವಶ್ಯಕ. ಮೊದಲು, ಶ್ರಮ ಜೀವನದ ಒಂದು ಹಿರಿಮೆ; ಎರಡು, ಜನರ ಆರ್ಥಿಕ ಮಟ್ಟ ಉತ್ತಮಗೊಳ್ಳಬೇಕು; ಮೂರು, ಜೀವಿತಮಟ್ಟ ಉತ್ತಮ ಆದರ್ಶಪ್ರಾಯವಾಗಬೇಕು. ಶ್ರೀ ಸಿದ್ದಪ್ಪನವರು ಅರ್ಬನ್ಸೈಸೇಷನ್‌ಗಾಗಿ ಬಸ್ಸುಗಳನ್ನು ಏರ್ಪಡಿಸಿದೆಯೆಂದು ಹೇಳಿದರು. ಆದರೆ ಅದರಿಂದ ಹಳ್ಳಿಗಳಿಗೆ ನಷ್ಟವಾಗಿದೆಯೆಂದು ಹೇಳಬಹುದು. ಪ್ರಾಯಶಃ ಒಂದು ಮಾತು ಹೇಳುವುದಾದರೆ, ಮೂರು ವರ್ಷಗಳಿಂದ ಈ ಬಸ್ಸುಗಳನ್ನು ಪ್ರಾರಂಭಿಸಿದ್ದರಿಂದ ಹಳ್ಳಿಜೀವನಕ್ಕೆ ಅನರ್ಥ ಆಗಿರುವುದನ್ನು ಹೇಳುವುದಕ್ಕಾಗುವುದಿಲ್ಲ. ಆಮೇಲೆ ಪ್ಲಾನಿಂಗ್ ಕಮಿಷನ್ ವರದಿ ವಿಚಾರ ತೆಗೆದುಕೊಂಡರೆ, ಅದರಲ್ಲಿ ಒಂದು ದೊಡ್ಡ ಕೊರತೆಯಿದೆ. ಎಲ್ಲರಿಗೂ ಉದ್ಯೋಗ ಕಲ್ಪಿಸುವುದಕ್ಕೆ ಅದರಲ್ಲಿ ಸಾಧ್ಯವಾಗಿಲ್ಲ, ಕೆಲವರಿಗೆ ಮಾತ್ರ ಉದ್ಯೋಗವನ್ನು ಕಲ್ಪಿಸುವುದಕ್ಕೆ ಇದರಲ್ಲಿ ಮಾರ್ಗವಿದೆ. ಪ್ಲಾನಿಂಗ್ ಕಮಿಷನ್ ದೃಷ್ಟಿ ಗಾಂಧಿತತ್ವಕ್ಕೆ ವಿರೋಧವಾಗಿದೆ. ಆ ತತ್ವವನ್ನು ಸೂಕ್ತ ರೀತಿಯಲ್ಲಿ ಆಚರಣೆಗೆ ತರದಿರುವುದರಿಂದ ಅದನ್ನು ಸ್ವಾಗತ ಮಾಡುವುದಕ್ಕೆ ಸಾಧ್ಯವಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತೇನೆ. ಈ ದಿವಸ ದೇಶವನ್ನು ಕಾಪಾಡಬೇಕಾದರೆ, ಹಳ್ಳಿಗಳು ಉದ್ಧಾರವಾಗಬೇಕಾದರೆ ಮುಖ್ಯವಾಗಿ, ನಾನು ಹೇಳಿದ ಹಾಗೆ, ಗ್ರಾಮ ಜೀವನವೆಂಬುದು ಬದಲಾವಣೆಯಾಗಬೇಕು. ಜನರಲ್ಲಿ ಒಂದು ವಿಶ್ವಾಸ, ಸಮಾಧಾನ ಉಂಟಾಗಬೇಕು. ಸಂಪಾದನೆ ಜಾಸ್ತಿಯಾಗಬೇಕು, ಉದ್ಯೋಗ ಹೆಚ್ಚಬೇಕು. ಈ ರೀತಿಯಾಗಿ ಹಳ್ಳಿಗಳಲ್ಲಿ ಉದ್ಯೋಗ ಹೆಚ್ಚಿ ಸಂಪಾದನೆಯ ಮಾರ್ಗವನ್ನು ಹೆಚ್ಚಿಸಿದರೆ ಅವರಿಗೆ ಉತ್ತೇಜನ ದೊರೆತಂತಾಗುತ್ತದೆ, ಇಲ್ಲದಿದ್ದರೆ ಸರ್ಕಾರ ಎಷ್ಟು ಮಾಡಿದರೂ ಪ್ರಯೋಜನವಿಲ್ಲ. ಶ್ರೀಮಾನ್ ಲಕ್ಕಪ್ಪನವರು ಮಾಡಿರುವ ಕೆಲಸಕ್ಕೆ ಹೆಮ್ಮೆಪಡುತ್ತೇನೆ. 13 ಮೈಲಿಗಳವರೆಗೆ ಒಂದೇ ಸಮನಾಗಿ ಸ್ವಸಾಮರ್ಥ್ಯದಿಂದ ಕೆಲಸ ಮಾಡುವುದು ಸಾಮಾನ್ಯವಲ್ಲ, ಅದಕ್ಕೆ ಕಾರಣಕರ್ತರಾದವರು ವಂದನಾರ್ಹರು. ಆದರೆ ಅದು ಅಷ್ಟಕ್ಕೇ ನಿಲ್ಲುವುದು ಬೇಡ, ಆ ಕೆಲಸದ ಜೊತೆಗೆ ಹೊಸಯೋಜನೆ ಆಗಬೇಕು. ಈ ಅಭಿವೃದ್ಧಿ ಸಮಿತಿಯ ಜೊತೆಗೆ ಸಹಕಾರ ಸಂಸ್ಥೆಗಳು ಮುಂತಾದುವುಗಳ ಸಹಾಯದಿಂದಲೂ ಸರಿಯಾದ ಕೆಲಸ ಮಾಡೋಣ. ಮುಂದೆ ಯೋಜನೆಮಾಡುವಾಗ ಈಗ ಪ್ರಜಾಪ್ರಭುತ್ವ ಸರ್ಕಾರವನ್ನು ನಡೆಸುತ್ತಿರುವುದರಿಂದ ಅದಕ್ಕೆ ತಕ್ಕಹಾಗೆ, ಇದುವರೆಗೆ ಮಾಡುತ್ತಿರುವ ಕೆಲಸದ ಜೊತೆಗೆ, ಒಂದು ಹೆಜ್ಜೆ ಮುಂದಿಡಬೇಕು. ಸಂಪಾದನೆ ಮಾಡುವುದಕ್ಕೆ ಮಾರ್ಗ ಕಲ್ಪಿಸಬೇಕು. ಜಮೀನು ಹಂಚಿಕೆಯ ವ್ಯವಸ್ಥೆ ಮಾಡಿ ಸಹಕಾರ ಪದ್ಧತಿಯ ಮೇರೆಗೆ ಗ್ರಾಮ್ಯ ಜೀವನ ನಡೆಸುವ ರೀತಿಯಲ್ಲಿ ಬದಲಾವಣೆ ಮಾಡಿ ಮೂಲಭೂತವಾದ ಬದಲಾವಣೆ ಮಾಡಬೇಕು. ಆ ರೀತಿಯಾಗಿ ಮಾಡದಿರುವುದರಿಂದ ಇದುವರೆಗೂ ಒಂದು ಕೊರತೆಯಿದ್ದೇ ಇದೆ ಎಂದು ಖಂಡಿತವಾಗಿ ಹೇಳಬೇಕು. ಆ ಕೊರತೆಯನ್ನು ಹೋಗಲಾಡಿಸುವುದು ಸೂಕ್ತವಲ್ಲವೆ? ಇಷ್ಟನ್ನು ಮಾನ್ಯ ಸಭಾಪತಿಯವರಲ್ಲಿ ಅರಿಕೆಮಾಡುತ್ತೇನೆ. ಗ್ರಾಮಾಭ್ಯುದಯ ಎಂಬ ತತ್ವ, ಒಂದು ಆದರ್ಶ ಇದನ್ನು ಕುರಿತು ಹೇಳುವಾಗ, ಆ ವ್ಯವಸ್ಥೆಯಲ್ಲಿ ಏನು ಮೂಲಭೂತವಾದ ವ್ಯತ್ಯಾಸ ಮಾಡಿದರೆ ಅದರ ನಡೆ ಸರಿಹೋಗುತ್ತದೋ ಅದನ್ನು ಮಾಡಿ ಸರಿಯಾದ ಯೋಜನೆ ತಯಾರಿಸಬೇಕು.

(ಶ್ರೀ ಕೆ. ಪಟ್ಟಾಭಿರಾಮನ್‌ರವರು)

ಶ್ರೀ ಗೋವಿಂದರೆಡ್ಡಿಯವರು ಹೇಳಿದ ಒಂದು ಮಾತನ್ನು ಪ್ರಸ್ತಾಪಿಸಬೇಕಾಗಿದೆ. ಕ್ರಾಂತಿಕಾರಕವಾದ ಬದಲಾವಣೆಯಾಗಬೇಕು. ದೇಶಕ್ಕೆ ಬಹಳ ಕಷ್ಟವಿದೆ. ನಾಲ್ಕು ವರ್ಷಗಳಿಂದ ಗ್ರಾಮಾಭ್ಯುದಯ ಎಂಬ ಪದವನ್ನು ಹೇಳುತ್ತಲೇ ಇದೆ, ಆ ವಿಚಾರದಲ್ಲಿ ಇಂಗ್ಲಿಷ್ ಪದವನ್ನು ಹೇಳುವುದಾದರೆ Slogan ಎಂದು ಹೇಳಬಹುದು. ಸಜೀವವಾದ ಗ್ರಾಮವಾಗಬೇಕು, ನಿರ್ಜೀವವಾಗಬಾರದು. ಸುವ್ಯವಸ್ಥಿತವಾದ ಗ್ರಾಮ ನಿರ್ಮಾಣವಾಗಬೇಕಾದರೆ ಮೂಲಭೂತವಾದ ಬದಲಾವಣೆ ಮಾಡಿ ಅಲ್ಲಿ ಜೀವನ ವ್ಯವಸ್ಥೆ, ಆರ್ಥಿಕ ಸ್ಥಿತಿ, ಸಂಪಾದನಾಮಾರ್ಗ ಇತ್ಯಾದಿ ಅನುಕೂಲಗಳನ್ನು ಹೆಚ್ಚು ಮಾಡಬೇಕು. ಇನ್ನೂ ಒಂದು ಮಾತು. ಗ್ರಾಮ ಸ್ವರಾಜ್ಯವೆಂದು ಏನು ಹೇಳುತ್ತೇವೆಯೋ, ಏನೊಂದು ಆಸೆಯಿದೆಯೋ ಅದು ಸ್ಥಾಪನೆಯಾಗಬೇಕು. ಈ ದಿವಸ ಅಠಾರಾ ಕಚೇರಿಯಲ್ಲಿರುವ ಸರ್ಕಾರ ವಿಕೇಂದ್ರೀಕೃತವಾಗಿ ಗ್ರಾಮಸ್ವರಾಜ್ಯ ಬರಬೇಕು ಎಂಬ ಒಂದು ಆದರ್ಶವನ್ನು ನಾವು ಮನಸ್ಸಿನಲ್ಲಿಡಬೇಕು. ಇದು ದೊಡ್ಡ ಪ್ರಶ್ನೆ. ಗ್ರಾಮಾಭ್ಯುದಯ ಸಣ್ಣ ರಸ್ತೆ, ಬಾವಿ ಮುಂತಾದುವನ್ನು ಮಾಡುವುದು, ತಕಾವಿ ಸಾಲಕೊಡುವುದು ಇಷ್ಟೇ ಅಲ್ಲ, ಅದೊಂದು ದೊಡ್ಡ ಆದರ್ಶವಾಗಿ ಒಂದು ಗುರಿ ಮುಟ್ಟಬೇಕು. ಗ್ರಾಮ ಸ್ವರಾಜ್ಯವೆಂಬುದು ಒಂದು ಆದರ್ಶವಾಗಿ ಅದರಿಂದ ಗ್ರಾಮಸ್ಥರನ್ನು ಉತ್ತಮ ಸ್ಥಿತಿಗೆ ತರಬೇಕು. ಸರ್ವವಿಧದಲ್ಲೂ ಸ್ವಪರಿಪೂರ್ಣತೆಯಿಂದ ಸ್ವಸಾಮರ್ಥ್ಯದಿಂದ ತಮ್ಮ ಕಾಲ ಮೇಲೆ ತಾವು ನಿಲ್ಲುವಂತೆ, ದೇಶ ಬೆಳೆಯುವ ಹಾಗೆ ಕ್ರಾಂತಿಕಾರಕ ಬದಲಾವಣೆ ಮಾಡಿ ಗ್ರಾಮ ಸ್ವರಾಜ್ಯಕ್ಕೆ ತಳಹದಿ ಹಾಕುವಂಥ ಯೋಜನೆ ಮಾಡಬೇಕು. ಆ ರೀತಿಯಾದ ಬದಲಾವಣೆಯಾಗಿ ದೇಶದಲ್ಲಿ ಕಂಗೊಳಿಸುವಂಥ ಒಂದು ರಾಜ್ಯ ನಿರ್ಮಾಣವಾಗಲಿ, ಅಂಥ ಯೋಜನೆ ಮಾಡಲಿ ಎಂದು ಈ ವಿಚಾರದಲ್ಲಿ ಸಲಹೆ ನೀಡುತ್ತಿರುವ ಸಮಯದಲ್ಲಿ ಒಂದು ವಿರೋಧವೆಂದು ಹೇಳಿದರೆ ಅದಕ್ಕೆ ಏನು ಹೇಳುವುದು? ಸಹಜವಾಗಿ ಇರುವ ಸ್ಥಿತಿಯನ್ನು ಚಿತ್ರಿಸಲು ಅವಕಾಶ ಕೊಡದಿದ್ದರೆ ಹೇಗೆ? ಆದ್ದರಿಂದ ಇಷ್ಟು ಹೇಳಿರುವುದನ್ನು ಗಮನದಲ್ಲಿಟ್ಟು ವಿಶಾಲ ಮನೋಭಾವನೆಯಿಂದ ಹೊಸ ಯೋಜನೆಯನ್ನು ನಿರ್ಮಾಣ ಮಾಡಲು ಧೈರ್ಯ ಸ್ಥೈರ್ಯ ಮತ್ತು ಕಲ್ಪನೆ ತಮ್ಮಲ್ಲುಂಟಾಗಲಿ ಎಂದು ಹಾರೈಸುತ್ತೇನೆ.

ಶ್ರೀ ಕೆ. ವಿ. ಶಂಕರಗೌಡರು.—ಮಾನ್ಯ ಸದಸ್ಯರು ಒಂದು ಕಲ್ಪನಾರಾಜ್ಯವಾಗಬೇಕೆಂದು ಹೇಳುವುದೇನೋ ಸರಿ. ಆದರೆ, ಇವರ ಸಲಹೆ ಯೇನೆಂಬುದೇ ಗೊತ್ತಾಗಲಿಲ್ಲ. What are the steps that Government should take? ಅದನ್ನು ಸ್ವಲ್ಪ ಹೇಳಬೇಕು.

ಶ್ರೀ ಕೆ. ಪಟ್ಟಾಭಿರಾಮನ್‌ರವರು.—ನನ್ನ ಸಲಹೆ ಕೊಟ್ಟಿದ್ದೇನೆ. ಕೊಟ್ಟಿಲ್ಲ ಅಥವಾ ಗೊತ್ತಾಗಲಿಲ್ಲ ಎಂದು ಹೇಳುವುದನ್ನು ನಾನು ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಎ. ಭೀಮಪ್ಪನಾಯಕರು (ಮೊಳಕಾಲ್ಮುರು).—ಸ್ವಾಮಿ, ಇದುವರೆಗೆ ಗ್ರಾಮಾಭಿವೃದ್ಧಿ ವಿಚಾರದಲ್ಲಿ ನಮ್ಮ ಮಿತ್ರರು ಭಾಷಣ ಮಾಡಿರುವುದನ್ನು ನಾನು ಕೇಳಿದ್ದೇನೆ. ಶ್ರೀ ಪಟ್ಟಾಭಿರಾಮ್ ಅವರ ಭಾಷಣವನ್ನೂ ಕೇಳಿದ್ದೇನೆ. ಅವರ ಉದ್ದೇಶ, ಯೋಜನೆಗಳು, ಅದರ ಮೇಲೆ ಸಾಹಿತಿಗಳಾಗಿ ಹೇಳಿದ ಸರ್ವೋದಯ ತತ್ವ, ಅದರ ಅನುಯಾಯಿಗಳಾಗಿ ಇವೆಲ್ಲವನ್ನೂ ಮಿಳಿತಮಾಡಿ ಅವರು ಮಾಡಿರುವ ಭಾಷಣ ಈ ಸಭೆಯ ಮೇಲೆ ನಿಜವಾದ ಪರಿಣಾಮವನ್ನುಂಟುಮಾಡಿದೆ. ಅವರು ತಿಳಿಸಿದ ಅನೇಕ ವಿಷಯಗಳು ಸ್ವಾಗತಾರ್ಹವಾಗಿಯೂ ಇವೆ. ಆದರೆ ಒಂದು ಕಾನೂನು ಜಾರಿಗೆ ಬಂದು ಅದರ ಫಲಿತಾಂಶವನ್ನು ನೋಡುವುದಕ್ಕೆ ಮುಂಚೆಯೇ ಮತ್ತೊಂದು ಮಾಡಿ, ಇನ್ನೊಂದು ಮಾಡಿ ಎಂದು ಹೇಳುತ್ತಾ ಹೋದರೆ ಹೇಗೆ? ಗ್ರಾಮಜೀವನ ಉತ್ತಮಗೊಳ್ಳಲು ನವಚೈತನ್ಯ ಕೊಡಬೇಕು, ಆರ್ಥಿಕಸ್ಥಿತಿ ಉನ್ನತಮಟ್ಟಕ್ಕೆ ಏರಬೇಕು ಎಂದು ಹೇಳುವುದನ್ನು ಒಪ್ಪೋಣ, ಆದರೆ ಅದರ ಜೊತೆಗೆ urbanisation of rural life ಎಂದು ಹೇಳಿರುವುದರಲ್ಲಿ

urbanisation ಎಂಬ ಶಬ್ದವನ್ನು ಅವರೇಕೆ ಬೇರೆ ರೀತಿಯಲ್ಲಿ ಅರ್ಥಮಾಡಿದರೋ ಗೊತ್ತಿಲ್ಲ. ಒಂದು ನವತ್ವ, ಹೊಸ ಚೈತನ್ಯ ಕೊಡಬೇಕು ಎಂಬ ಅರ್ಥದಿಂದ, ಆ ಒಂದು ಸದ್ಭಾವನೆಯಿಂದ ಗೋವಿಂದರೆಡ್ಡಿಯವರು ಅರ್ಬನೈಸೇಷನ್ ಎಂದು ಹೇಳಿರುವುದರಿಂದ ಅದನ್ನು ನಿಜವಾಗಿಯೂ ಸ್ವಾಗತ ಮಾಡಬೇಕು. ಆದ್ದರಿಂದ, ನನ್ನ ದೃಷ್ಟಿಯಿಂದ, ಅದನ್ನು ಖಂಡಿಸುವುದಕ್ಕೆ ಆಗತ್ಯವಿರಲಿಲ್ಲ, ಅಷ್ಟಾಗಿ ಹೇಳಬೇಕಾಗಿರಲಿಲ್ಲ ಎಂದು ತಿಳಿಸುತ್ತೇನೆ. ಗೋವಿಂದರೆಡ್ಡಿಯವರಾದರೂ ಕೂಡ ಹಳ್ಳಿಯ ಜೀವನವನ್ನು ಮೇಲಕ್ಕೆತ್ತಿ ಹೊಸನವೀನತೆ ಕೊಡಬೇಕೆಂದು ಹೇಳಿದರು. ಅಲ್ಲಿ ಒಂದು ಬಾವಿ ಮಾಡಿದರು, ಇಲ್ಲಿ ಒಂದು ಚರಂಡಿ ಮುಚ್ಚಿದರು, ತಗ್ಗು ತೋಡಿಸಿದರು, ತಗ್ಗು ಮುಚ್ಚಿದರು, ಇಷ್ಟೇ ಈಗ ನಡೆದಿರುವ ಗ್ರಾಮಾಭಿವೃದ್ಧಿ ಕಾರ್ಯ ಎಂಬ ಭಾವನೆ ಪಟ್ಟಾಭಿರಾಮರವರಿಗೆ ಇದ್ದರೆ ಅವರಿಗೆ ಕೆಲವು ವಿಷಯ ಹೇಳಬೇಕೆಂದಿದ್ದೇನೆ. ಹಳ್ಳಿಯ ಜೀವನವನ್ನು ಮೇಲಟ್ಟಕ್ಕೆ ತರುವುದಕ್ಕಾಗಿ ಮಾಡಿರುವ ಬೇರೆ ಯಾವ ಕಾರ್ಯವನ್ನೂ ಅವರು ನೋಡಿಲ್ಲವೋ ಅಥವಾ ನೋಡಿದ್ದರೂ ಹೇಳುವುದಕ್ಕೆ ಇಷ್ಟಪಡಲಿಲ್ಲವೋ ತಿಳಿಯದು. ಈ ದಿವಸ ಸಹಕಾರ ಸಂಸ್ಥೆಗಳನ್ನಿಟ್ಟು ಹಳ್ಳಿಗಳ ಅಭಿವೃದ್ಧಿಯನ್ನು ಬೆಳಸುತ್ತಿರುವುದೂ, ಹಳ್ಳಿಯ ಜೀವನವನ್ನು ಮೇಲಕ್ಕೆ ಎತ್ತುತ್ತಿರುವುದೂ ಪ್ರಾರಂಭವಾಗಿದ್ದರೂ ಮನುಷ್ಯಪ್ರಯತ್ನದಲ್ಲಿ ಎಷ್ಟು ಸಾಧ್ಯವೋ ಮೇಲಕ್ಕೆತ್ತುವುದಕ್ಕೆ ಎಷ್ಟು ಆಸ್ಪದವಿದೆಯೋ ಅಷ್ಟನ್ನು ಮಾತ್ರ ಮಾಡಬಹುದು. ಇರುವ ಕಷ್ಟವನ್ನು ಹೋಗಲಾಡಿಸುವುದಕ್ಕೆ ಒಂದೆರಡು ದಿವಸಗಳಲ್ಲಿ ಅಥವಾ ಒಂದೆರಡು ವರ್ಷಗಳಲ್ಲಿ ಸಾಧ್ಯವಿಲ್ಲ. ಈಗ ತಾನೆ ಪ್ರಾರಂಭವಾಗಿರುವ ಆ ಕೆಲಸ ಒಂದು ಬೀಜ ರೂಪದಲ್ಲಿ ಬೆಳೆಯಬೇಕು, ಮಾನ್ಯ ಮಿತ್ರರ ಸಲಹೆಯನ್ನು ಸರ್ಕಾರ ತೆಗೆದುಕೊಳ್ಳಲೇಬೇಕು. ಆದರೆ ಬರೀ ಹಳ್ಳಿಯನ್ನು ಬೆಳಕು ಮಾಡುವುದೇ ಅಲ್ಲ, ಹಳ್ಳಿಯ ಜೀವನವನ್ನೂ ಬೆಳಕು ಮಾಡಬೇಕು. ಆ ದಿವಸವನ್ನು ನಾವು ನಿರೀಕ್ಷಿಸಬೇಕೆಂಬುದನ್ನು ಒಪ್ಪುತ್ತೇನೆ. ಒಂದು ಹೊಸ ಕಳೆ ಬರಬೇಕಾದರೆ, ಪಟ್ಟಣದವರಂತೆ ಹಳ್ಳಿಗರೂ ನಾಗರಿಕರಾಗಬೇಕೆಂದು ಹೇಳುತ್ತಿದ್ದಾರೆ. ವಿದ್ಯುಚ್ಛಕ್ತಿ ಹಳ್ಳಿಗೆ ಬಂದ ಮಾತ್ರಕ್ಕೆ ಅರ್ಬನೈಸೇಷನ್ ಆಯಿತೆಂದೂ ಹಳ್ಳಿಯ ಜೀವನ ಹಾಳಾಯಿತೆಂದೂ ಹೇಳಲಾಗುವುದಿಲ್ಲ. ಅದರ ಉಪಯೋಗವನ್ನು ಪಡೆಯಬೇಕು. ಹಾಗೆಯೇ ಒಂದು ವಿಶೇಷಯಂತ್ರ ಹಳ್ಳಿಯವರ ಜೀವನವನ್ನು ಮೇಲಕ್ಕೆತ್ತಿ ಅದು ಅವರ ಆರ್ಥಿಕ ಏಳಿಗೆಗೆ ಸಹಕಾರಿಯಾಗುವುದಾದರೆ ಅದನ್ನು ದೂರೀಕರಿಸಬಾರದು ಎಂಬುದನ್ನು ಹಿರಿಯರಾದ ಶ್ರೀಮಾನ್ ಪಟ್ಟಾಭಿರಾಮ್‌ರವರಿಗೆ ಅತಿ ವಿನಯದಿಂದ ಅರಿಕೆಮಾಡಿಕೊಳ್ಳುತ್ತೇನೆ. ಎರಡನೆಯದಾಗಿ, ಧ್ಯೇಯ ಮತ್ತು ಕೊಟ್ಟ ಸಲಹೆಗಳು ಕಾರ್ಯರೂಪಕ್ಕೆ ಬರುವ ರೀತಿಯಲ್ಲಿ ಕಾಣಲಿಲ್ಲ ಎಂದು ಹೇಳುತ್ತಾ ದೊಡ್ಡ ದೊಡ್ಡ ಶಬ್ದಗಳನ್ನು ಉಪಯೋಗಿಸಿದರು. ಅದು ಬರಿ ಶಬ್ದದಿಂದ, ಸಾಹಿತ್ಯದಿಂದ ಕೂಡಿದ್ದೇ ಹೊರತು ನಿಜವಾದ ಯೋಜನೆ ಏನು, ಹೇಗೆ ಕೆಲಸ ನಡೆಸಬೇಕು ಎಂಬುದು ಸಭೆಯ ಮುಂದೆ ಬರಲಿಲ್ಲ. ಇನ್ನೊಂದು ಅವಕಾಶ ಉಪಯೋಗಿಸಿಕೊಂಡು ಅದನ್ನು ಸಭೆಯ ಮುಂದೆ ತರಬೇಕೆಂದು ಹೇಳುತ್ತೇನೆ.

(Sri K. V. Shankar Gowda rose—)

Sri A. BHEEMAPPA NAIK.—Does not the Hon'ble Minister want at least two minutes to answer ?

Mr. SPEAKER.—There will be no time. The Hon'ble Minister cannot answer.

*ಶ್ರೀ ಕೆ. ವಿ. ಶಂಕರಗೌಡರು.—ಗ್ರಾಮಾಭಿವೃದ್ಧಿ ವಿಚಾರ ಮಾತನಾಡುವಾಗ ಅನೇಕ ವಿಧವಾದ ಭಾವನೆಗಳು ಇರುವುದು ಸಹಜ. ಏಕೆಂದರೆ ಈ ದಿವಸ ನಮ್ಮ ಹಳ್ಳಿಗಳಲ್ಲಿರತಕ್ಕ ಶೋಚನೀಯ ಪರಿಸ್ಥಿತಿ, ಅಲ್ಲಿರತಕ್ಕ ಜೀವನದ ಮಟ್ಟ ಇವುಗಳನ್ನೆಲ್ಲಾ ನೆನೆದು ಯಾವ ರೀತಿ ಅಭಿವೃದ್ಧಿ ಪಡಿಸಬೇಕು ಎನ್ನುವುದಕ್ಕೆ ವಿಧ ವಿಧವಾದ ಅಭಿಪ್ರಾಯಗಳು ಮತ್ತು ವಿಧವಿಧವಾದ ಭಾವೋದ್ರೇಕ ಮನಸ್ಸಿನಲ್ಲಿ ಬರುವುದು ಸಹಜ ಇದನ್ನು ಅರಿತು ಹಳ್ಳಿ ಜೀವನ ಸುಖಮಯ

(ಶ್ರೀ ಶಂಕರಲಿಂಗೇ ಗೌಡರು)

ವಾಗಬೇಕು, ಹಳ್ಳಿ ಜೀವನಕ್ಕೆ ನವಚೈತನ್ಯ ವೊದಗುವಂತೆ ಮಾಡಬೇಕು ಎಂದರೆ ಪ್ರತಿಯೊಂದು ಹಳ್ಳಿಯೂ ಸ್ವಪರಿಪೂರ್ಣತೆಯಿಂದ ಕೂಡಿದಂಥ ಒಂದು ಪ್ರಜಾಪ್ರಭುತ್ವ ಸಂಸ್ಥೆ ಆಗಬೇಕೆಂದು ಮಹಾತ್ಮಾ ಗಾಂಧಿಜಿಯವರು ಹೇಳಿದರು. ಹಳ್ಳಿ ಪ್ರತಿಯೊಂದು ವಿಚಾರದಲ್ಲೂ ಸ್ವಪರಿಪೂರ್ಣವಾಗಿರಬೇಕು. ಹಳ್ಳಿಗೆ ಬೇಕಾದ ಆಹಾರ, ಹಳ್ಳಿಗೆ ಬೇಕಾದ ಬಟ್ಟೆ, ಹಳ್ಳಿಯ ನಿತ್ಯ ಜೀವನಕ್ಕೆ ಉಪಯುಕ್ತವಾದ ಎಲ್ಲಾ ವಿಚಾರಗಳಲ್ಲೂ ಕೂಡ ಸ್ವಪರಿಪೂರ್ಣವಾದ ಪ್ರಜಾಪ್ರಭುತ್ವವನ್ನೊಳಗೊಂಡ ಸಂಸ್ಥೆ ಹಳ್ಳಿಯಾಗಿರಬೇಕೆಂದು ಮಹಾತ್ಮಾ ಗಾಂಧಿಯವರು ಒಂದು ಗುರಿಯನ್ನಿಟ್ಟರು. ಆ ಗುರಿಯನ್ನು ಸಾಧಿಸಬೇಕಾದರೆ ಈಗ ಹಳ್ಳಿಗಳಲ್ಲಿರತಕ್ಕ ವಾತಾವರಣವೇನಿದೆ, ಸಹಜ ಪರಿಸ್ಥಿತಿಯೇನಿದೆ ಎಂಬ ದೃಷ್ಟಿಯಿಂದ ಹೇಳುವುದಾದರೆ, ಇದು ಎಂಥ ಮಹತ್ಕಾರ್ಯ, ಇದನ್ನು ಸಾಧಿಸುವುದಕ್ಕೆ ಎಷ್ಟು ವರ್ಷಗಳು ಬೇಕಾಗಬಹುದು ಎಂಬುದನ್ನು ನಾವು ಊಹಿಸುವುದಕ್ಕೆ ಸಾಧ್ಯವಿದೆ. ಅದು ಹಳ್ಳಿಗಳಲ್ಲಿರತಕ್ಕವರಿಗೆ ಗೊತ್ತಾಗುತ್ತದೆ. ಇದು ಅಷ್ಟು ಸುಲಭ ಸಾಧ್ಯದ ಕಾರ್ಯವಲ್ಲ. ಏಕೆಂದರೆ, ಹಳ್ಳಿ ಜನರ ತಿಳಿವಳಿಕೆಯ ಮಟ್ಟ ಬಹಳ ಕಡಮೆಯಾಗಿದೆ. ಅವರನ್ನು ಒಂದು ಪ್ರಗತಿದಾಯಕ ಮಾರ್ಗದಲ್ಲಿ ತೆಗೆದುಕೊಂಡು ಹೋಗಬೇಕೆಂದರೆ, ರಾಮಾಶ್ವಮೇಧಯಾಗ ಮಾಡಿದ ಹಾಗಾಗುತ್ತದೆ. ಹಿಂದೆ ಯಾವ ಒಂದು ವಾತಾವರಣ, ಯಾವ ಒಂದು ಧಾರ್ಮಿಕ ಬುದ್ಧಿ ಜನರಲ್ಲಿ ಇತ್ತೋ ಅದು ಈಗ ಬಹುಮಟ್ಟಿಗೆ ನಶಿಸಿಹೋಗಿದೆ. ಅದರಲ್ಲೂ ಕೂಡ, ದ್ವೇಷ ಈರ್ಷೆ, ಅಸೂಯೆಗಳು ಹೆಚ್ಚಿ ಹಳ್ಳಿಯ ಜೀವನವೇ ಕಲಕಿಹೋಗಿದೆ. ಅದನ್ನು ಒಂದು ಗೂಡಿಸಿ ಒಂದು ಪ್ರಗತಿದಾಯಕ ಮಾರ್ಗದಲ್ಲಿ ತೆಗೆದುಕೊಂಡು ಹೋಗಬೇಕಾದರೆ ಕಷ್ಟವಾಗುತ್ತದೆ. ಇದನ್ನು ಯೋಚನೆಮಾಡಬೇಕು. ಹಳ್ಳಿಗಳನ್ನು, ಮಹಾತ್ಮಾ ಗಾಂಧೀಜಿಯವರು ಅಪ್ಪಣೆಕೊಡಿಸಿವ ಹಾಗೆ, ಒಂದು ಮಾರ್ಗದಲ್ಲಿ ತೆಗೆದುಕೊಂಡು ಹೋಗಬೇಕು ಎಂಬ ಒಂದು ದೊಡ್ಡ ಪ್ರಶ್ನೆ, ವಿಶಾಲವಾದ ಪ್ರಶ್ನೆ, ಈ ದಿವಸ ಸಭೆಯ ಮುಂದೆ ಬಂದಿದೆ. ಹಳ್ಳಿಗಳಲ್ಲಿ ಪ್ರತಿ ಸಂಸಾರದ ಸಾಧಾರಣ ಉಪಯೋಗಕ್ಕೆ ದಿನೇ ದಿನೇ ಬೇಕಾಗತಕ್ಕಂಥ ಯಾವ ಯಾವ ಕೆಲಸಕಾರ್ಯಗಳನ್ನು ಮಾಡಬೇಕಾಗಿದೆ ಎಂಬ ಸಂಬಂಧದಲ್ಲಿ ಕೆಲವು ವಿಷಯಗಳನ್ನೊಳಗೊಂಡ ಪ್ರಶ್ನೆ ನಮ್ಮ ಸಭೆಯ ಮುಂದಿದೆ. ಹಳ್ಳಿ ಜೀವನ ಮತ್ತು ಹಳ್ಳಿಯ ಪ್ರಗತಿಯನ್ನು ಎಷ್ಟರಮಟ್ಟಿಗೆ ಪುನರ್‌ವ್ಯವಸ್ಥೆಗೊಳಿಸಬೇಕೆಂಬ ವಿಷಯ ಈವೊತ್ತಿನ ವಿಷಯವಲ್ಲ. ಹಳ್ಳಿಗಳಲ್ಲಿ ಸಾಧಾರಣವಾಗಿ ನೀರು ಸಿಕ್ಕುವ ವ್ಯವಸ್ಥೆ, ಹಳ್ಳಿಗಳಿಗೆ ಬೇಕಾದ ರಸ್ತೆಗಳ ವ್ಯವಸ್ಥೆ, ಹಳ್ಳಿಯ ಗ್ರಾಮ ಪಾಕೀಜು ವ್ಯವಸ್ಥೆ. ಈ ಮೂರು ವಿಷ್ಯಯಗಳಲ್ಲಿ ಸರ್ಕಾರ ಏನು ಕೆಲಸಕಾರ್ಯಗಳನ್ನು ಮಾಡಬೇಕಾಗಿದೆ. ಅಥವಾ ಮಾಡದೆ ಮುಂದೆ ಯಾವುದಾದರೂ ಏಜೆನ್ಸಿ ಕ್ರಿಯೇಟ್ ಮಾಡಿದರೆ ಅದು ಎಷ್ಟರಮಟ್ಟಿಗೆ ಕಾರ್ಯ ಮಾಡಬೇಕು. ಅದಕ್ಕೆ ಎಷ್ಟು ದುಡ್ಡು ಬೇಕು ಮತ್ತು ಈಗಾಗಲೇ ಸ್ಥಾಪಿಸಿರತಕ್ಕ ಏಜೆನ್ಸಿ ಎಷರಮಟ್ಟಿಗೆ ಕೆಲಸಮಾಡಿದೆ,ಎಂಬುದು ಈಹೊತ್ತು ಸಭೆಯ ಮುಂದೆ ಚರ್ಚೆಗಿರತಕ್ಕ ವಿಷಯ. ಮೂಲಭೂತವಾಗಿ ಯಾವ ರೀತಿ ಬದಲಾವಣೆಯಾಗಬೇಕು, ಹಳ್ಳಿಗಳಲ್ಲಿ ಆರ್ಥಿಕ ಸ್ಥಿತಿಯನ್ನು ಯಾವ ರೀತಿ ಕ್ರಾಂತಿ ಕಾರಕವಾದ ಬದಲಾವಣೆಯ ಮೂಲಕ ಪುನರ್ವ್ಯವಸ್ಥೆಗೊಳಿಸಬೇಕು ಎಂದರೆ, ಬಹುಶಃ ಅದನ್ನು ಅಷ್ಟು ಸುಲಭವಾದ ರೀತಿಯಲ್ಲಿ ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬರುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಈ ಮೂರು ವಿಚಾರಗಳಲ್ಲಿ ಸರ್ಕಾರದವರು ಕೊಟ್ಟಿರತಕ್ಕ ಖರ್ಚು ಎಷ್ಟು, ಸರ್ಕಾರ ಏಜೆನ್ಸಿ ಕ್ರಿಯೇಟ್ ಮಾಡಿದ್ದರೆ ಈ ಏಜನ್ಸಿ ಎಷ್ಟು ಮಟ್ಟಿಗೆ ಮೂರು ನಾಲ್ಕು ವರ್ಷಗಳಿಂದ ಕೆಲಸ ಮಾಡಿದೆ, ಸರಿಯಾಗಿ ಕೆಲಸ ಮಾಡಿದೆಯೇ ಇಲ್ಲವೇ, ಎಂಬುದು ನಮ್ಮ ಮುಂದೆ ಬಂದಿರತಕ್ಕ ಪ್ರಶ್ನೆ. ಅದನ್ನು ಚರ್ಚೆಮಾಡಬೇಕಾಗಿದೆ. ಮಾನ್ಯ ಸದಸ್ಯರನೇಕರು ವಿಧ ವಿಧವಾದ ಅಭಿಪ್ರಾಯಗಳನ್ನು ಕೊಟ್ಟರು. ಕಾಲಾವಕಾಶ

ಸ್ವಲ್ಪವೇ ಇರುವುದರಿಂದ ದೀರ್ಘವಾಗಿ ಚರ್ಚೆ ಮಾಡುವುದಿಲ್ಲ. ಗ್ರಾಮಾಭಿವೃದ್ಧಿ ಸಂಸ್ಥೆಗಳ ವಿಚಾರ ಮಾತನಾಡುವುದಕ್ಕಿಂತ ಮುಂಚೆ ಅದನ್ನು ಯಾವ ಸನ್ನಿವೇಶದಲ್ಲಿ ಸರ್ಕಾರದವರು ಪ್ರಾರಂಭಮಾಡಿದರು ಎಂಬುದನ್ನು ಗಮನಿಸಬೇಕು. ಮಾನ್ಯ ಸದಸ್ಯರಿಗೆ ಗೊತ್ತಿರಬಹುದು, ಮಾಡಲ್ ವಿಲೇಜ್ ಎಂದು ಮಾಡಿದರು. ಕೆಲವು ಕಾಲದನಂತರ ಅದು ಪ್ರಯೋಜನವಿಲ್ಲವೆಂದು ಸರ್ಕಾರದವರು ಕೈಬಿಟ್ಟರು. ಅದಾದ ಮೇಲೆ ಗುಂಡಪ್ಪಗೌಡರು ಮಂತ್ರಿಗಳಾಗಿದ್ದಾಗ ಹೋಬಳಿವರ್ಕ್ಸ್ ಎಂಬುದಾಗಿ ಒಂದು ಸ್ಕೀಮು ತಂದರು. ಹೋಬಳಿ ವರ್ಕರ್ಸ್ ಪೈಕಿ ಕೆಲವರು ಚೆನ್ನಾಗಿ ಕೆಲಸ ಮಾಡಿದರು, ಕೆಲವರು ಮಾಡಲಿಲ್ಲ. ರೆಡ್‌ಟೇಪಿಸಂ ಹೆಚ್ಚಿ ಸುಸೂತ್ರವಾಗಿ ಅದಷ್ಟು ಜಾಗ್ರತೆ ಚೆನ್ನಾಗಿ ಕೆಲಸ ಕಾರ್ಯಗಳು ಆಗದೆ ಅದಕ್ಕೆ ಸರಿಯಾದ ಒಂದು ಏಜನ್ಸಿ ಬೇಕೆಂದು ಯೋಚನೆಮಾಡಿ ಸರ್ಕಾರದವರು ಈ ಗ್ರಾಮಾಭಿವೃದ್ಧಿ ಸಮಿತಿಗಳನ್ನು ರಚಿಸಿದರು. ಗ್ರಾಮಾಭಿವೃದ್ಧಿ ಸಮಿತಿ ಎಷ್ಟರಮಟ್ಟಿಗೆ ಕೆಲಸ ಮಾಡಿದೆಯೆಂದು ಯೋಚನೆ ಮಾಡುವಾಗ ಎಷ್ಟು ಕೆಲಸ ಆಗಿದೆ, ಎಷ್ಟು ಬಾವಿಗಳಾದವು, ಎಷ್ಟು ರಸ್ತೆಗಳಾಗಿವೆ ಎಂಬ ಬಗ್ಗೆ ತೀವ್ರ ಉತ್ಪ್ರೇಕ್ಷೆ ಮಾಡಿದ್ದಾರೆ ಎಂದು ಹೇಳುವುದು ಅಷ್ಟು ಸೂಕ್ತವಲ್ಲ. ಅದನ್ನು ಸ್ಥೂಲವಾಗಿ ಪರೀಕ್ಷೆ ಮಾಡಿದರೆ ಬಹಳ ಕೆಲಸ ಮಾಡಿದೆ ಎಂಬುದು ಗೊತ್ತಾಗುತ್ತದೆ. ಏಕೆಂದರೆ, ಸಮಿತಿಗಳು ಕೆಲಸ ಪ್ರಾರಂಭ ಮಾಡುವುದಕ್ಕಿಂತ ಮುಂಚೆ ಒಂದೊಂದು ಬಾವಿಗಳ ಕೆಲಸ ಎಷ್ಟೋ ವರ್ಷಗಳಿಂದ ಆಗದೇ ನಿಂತೇ ಹೋಗಿದ್ದುದನ್ನು ಅವರು ಕೆಲಸ ಮಾಡಿಪೂರೈಸಿದ್ದಾರೆ. ಅಂಥ ನಿದರ್ಶನಗಳನ್ನು ನಾನು ಮಾನ್ಯ ಸದಸ್ಯರ ಗಮನಕ್ಕೆ ತರುವುದಾದರೆ, 10 ವರ್ಷಗಳಿಂದ ಇನ್ನೂ ಮಂಜೂರೇ ಆಗಿರದಿರುವಂಥವುಗಳನ್ನು ಈ ಸಮಿತಿ ಬಂದ ತಕ್ಷಣ ಅವುಗಳನ್ನೆಲ್ಲಾ ವಿಚಾರಮಾಡಿ ಮಂಜೂರಾತಿ ತೆಗೆದುಕೊಂಡು ಕಾರ್ಯಗತಮಾಡಲಾಯಿತು. ಸರ್ಕಾರಿ ಅಧಿಕಾರಿಗಳ ಸಹಕಾರದಿಂದ ಒತ್ತಾಯ ಮಾಡುವುದರಿಂದ, ಅದೇ ರೀತಿ ಕೆಲಸಗಳು ಜಾಗ್ರತೆ ಆಗುವಂತೆ ಕಾರ್ಯಕ್ರಮ ಹಾಕಿಕೊಂಡು ಸುಸೂತ್ರವಾಗಿ ಕೆಲಸ ಕಾರ್ಯಗಳನ್ನು ಮಾಡಿಕೊಂಡು ಬಂದಿದ್ದೇವೆ. ಈ ಸಮಿತಿಗಳನ್ನು ಪ್ರಾರಂಭಮಾಡುವುದಕ್ಕೆ ಸರ್ಕಾರದ ಒತ್ತಾಯ ಏಕೆಂದರೆ, ಹಿಂದಿನಿಂದ, ಹಿರಿಯ ಸದಸ್ಯರಾದ ಪಟ್ಟಾಭಿ ರಾರ್ಮರವರು ಹೇಳಿದಹಾಗೆ, ರೆಡ್‌ಟೇಪಿಸಂ ಇತ್ತು, ಅದ್ದರಿಂದ ಕೆಲಸ ವಿಳಂಬವಾಗುತ್ತಾ ಇತ್ತು. ಕೆಲಸಕಾರ್ಯಗಳು ನೆರವೇರುವುದಕ್ಕೆ ಸಾರ್ವಜನಿಕರ ಒತ್ತಾಯ ಇರಲಿ ಎಂಬುದು ಒಂದು ದೃಷ್ಟಿ. ಮತ್ತು ನಮ್ಮ ದೇಶ ಪ್ರಜಾಪ್ರಭುತ್ವ ತತ್ವ ಇಟ್ಟುಕೊಂಡಿರುವ ದೇಶ. ಅದು ಯಶಸ್ವಿಯಾಗಬೇಕಾದರೆ ಪ್ರಜಾಪ್ರಭುತ್ವ ತತ್ವವನ್ನು ಅರ್ಥಮಾಡಿಕೊಳ್ಳುವ ಶಕ್ತಿ ಜೀರ್ಣಮಾಡಿಕೊಳ್ಳತಕ್ಕ ಸಾಮರ್ಥ್ಯ ತಿಳುವಳಿಕೆ ಸಾರ್ವಜನಿಕರಿಗೆ ಇರಬೇಕು, ಮತ್ತು ಪ್ರಜಾಪ್ರಭುತ್ವದ ಮುಖಂಡರಾಗಿ ಕೆಲಸಮಾಡತಕ್ಕ ತರಬಿಯತ್ತು ಬೇಕು. ಆ ಸಂಸ್ಥೆ ಯಾವುದಾದರೂ ಆಗಿರಲಿ ಕಾಂಗ್ರೆಸ್‌ನವರು ಆಗಿರಬಹುದು, ಕಾಂಗ್ರೆಸ್‌ನವರು ಅಲ್ಲದೇ ಇರಬಹುದು, ಬೇರೆ ಇನ್ನಾವುದಾದರೂ ಪಾರ್ಟಿಯವರು ಇರಬಹುದು—ಪ್ರಜಾಪ್ರಭುತ್ವ ನಡೆಸಿಕೊಂಡು ಹೋಗುವ ರೀತಿಯಲ್ಲಿ ಜನಗಳನ್ನು ತರಬೇತು ಮಾಡುವ ಕೆಲಸ ಮತ್ತು ವ್ಯವಸ್ಥೆಗೆ ಅವಕಾಶಬೇಕು. ಈ ಸಂಸ್ಥೆಯಲ್ಲಿ ಅದೂಕೂಡ ಸಿಕ್ಕುತ್ತದೆ. ಜನಗಳ ಕೆಲಸವನ್ನು ಕಷ್ಟ ನಿಷ್ಠೂರವನ್ನು ವಿಚಾರಮಾಡಿ ಸರಿಯಾದ ರೀತಿಯಲ್ಲಿ ಒಂದುಕಾರ್ಯಕ್ರಮ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ ಎಂಬ ದೃಷ್ಟಿಯಿಂದ ಈ ಸಮಿತಿಯನ್ನು ಪ್ರಾರಂಭ ಮಾಡಿದರು. ಸಮಿತಿಯವರು ಬೇಕಾದಷ್ಟು ಕೆಲಸ ಕಾರ್ಯಗಳನ್ನು ಬಹಳ ಯಶಸ್ವಿಯಾಗಿ ಮಾಡಿದ್ದಾರೆ. ಮಾನ್ಯ ಸದಸ್ಯರು ಹೇಳಿದಹಾಗೆ ಸಹಸ್ರಾರು ರೂಪಾಯಿಗಳ ಕೆಲಸ ಕಾರ್ಯಗಳನ್ನು ಹಳ್ಳಿಗಳಲ್ಲಿ ಮಾಡಿಸಿದ್ದಾರೆ. ಹಳ್ಳಿಗಳಲ್ಲಿ ನವಚೈತನ್ಯವುಂಟಾಗುವಂತೆ ಪ್ರಚಾರ ಕಾರ್ಯ ಮಾಡಿದ್ದಾರೆ. ಈ ರೀತಿ ಎಲ್ಲರೂ ಮಾಡುವುದಕ್ಕೆ ಸಾಧ್ಯವಿಲ್ಲ. ಅದ್ದರಿಂದ ಎಲ್ಲಾ ದೃಷ್ಟಿಯಿಂದಲೂ ಸಾಕಾದಷ್ಟು ಕೆಲಸಕಾರ್ಯಗಳನ್ನು ತೀವ್ರ

(ಶ್ರೀ ಕೆ. ವಿ. ಶಂಕರಗೌಡರು)

ವಾಗಿ ಮಾಡಿದ್ದಾರೆ ಎಂದು ನಾನು ಹೇಳುತ್ತೇನೆ. ಮಾನ್ಯ ಸದಸ್ಯರೊಬ್ಬರು ರೂರಲ್ ಡೆವಲಪ್‌ಮೆಂಟ್ ಪ್ಲ್ಯಾನ್‌ಗಳನ್ನು ಅಧ್ಯಕ್ಷರೇ ಉಪಯೋಗಿಸಿಕೊಂಡರು ಎಂದು ಆಕ್ಷೇಪಿಸಿದರು. ಈ ಟೀಕೆಗೆ ನಾನು ವಿಷಾದವನ್ನು ವ್ಯಕ್ತಪಡಿಸಬೇಕಾಗಿದೆ. ಜವಾಬ್ದಾರಿಯನ್ನು ತಿಳಿದುಕೊಂಡಿದ್ದ ಯಾರೇ ಆಗಲಿ ಸರ್ಕಾರಿ ಸ್ವತ್ತನ್ನು ಅಷ್ಟು ಮಟ್ಟಿಗೆ ದುರುಪಯೋಗಪಡಿಸಲಾರರು ಎಂದು ಹೇಳುತ್ತೇನೆ. ನಾನೂ ಒಬ್ಬ ಚೇರ್ಮನ್ ಆದ್ದರಿಂದ ನಾನಂತೂ ಆ ರೀತಿ ಪ್ಲ್ಯಾನ್ ಉಪಯೋಗಿಸಿಲ್ಲ ಎಂಬ ಭರವಸೆಯನ್ನು ಕೊಡಲಿಕ್ಕೆ ಇಚ್ಛಿಸುತ್ತೇನೆ. ಅದನ್ನು ಅಷ್ಟು ಬೇಜವಾಬ್ದಾರಿಯಿಂದ ಎಲ್ಲರೂ ಉಪಯೋಗಿಸಿದ್ದಾರೆ ಎಂದು ಹೇಳುವುದು ಸೂಕ್ತವಾಗಲಾರದು ಎಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಕೊನೆಯದಾಗಿ, ಪ್ರಯೋಗಿಕವಾಗಿ ಈ ಸಂಸ್ಥೆ ಪ್ರಾರಂಭಮಾಡಿದರೂ ಯಾವ ರೀತಿ ಕೆಲಸ ಮಾಡಿದೆಯೆಂಬುದನ್ನು ನೋಡಬೇಕು. ಇನ್ನು ಮುಂದೆ ಈ ಕೆಲಸಕಾರ್ಯಗಳನ್ನು ಮಾಡುವುದಕ್ಕೆ ಬೇರೆ ಸಂಸ್ಥೆಯನ್ನು ರಚಿಸತಕ್ಕ ಪರಿಸ್ಥಿತಿಯಲ್ಲಿ ಸರ್ಕಾರ ಇದೆ. ಆದ್ದರಿಂದ ಈ ಸಮಿತಿಗಳ ಉಪಯೋಗ ಮುಂದೆ ಬೇಕಾಗಿಲ್ಲವೆಂದು ಕಾಣುತ್ತದೆ. ಈ ಸಮಿತಿಗಳು ಹೋದರೂ ಹೋಗಬಹುದು. ಇದುವರೆಗೂ ಸಮಿತಿ ಪರಿಶುದ್ಧವಾದ ಹೃದಯದಿಂದ ಅನೇಕ ಉಪಯುಕ್ತ ಕೆಲಸ ಕಾರ್ಯಗಳನ್ನು ಮಾಡಿದೆ ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Mr. SPEAKER.—If the Hon'ble Minister so pleases, he can reply till five.

Sri. T. CHANNIAH.—Within one minute ?

Mr. SPEAKER.—Yes.

Sri T. CHANNIAH.—Mr. Speaker, Sir, I have heard the various arguments made by the Hon'ble Members of this House and I wish to state that Government have taken all measures to see that large amounts have been allotted to the various works of rural development. If I were to say how they have been allotted and to what extent in various years, it will take a lot of time. Therefore I do not want to deal with all those matters. As Hon'ble Members can see, the rural development scheme has undergone a series of changes and has finally emerged into what is called a new Village Panchayets and District Boards Act..........

5 P.M.

Mr. SPEAKER.—The question is :

"That the respective sums not exceeding the amounts shown in the list of Demands circulated to Members be granted to complete the sums necessary to defray the charges which will come in course of payment during the year ending the 31st day of March 1953 in respect of Demands Nos. 23, 24, 25, 26, 27 and 28.

The motion was adopted.

(As directed by the Speaker, the Motion for Demand for grants which were adopted by the Assembly are re-produced below.)

Demand No. 23. Rural Development.

40. A—Rural Development.

"That a sum not exceeding Rs. 30,62,000 be granted to the Government to complete the sum necessary to defray the charges which will come in course of payment during the year ending 31st day of March 1953, in respect of Rural Development."

Demand No. 24—Veterinary.

41. Veterinary charges.

"That a sum not exceeding Rs. 16,28,000 be granted to the Government to complete the sum necessary to defray the charges which will come in course of payment during the year ending 31st day of March 1953, in respect of 'Veterinary charges'."

Demand No. 25.—Co-operation.

42. Co-operation.

"That a sum not exceeding Rs. 4,68,000 be granted to the Government to complete the sum necessary to defray the charges which will come in course of payment during the year ending 31st day of March 1953, in respect of 'Co operation'."

Demand No. 26.—Industries and Supplies.

43. Industries and Supplies (Except Sericulture).

"That a sum not exceeding Rs. 3,52,33,900 be granted to the Government to complete the sum necessary to defray the charges which will come in course of payment during the year ending 31st day of March 1953, in respect of Industries and Supplies (Except Sericulture)'."

Demand No. 27.—Sericulture.

43 (a)—4. Sericulture.

"That a sum not exceeding Rs. 5,76,100 be granted to the Government to complete the sum necessary to defray the charges which will come in course of payment during the year ending 31st day of March 1953, in respect of 'Sericulture'."

Demand No. 28.—Miscellaneous Departments.

47. Miscellaneous Departments.

"That a sum not exceeding Rs. 8,71,000 be granted to the Government to complete the sum necessary to defray the charges which will come in course of payment during the year ending 31st day of March 1953, in respect of 'Miscellaneous Departments'."

MR. SPEAKER.—The House will now stand adjourned and meet tomorrow at 12 Noon.

The House adjourned at Five Minutes past Five of the Clock to meet again at 12 Noon on Thursday, the 10th July 1952.

WD 2302—GPB—500—25-11-1952